# ಯುಗರಶ್ಮಿ

★ ಸ್ತ್ರೀ—ಇಸ್ಲಾಮಿಗೆ ಮುಂಚೆ ಮತ್ತು ನಂತರ

★ ಬುರ್ಖಾ ಧರಿಸಿ ಆಕ್ಸ್‌ಫರ್ಡ್‌ನಲ್ಲಿ

★ ಯೇಸುಕ್ರಿಸ್ತರ ಪುನರುತ್ಥಾನ ಮತ್ತು ಸ್ವರ್ಗಾರೋಹಣ

★ ಸಂಯುಕ್ತ ರಾಷ್ಟ್ರ ವಿಚಾರಗೋಷ್ಠಿಯಲ್ಲಿ ಅಹ್ಮದಿಯಾ ಬಗ್ಗೆ

★ ಝಿಯಾಗೆ ಒಂದು ಮುನ್ನೆಚ್ಚರಿಕೆ

★ 'ಕಲಿಮ'ದೊಡನೆ ವೈರವೇ?

★ ಸತ್ಯಪ್ರವಾದಿ ಮತ್ತು ಮಿಥ್ಯಪ್ರವಾದಿ

★ ಖುರ್‌ಆನ್ ನಿಷೇಧ

ತ್ರೈಮಾಸಿಕ

ಮೇ 1985

ಬೆಲೆ: ರೂ. 1-00

ಅಲ್ಲಾಹನ ಮಸೀದಿಗಳಲ್ಲಿ ಅವನ ನಾಮ ಸ್ಮರಿಸುವುದನ್ನು ತಡೆಯುವ ಮತ್ತು ಅವುಗಳನ್ನು ಹಾಳುಗೆಡಹಲು ಶ್ರಮಿಸುವವನಿಗಿಂತ ದೊಡ್ಡ ಅಕ್ರಮಿ ಯಾರು?

—ಪವಿತ್ರ ಖುರ್‌ಆನ್ (2:115)

# ಯುಗರಶ್ಮಿ ತ್ರೈಮಾಸಿಕ

10-23-1008, ಅನ್ಸಾರಿ ರೋಡ್, ಬಂದರ್, ಮಂಗಳೂರು-575 001

ಬಿಡಿಪ್ರತಿ: ರೂ. 1-00 ವಾರ್ಷಿಕ ಚಂದಾ: ರೂ. 4-00

ಅಂಚೆ ಮೂಲಕ: ರೂ. 5-00


**ವಿಷಯ ಸೂಚಿಕೆ :** ಪುಟ


* ರಮಝಾನ್ ... 1
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... 2
* ಸ್ತ್ರೀ–ಇಸ್ಲಾಮಿಗೆ ಮುಂಚೆ ಮತ್ತು ನಂತರ ... 3
* ಬುರ್ಖಾ ಧರಿಸಿ ಆಕ್ಸ್‌ಫರ್ಡ್‌ನಲ್ಲಿ ... 10
* ಯೇಸುಕ್ರಿಸ್ತರ ಪುನರುತ್ಥಾನ ಮತ್ತು ಸ್ವರ್ಗಾರೋಹಣ ... 13
* ಸಂಯುಕ್ತ ರಾಷ್ಟ್ರ ವಿಚಾರ ಗೋಷ್ಠಿಯಲ್ಲಿ ಅಹ್ಮದಿಯಾ ಬಗ್ಗೆ .... 16
* ರಿಝಿಯಾಗೆ ಒಂದು ಮುನ್ನೆಚ್ಚರಿಕೆ ... 25
* 'ಕಲಿಮ'ದೊಡನೆ ವೈರವೇ? ... 27
* ಸತ್ಯ ಪ್ರವಾದಿ ಮತ್ತು ಮಿಥ್ಯ ಪ್ರವಾದಿ ... 30
* ಅಹ್ಮದಿಯಾ ವಾರ್ತೆಗಳು ... 35
* ಚುಟುಕು-ಚೂರು ... 37
* ಖುರ್‌ಆನ್ ನಿಷೇಧ ... 38



## Statement about Ownership and other particulars about the Newspaper YUGARASHMI Quarterly

FORM IV [See Rule 8]

| | | |
|---|---|---|
| 1 | Place of publication | Mangalore |
| 2 | Periodicity of its publication | Quarterly |
| 3 | Printer's name | U. Ramesh Anchan |
| | Whether citizen of India? | Yes |
| | Address | Karavali Printers, Azizuddin Road Bunder, Mangalore-575 001 |
| 4 | Publisher's name | Muhammad Yusuf |
| | Whether citizen of India? | Yes |
| | Address | 10-23-1008, Ansari Road, Bunder, Mangalore-575 001. |
| 5 | Editor's name | Muhammad Yusuf |
| | Whether citizen of India? | Yes |
| | Address | 10-23-1008, Ansari Road, Bunder, Mangalore-575 001. |
| 6 | Names and addresses of individuals who own the newspaper and partners or shareholders holding more than one percent of the capital | Jamath Ahmadiyya, 10-23-1008, Ansari Road, Bunder, Mangalore-575 001. |

I, Muhammad Yusuf hereby declare that the particulars given above are true to the best of my knowledge and belief.

Dated, 1-4-1985 Sd/- Muhammad Yusuf

بِسْمِ اللّٰهِ الرَّحْمٰنِ الرَّحِيْمِ

نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ


# ಯುಗರಶ್ಮಿ

ಸಂಪಾದಕ: ಮುಹಮ್ಮದ್ ಯೂಸುಫ್

| ಸಂಪುಟ: 10 | ಎಪ್ರಿಲ್-ಮೇ 1985 / ಶಹಾದತ್-ಹಿಜ್ರತ್ 1364 | ಸಂಚಿಕೆ: 3, 4 |
|---|---|---|


# ರಮಝಾನ್

"ಆಹಾರವನ್ನು ಕಡಿಮೆ ಮಾಡುವುದು, ಹಸಿವನ್ನು ಸಹಿಸುವುದು ಎಂಬುದು ಆತ್ಮ ಸಂಸ್ಕಾರಕ್ಕೂ ಆತ್ಮೋನ್ನತಿಗೂ ಅತ್ಯಾವಶ್ಯಕವಾದೊಂದು ಕರ್ಮವಾಗಿದೆ. ಅದು ಆತ್ಮದರ್ಶನ ಶಕ್ತಿಯನ್ನು ಪೋಷಿಸುತ್ತದೆ. ಮನುಷ್ಯನು ಜೀವಿಸುವುದು ಭಕ್ಷ್ಯಪೇಯಗಳಿಂದ ಮಾತ್ರವಲ್ಲ. ಈ ಜೀವಿತದ ನಂತರ ಅವನಿಗೆ ಮತ್ತೊಂದು ಜೀವಿತ ಸಹ ಇದೆ. ಶಾಶ್ವತವಾದ ಪಾರತ್ರಿಕ ಜೀವಿತವನ್ನು ನಿರ್ಲಕ್ಷ್ಯ ಮಾಡುವುದರಿಂದ ಮನುಷ್ಯನು ದೇವರಿಂದ ಬೇರ್ಪಟ್ಟು ಅವನ ಅಸಂತೋಷಕ್ಕೆ ಈಡಾಗುತ್ತಾನೆ.

"ವ್ರತಾನುಷ್ಠಾನದ ಉದ್ದೇಶ ಒಂದು ಕ್ಲಪ್ತಕಾಲದ ವರೆಗೆ ಪಾನಾಶನಾದಿಗಳನ್ನು ವರ್ಜಿಸಿ ಹಸಿವನ್ನು ಸಹಿಸುವುದು ಮಾತ್ರವಲ್ಲವೆಂದು ನೆನಪಿಡಬೇಕಾಗಿದೆ. ಎಲ್ಲಾ ವಿಧ ದೋಷಗಳಿಂದ ದೂರವಿದ್ದು ವ್ರತಾನುಷ್ಠಾನಿಯು ದೇವ ಸ್ಮರಣೆಯಲ್ಲಿ ಹೆಚ್ಚು ಕಾಲವನ್ನು ವ್ಯಯಿಸಬೇಕಾದುದು ಅತ್ಯಾವಶ್ಯಕ. ಹಝ್ರತ್ ಮುಹಮ್ಮದ್ ಪೈಗಂಬರ್ (ಸ.) ರಮಝಾನ್ ಮಾಸದಲ್ಲಿ ಬಹಳ ಹೆಚ್ಚು ದೈವಾರಾಧನೆಯಲ್ಲಿ ಮಗ್ನರಾಗಿರುತ್ತಿದ್ದರು. ಒಟ್ಟಾರೆ, ಉಪವಾಸ ಕಾಲದಲ್ಲಿ ಭಕ್ಷ್ಯಪೇಯಗಳಿಗೆ ಸಂಬಂಧಿಸಿದ ವಿಚಾರಗಳಿಂದ ವಿರಮಿಸಿ ಆ ಬಗೆಯ ಕಾರ್ಯಗಳನ್ನು ಉಪೇಕ್ಷಿಸಿ ಶ್ರದ್ಧೆಯನ್ನೆಲ್ಲಾ ಪರಮಾತ್ಮನ ಕಡೆಗೆ ಇರಿಸಬೇಕಾಗಿದೆ. ಭೌತಿಕವಾದ ಭಕ್ಷ್ಯವಸ್ತುಗಳು ದೊರೆತು ಆಧ್ಯಾತ್ಮಿಕ ಆಹಾರದ ಬಗ್ಗೆ ಚಿಂತಿಸದ ಮನುಷ್ಯನನ್ನು ಭಾಗ್ಯ ಹೀನನೆಂದೇ ಹೇಳಬಹುದು. ಆಹಾರವನ್ನು ಸೇವಿಸುವುದರಿಂದ ಶರೀರಕ್ಕೆ ಬಲವೂ ಓಜಸ್ಸೂ ಲಭಿಸುವಂತೆ ಆಧ್ಯಾತ್ಮಿಕ ಆಹಾರದ ಮೂಲಕ ಆತ್ಮಕ್ಕೆ ರಕ್ಷಣೆಯೂ ಆತ್ಮ ಶಕ್ತಿಗಳಿಗೆ ಚೈತನ್ಯವೂ ಲಭಿಸುತ್ತವೆ. ಸರ್ವ ವಿಧ ಸಫಲತೆಗಳ ಬಾಗಿಲು ದೈವಾನುಗ್ರಹದಿಂದ ತೆರೆಯಲ್ಪಡುವುದರಿಂದ ವಿಜಯ ಲಬ್ಧಿಗಾಗಿ ಅವನಿಂದಲೇ ನೆರವನ್ನು ಯಾಚಿಸಬೇಕಾಗಿದೆ."

—ಹಝ್ರತ್ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

## ನೀತಿನ್ಯಾಯ

1. ಒಬ್ಬ ನ್ಯಾಯಾಧಿಪತಿ ನೀತಿ ಪಾಲಿಸುವಾಗ ಅಲ್ಲಾಹನ ಕೈ ಆತನಿಗೆ ಬೆಂಬಲ ನೀಡುತ್ತದೆ. ದಾನ ಮಾಡುವವನು ದಾನ ನೀಡುವಾಗ ಅಲ್ಲಾಹನ ಕೈ ಆತನಿಗೆ ಬೆಂಬಲವೀಯುತ್ತದೆ.

2. ಶಿಕ್ಷೆ ವಿಧಿಸುವುದನ್ನು ಸಾಧ್ಯವಿದ್ದಷ್ಟು ಬಿಟ್ಟು ಬಿಡಲು ಶ್ರಮಿಸಬಹುದಾಗಿದೆ. ಆದರೆ ಶಿಕ್ಷೆಕೊಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡುವುದು ಯಾವ ಆಡಳಿತಾಧಿಕಾರಿಯೂ ಮಾಡಬಾರದು.

3. ಜನರನ್ನು ಸಾಧ್ಯವಾದಷ್ಟರ ಮಟ್ಟಿಗೆ ಶಿಕ್ಷಿಸದೆ ಬಿಡಲು ಪ್ರಯತ್ನಿಸಿರಿ. ಸಾಧ್ಯವಾದ ಎಲ್ಲಾ ವಾದಗಳ ಅನುಕೂಲತೆಗಳನ್ನು ಅವರಿಗೆ ನೀಡಬೇಕು. ಶಿಕ್ಷಿಸುವುದರಲ್ಲಿ ಪ್ರಮಾದವಾಗುವುದಕ್ಕಿಂತ ದಯೆದೋರುವುದರಲ್ಲಿ ಪ್ರಮಾದವುಂಟಾಗುವುದು ನ್ಯಾಯಾಧಿಪತಿಗೆ ಹೆಚ್ಚು ಉತ್ತಮ,

4. ಒಬ್ಬ ನ್ಯಾಯಾಧೀಶ ಶ್ರದ್ಧಾಪೂರ್ವಕ ಪ್ರಯತ್ನಿಸಿ ಸರಿಯಾದ ತೀರ್ಮಾನ ಕೈಗೊಂಡರೆ ಆತನಿಗೆ ಅಲ್ಲಾಹನಿಂದ ಎರಡು ಪಾಲು ಪ್ರತಿಫಲ ಲಭಿಸುತ್ತದೆ. ಆತನು ಶ್ರದ್ಧಾಪೂರ್ವಕ ಪ್ರಯತ್ನಿಸಿ ತೀರ್ಮಾನ ಕೈಗೊಳ್ಳುವಾಗ ತಪ್ಪಿಬಿದ್ದರೆ, ಆತನಿಗೆ ಒಂದು ಪಾಲು ಪ್ರತಿಫಲವಿದೆ.

5. ನಿಮ್ಮಲ್ಲಿ ಯಾರಾದರೂ ನ್ಯಾಯಾಧಿಪತಿಯಾಗಿ ನೇಮಿಸಲ್ಪಟ್ಟರೆ, ಕೋಪದಲ್ಲಿರುವಾಗ ತೀರ್ಪು ಕೊಡದಂತೆ ಜಾಗ್ರತೆವಹಿಸಬೇಕು. ಕಕ್ಷಿಗಳ ಮಧ್ಯೆ ಸಂಪೂರ್ಣ ಸಮಭಾವನೆ ಪಾಲಿಸಬೇಕು–ಪೀಠ ವ್ಯವಸ್ಥೆ, ನೋಟ ಮತ್ತು ಹಾವಭಾವಗಳಲ್ಲಿ ಕೂಡ.

6. ಒಂದು ತೀರ್ಪು ನೀಡಲು ಕೋರಿ ಇರ್ವರು ನಿಮ್ಮ ಬಳಿಗೆ ಬಂದರೆ ಅವರಿಬ್ಬರ ಅಹವಾಲುಗಳನ್ನು ಕೇಳಿದ ನಂತರ ಹೊರತು ನೀವು ತೀರ್ಮಾನವನ್ನು ಕೈಗೊಳ್ಳಬಾರದು.

7. ಸಾಕ್ಷಿ ಹೇಳಲು ಕರೆಯಲ್ಪಟ್ಟರೆ ಸಾಕ್ಷ್ಯವನ್ನು ಮರೆಯಾಗಿಡುವವನು ಸುಳ್ಳು ಸಾಕ್ಷಿ ಹೇಳಿದ ಹಾಗೆ.

(ಸರ್ ಮುಹಮ್ಮದ್ ಝುಫ್ರುಲ್ಲಾ ಖಾನ್ ಬರೆದ **Wisdom of the Holy Prophet** ಎಂಬ ಪುಸ್ತಕದಿಂದ ಆಯ್ದುದು.)


READ

**MINARET**

**AN ENGLISH QUARTERLY JOURNAL**

Devoted to the Cause of Islam

Annual Subscription : Rs. 12-00

Write to:

Manager
Minaret Accounting Section
14/346, Francis Road,
CALICUT-673003
(Kerala State)

# ಸ್ತ್ರೀ - ಇಸ್ಲಾಮಿಗೆ ಮುಂಚೆ ಮತ್ತು ನಂತರ

—ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್

ಮುಹಮ್ಮದ್ ಪೈಗಂಬರರ ಆವಿರ್ಭಾವದ ಮೊದಲು ಎಲ್ಲಾ ರಾಜ್ಯಗಳಲ್ಲಿ ಸ್ತ್ರೀಯರನ್ನು ಕೇವಲ ಗುಲಾಮರಂತೆ ಮತ್ತು ಚರಸೊತ್ತುಗಳಂತೆ ಕಾಣಲಾಗುತ್ತಿತ್ತು. ಸ್ತ್ರೀಯರ ಗುಲಾಮಗಿರಿ ಪುರುಷರ ಮೇಲೆಯೂ ಪ್ರತಿಕೂಲ ಪರಿಣಾಮಗಳನ್ನು ಉಂಟು ಮಾಡದಿರಲಿಲ್ಲ. ಗುಲಾಮ ಸ್ತ್ರೀಯರ ಪುತ್ರರಿಗೂ ಸ್ವಾತಂತ್ರ್ಯ ಚೈತನ್ಯದ ಅವಕಾಶವಿರಲಿಲ್ಲ.

ಸ್ತ್ರೀ ಅವಳ ಸೌಂದರ್ಯದ ಕಾರಣದಿಂದಲೋ ವಿಶಿಷ್ಟ ಗುಣ ನಿಮಿತ್ತವೋ ವ್ಯಕ್ತಿಪರವಾಗಿ ಪುರುಷನನ್ನು ಸ್ವಾಧೀನಿಸಿದ್ದರೂ ಈ ರೀತಿ ಲಭಿಸಿದ ಸ್ವಾತಂತ್ರ್ಯವನ್ನು ಯಥಾರ್ಥ ಸ್ವಾತಂತ್ರ್ಯವೆಂದು ಹೇಳಲು ಸಾಧ್ಯವಿಲ್ಲ. ಕಾರಣವೇನೆಂದರೆ ಅದು ಅವಳ ಹಕ್ಕೆಂಬಂತೆ ಪರಿಗಣಿಸಲ್ಪಡುತ್ತಿರಲಿಲ್ಲ. ಸಾಮಾನ್ಯ ನಿಯಮಕ್ಕೆ ಇದೊಂದು ಅಪವಾದ ಮಾತ್ರ. ಇಂತಹ ಸ್ವಾತಂತ್ರ್ಯ ವಾಸ್ತವದಲ್ಲಿ ಲಕ್ಷ್ಯವನ್ನು ರೂಪೀಕರಿಸುವುದಕ್ಕೂ ಹೆಗ್ಗುರಿ ಸಾಧಿಸುವುದಕ್ಕೂ ಸಹಾಯಕಾರಿಯಲ್ಲ.

ಸುಮಾರು 1400 ವರ್ಷಗಳ ಮೊದಲು ಪೈಗಂಬರರ ಆಗಮನವಾಯಿತು. ಅವರ ಕಾಲಕ್ಕಿಂತ ಮೊದಲು ಯಾವುದೇ ಧರ್ಮವಾಗಲಿ ರಾಷ್ಟ್ರವಾಗಲಿ ಸ್ತ್ರೀಗೆ ಒಂದು ಹಕ್ಕೆಂಬ ರೀತಿಯಲ್ಲಿ ಸ್ವಾತಂತ್ರ್ಯ ನೀಡಿರಲಿಲ್ಲಿ. ನಿರ್ದಿಷ್ಟ ನಿಯಮ ಜ್ಯಾರಿಯಲ್ಲಿಲ್ಲದ ರಾಜ್ಯಗಳಲ್ಲಿ ಎಲ್ಲಾ ರೀತಿಯ ಅಯೋಗ್ಯತೆಗಳಿಂದ ಸ್ತ್ರೀಯನ್ನು ವಿಮುಕ್ತ ಮಾಡಿದ್ದರೂ ಇಂತಹ ಸ್ವಾತಂತ್ರ್ಯ ಸಹ ಯಥಾರ್ಥ ಸ್ವಾತಂತ್ರ್ಯವೆನಿಸುವುದಿಲ್ಲ. ಒಂದು ಅನುಮತಿ ಎಂದು ಮಾತ್ರ ಅದನ್ನು ಹೇಳಬಹುದು. ನಾಗರಿಕ ಹಾಗೂ ನಿಯಮಾನುಸಾರವಾದ ರೀತಿಯಲ್ಲಿ ಅನುಭವಿಸುವ ಸ್ವಾತಂತ್ರ್ಯ ನಿಜವಾದ ಸ್ವಾತಂತ್ರ್ಯವಾಗಿದೆ. ನಿಯಮಗಳನ್ನು ಉಲ್ಲಂಘಿಸಿ ಸಿಗುವ ಸ್ವಾತಂತ್ರ್ಯ ಕೂಡ ಸ್ವಾತಂತ್ರ್ಯವಲ್ಲ, ಅದರಲ್ಲಿ ಸ್ವಾತಂತ್ರ್ಯದ ಚೈತನ್ಯವಿರುವುದಿಲ್ಲ.

ಪೈಗಂಬರರ ಕಾಲದಲ್ಲೂ ಅದಕ್ಕೆ ಮೊದಲೂ ಸ್ತ್ರೀಗೆ ಆಸ್ತಿಯಲ್ಲಿ ಹಕ್ಕಿರಲಿಲ್ಲ. ಗಂಡ ಅವಳ ಸೊತ್ತಿಗೆ ಯಜಮಾನನಾಗಿದ್ದನು. ಪಿತನ ಸೊತ್ತಿನಲ್ಲೂ ಅವಳಿಗೆ ಹಕ್ಕಿರಲಿಲ್ಲ. ಕೆಲವೊಮ್ಮೆ ಗಂಡನ ಜೀವಿತ ಕಾಲದಲ್ಲಿ ಆತನ ಸೊತ್ತುಗಳ ಮೇಲ್ನೋಟವನ್ನು ವಹಿಸಿದ್ದರೂ ಆತನ ಮರಣಾನಂತರ ಆ ಸೊತ್ತಿನಲ್ಲಿ ಅವಳಿಗೆ ಹಕ್ಕಿರಲಿಲ್ಲ. ವಿವಾಹದ ನಂತರ ಅವಳು ಗಂಡನ ಸೊತ್ತಾಗುತ್ತಿದ್ದಳು. ಅವನಿಂದ ಯಾವ ರೀತಿಯಲ್ಲೂ ಬೇರ್ಪಡಲು ಅವಳಿಗೆ ಸಾಧ್ಯವಿರಲಿಲ್ಲ. ಇಷ್ಟ ಬಂದಾಗ ಗಂಡ ಅವಳನ್ನು ತ್ಯಜಿಸಬಹುದು. ಆದರೆ ಎಂತಹ ದಾರುಣ ಪರಿಸ್ಥಿತಿಯಲ್ಲಿದ್ದರೂ ಗಂಡನಿಂದ ವಿಚ್ಛೇದನ ಪಡೆಯಲು ಸ್ತ್ರೀಗೆ ಸ್ವಾತಂತ್ರ್ಯವಿರಲಿಲ್ಲ. ಗಂಡ ಅವಳನ್ನು ವಿಚ್ಛೇದಿಸಿದರೆ ಅಥವಾ ಬಿಟ್ಟು ಹೋದರೆ, ಅವಳನ್ನು ಸಂರಕ್ಷಿಸಲು ಯಾವ ನಿಯಮವೂ ಇರಲಿಲ್ಲ. ತನ್ನ ಪ್ರಾರಬ್ಧಕ್ಕೆ ತಲೆಬಾಗಿ ಬದುಕುವುದು ಅವಳ ಕರ್ತವ್ಯವಾಗಿತ್ತು. ತನ್ನ ಮತ್ತು ಮಕ್ಕಳ ಜೀವನವನ್ನು ಮುಂದೆ ಸಾಗಿಸಲು ಅವಳು ದುಡಿಯಬೇಕಾಗಿತ್ತು. ಕೋಪ ಬಂದಾಗ ಇಷ್ಟಬಂದಂತೆ ಮರ್ದಿಸಲು ಗಂಡನಿಗೆ ಅಧಿಕಾರವಿತ್ತು; ಆದರೆ ಅದರ ವಿರೋಧವಾಗಿ ಚಕಾರವೆತ್ತಲು ಅವಳಿಗೆ ಹಕ್ಕಿರಲಿಲ್ಲ.

ಪತಿ ಮೃತಪಟ್ಟರೆ, ಕೆಲವು ರಾಜ್ಯಗಳ ನಿಯಮ ಪ್ರಕಾರ ಪತ್ನಿ ಅವನ ಸಂಬಂಧಿಕರ ಅಧೀನವಾಗುತ್ತಾಳೆ. ಅವರಿಚ್ಛಿಸಿದವರಿಗೆ, ದಾನವೆಂಬ ರೀತಿಯಲ್ಲಿ ಅಥವಾ ಪ್ರತಿಫಲವನ್ನು ಪಡೆದು ಅವಳನ್ನು ವಿವಾಹ ಮಾಡಿಕೊಡುವರೆ ಅವರಿಗೆ ಅಧಿಕಾರವಿತ್ತು. ಕೆಲವೆಡೆಗಳಲ್ಲಿ, ಅವಳು ಗಂಡನ ಒಂದು ಸೊತ್ತಾಗಿ ಮಾತ್ರ ಗಣಿಸಲ್ಪಡುತ್ತಿದ್ದಳು. ಕೆಲವು ಗಂಡಂದಿರು ಹೆಂಡಂದಿರನ್ನು ಮಾರಾಟ ಮಾಡುತ್ತಿದ್ದರು ಅಥವಾ ಜೂಜಾಡಿಯೂ ಪಂದ್ಯಕಟ್ಟಿಯೂ ಅವರನ್ನು ಕಳಕೊಳ್ಳುತ್ತಿದ್ದರು. ಹಾಗೆ ಮಾಡುವುದು ತಮ್ಮ ಹಕ್ಕೆಂದು ಅವರು ತಿಳಿದುಕೊಂಡಿದ್ದರು.

ಪತ್ನಿಯೆಂಬ ಆಶ್ರಿತ ಸ್ಥಿತಿಯಲ್ಲಾಗಲಿ, ಗಂಡನಿಂದ ಸ್ವತಂತ್ರಳೆಂಬ ಸ್ಥಿತಿಯಲ್ಲಾಗಲಿ ಸ್ತ್ರೀಗೆ ಸಂತಾನಗಳ ಮೇಲೆ ಯಾವ ಅಧಿಕಾರವೂ ಅಂಗೀಕರಿಸಲ್ಪಟ್ಟಿರಲಿಲ್ಲ. ಗೃಹ ಕಾರ್ಯಗಳಲ್ಲೂ ಅವಳಿಗೆ ಯಾವ ಸ್ವಾತಂತ್ರ್ಯವೂ ಇರಲಿಲ್ಲ. ಧರ್ಮದಲ್ಲಿ ಅವಳಿಗೆ ಯಾವ ಸ್ಥಾನವೂ ಇರಲಿಲ್ಲ. ಆಧ್ಯಾತ್ಮಿಕಾನುಗ್ರಹಗಳಲ್ಲೂ ಅವಳಿಗೆ ಪಾಲು ಸಿಗುತ್ತಿರಲಿಲ್ಲ. ಇದರ ಪರಿಣಾಮವಾಗಿ, ಗಂಡಂದಿರು ತಮ್ಮ ಹೆಂಡತಿಯರ ಸಂಪತ್ತನ್ನು ದುರ್ವ್ಯಯ ಮಾಡಿ ಅವರ ಉಪಜೀವನಕ್ಕೆ ಯಾವ ಏರ್ಪಾಡನ್ನೂ ಮಾಡದೆ ಕಡೆಗೆ ಬಿಟ್ಟು ಬಿಡುತ್ತಿದ್ದರು. ಗಂಡನ ಒಪ್ಪಿಗೆ ಇಲ್ಲದೆ ಅವಳ ಸ್ವಂತ ಸಂಪತ್ತಿನಿಂದಲೇ ಏನನ್ನಾದರೂ ದಾನ ಮಾಡಲಿಕ್ಕೋ ಸಂಬಂಧಿಕರಿಗೆ ಸಹಾಯ ನೀಡಲಿಕ್ಕೋ ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. ದುರಾಸೆಯ ಗಂಡ ಅಂತಹ ಸಂದರ್ಭಗಳಲ್ಲಿ ಅವಳಿಗೆ ಒಪ್ಪಿಗೆ ಕೊಡುವುದು ಸಂಭವನೀಯವಾಗಿರಲಿಲ್ಲ.

ಮಕ್ಕಳು ಮಾತಪಿತರೊಂದಿಗೆ ಬಹಳ ಅಗಾಧವಾದ ಪ್ರೇಮಬಂಧದಿಂದ ಬಂಧಿಸಲ್ಪಟ್ಟವರಾಗಿದ್ದರೂ ಹೆಣ್ಣು ಮಕ್ಕಳಿಗೆ ತಮ್ಮ ಮಾತಾಪಿತರ ಸೊತ್ತುಗಳಿಂದ ಪಾಲು ಸಿಗುತ್ತಿರಲಿಲ್ಲ. ಆದರೂ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಂತೆಯೇ ಮಾತಾಪಿತರ ಮೇಲೆ ಬಾಧ್ಯತೆ ಇತ್ತು. ನೀತಿ ಪ್ರಜ್ಞೆಯಿಂದ ಪ್ರೇರಿತರಾಗಿ ಮಾತಾಪಿತರು ಹೆಣ್ಣು ಸಂತಾನಗಳಿಗೆ ಸೊತ್ತಿನಲ್ಲೊಂದು ಭಾಗವನ್ನು ತಮ್ಮ ಜೀವಿತ ಕಾಲದಲ್ಲಿ ನೀಡಿದರೆಂದಾದರೆ, ಅದು ಕುಟುಂಬ ಕಲಹಕ್ಕೆ ನಾಂದಿಯಾಗುತ್ತಿತ್ತು. ಮಾತಾಪಿತರ ಮರಣಾನಂತರ ಅವರ ಸೊತ್ತೆಲ್ಲಾ ತಮಗೆ ಮಾತ್ರ ಲಭಿಸುವುದರಿಂದ ತಮ್ಮ ಸಹೋದರಿಯರಿಗೆ ಮಾತಾಪಿತರಿಂದ ಏನಾದರೂ ದಾನವಾಗಿ ಸಿಗುವುದಿದ್ದರೆ ತಾವು ಅಸೂಯೆ ಪಡುವುದು ಅನುಚಿತವೆಂದು ಗಂಡು ಮಕ್ಕಳಿಗೆ ತೋಚುತ್ತಿರಲಿಲ್ಲ. ತತ್ಕಾಲ ತಮಗಿಂತ ಹೆಚ್ಚು ತಮ್ಮ ಸಹೋದರಿಯರಿಗೆ ಸಿಗುತ್ತದೆಯೆಂದು ಅವರು ಭಾವಿಸುತ್ತಿದ್ದರು.

ಇದೇ ಪ್ರಕಾರ, ಪತಿಪತ್ನಿಯರ ಸಂಬಂಧ ಎಷ್ಟು ನಿಕಟವಾಗಿದ್ದರೂ ಗಂಡನ ಸೊತ್ತಿನಿಂದ ಹೆಂಡತಿಗೆ ಯಾವ ಪಾಲೂ ಸಿಗುತ್ತಿರಲಿಲ್ಲ. ಗಂಡನ ಸೊತ್ತಿನಲ್ಲಿ ಅವನ ದೂರದ ಸಂಬಂಧಿಕರೆಲ್ಲಾ ಪಾಲು ಕೇಳಬಹುದು. ಆದರೆ ಅವನ ಎಲ್ಲಾ ರಹಸ್ಯ ತಿಳಿದವಳೂ ಅಂತ್ಯ ದಿನದ ತನಕ ಅವನ ಸುಖದುಃಖಗಳಲ್ಲಿ ಪಾಲುಗೊಂಡವಳೂ ಅವನ ಆಸ್ತಿಪಾಸ್ತಿಯನ್ನು ವೃದ್ಧಿಗೊಳಿಸುವುದರಲ್ಲಿ ಗಣ್ಯವಾದ ಪಾತ್ರ ವಹಿಸಿದವಳೂ ಆದ ಪತ್ನಿಗೆ ಅವನ ಸೊತ್ತಿನ ಒಂದು ಪಾಲನ್ನು ಅನುಭೋಗಿಸಲು ಭಾಗ್ಯವಿಲ್ಲ. ಗಂಡನ ಸೊತ್ತನ್ನು ಅವಳು ಪರಿಪಾಲಿಸಿಕೊಂಡಿದ್ದಾಗಲೂ ಅದರಲ್ಲಿ ಯಾವುದರಲ್ಲೂ ಅವಳಿಗೆ ವಾಸ್ತವದಲ್ಲಿ ಹಕ್ಕಿರಲಿಲ್ಲ. ಆ ಸೊತ್ತಿನ ವರಮಾನದಿಂದ ಅವಳು ಖರ್ಚು ಮಾಡಬಹುದಿತ್ತಾದರೂ ಅದರ ಚಿಕ್ಕ ಭಾಗವನ್ನಾದರೂ ವರ್ಗಾಯಿಸಲು ಅವಳಿಗೆ ಅಧಿಕಾರವಿರಲಿಲ್ಲ, ಹಾಗೆ ದಾನಧರ್ಮದಲ್ಲಿ ಇಷ್ಟಾನುಸಾರ ವರ್ತಿಸಲು ಅವಳಿಗೆ ಸಾಧ್ಯವಿರುತ್ತಿರಲಿಲ್ಲ.

ಗಂಡ ಅವಳಿಗೆ ಏನೇ ದ್ರೋಹ ಮಾಡಿದರೂ ಅವನಿಂದ ಬೇರ್ಪಟ್ಟು ಹೋಗಲು ಅವಳಿಗೆ ಸಾಧ್ಯವಿರುತ್ತಿರಲಿಲ್ಲ. ವಿವಾಹ ವಿಚ್ಛೇದನಕ್ಕೂ ಒಪ್ಪಿಗೆ ಇದ್ದ ಸಮುದಾಯಗಳಲ್ಲಾದರೋ, ಅದಕ್ಕೆ ನಿರ್ಣಯಿಸಿದ ನಿಬಂಧನೆಗಳನ್ನು ನೆನಸುವಾಗ, ಸ್ವಾಭಿಮಾನವುಳ್ಳ ಯಾವ ಸ್ತ್ರೀಯೂ ಆ ರೀತಿಯ ವಿಚ್ಛೇದನಕ್ಕಿಂತ ಮರಣವನ್ನು ಇಚ್ಛಿಸುವಳು. ಉದಾಹರಣೆಗೆ, ವಿವಾಹ ವಿಚ್ಛೇದನದ ಒಂದು ನಿಬಂಧನೆ, ಇಬ್ಬರಲ್ಲಿ ಯಾರಾದರೂ ವ್ಯಭಿಚರಿಸಿದುದಾಗಿ ರುಜುಪಡಿಸುವುದಾಗಿದೆ. ಹಾಗೆಯೇ ಗಂಡನ ಕ್ರೂರವಾದ ವರ್ತನೆಗಳು ಸಾಕ್ಷೀಕರಿಸಲ್ಪಡಬೇಕು. ಇದಕ್ಕಿಂತಲೂ ಕಷ್ಟತರದ್ದು ಗಂಡನೊಂದಿಗೆ ಸಹಜೀವನ ನಡೆಸಲು ಸಾಧ್ಯವಿಲ್ಲದ ಸಂದರ್ಭದಲ್ಲಿ, ಪೂರ್ಣವಾದ ವಿಚ್ಛೇದನದ ಬದಲು ಅಗಲಿ ಜೀವಿಸುವರೆ ಅನುಮತಿ ಮಾತ್ರವೇ ಲಭಿಸುತ್ತಿತ್ತೆಂಬುದು. ಈ ಏಕಾಂತ ಜೀವಿತವೇ ಒಂದು ಕಠಿಣ ಶಿಕ್ಷೆಯಾಗಿದೆ. ಈ ರೀತಿಯಲ್ಲಿ ಅವಳು ಶೂನ್ಯವೂ ಉದ್ದೇಶ ರಹಿತವೂ ಆದ ಒಂದು ಜೀವನವನ್ನು ನಡೆಸಬೇಕಾಗುತ್ತಿತ್ತು.

ಪತಿ ಇಚ್ಛಾನುಸಾರ ವಿವಾಹ ವಿಚ್ಛೇದನ ಮಾಡಬಹುದಾದರೂ ಪತ್ನಿ ಯಾವ ಪರಿಸ್ಥಿತಿಯಲ್ಲೂ ವಿಚ್ಛೇದನಕ್ಕಾಗಿ ಅಗತ್ಯಪಡುವುದು ಸಾಧ್ಯವಿರಲಿಲ್ಲ. ಗಂಡ ಅವಳನ್ನು ತ್ಯಜಿಸಿದರೆ, ಅವಳ ಪಾಲನೆ ಪೋಷಣೆಗೆ ಏನನ್ನೂ ಮಾಡದೆ ಅವನು ಊರು ಬಿಟ್ಟು ಹೋದರೆ, ರಾಜ್ಯಕ್ಕೋ ಸಮುದಾಯಕ್ಕೋ ಉಪಕಾರವಾಗುವ ರೀತಿಯಲ್ಲಿ ಜೀವನವನ್ನರ್ಪಿಸಲು ಸಹ ಸ್ವಾತಂತ್ರ್ಯವಿಲ್ಲದೆ ಜೀವಿತಕಾಲವೆಲ್ಲಾ ಅವಳು ನಿರರ್ಥಕವಾಗಿ ಕಳೆಯಬೇಕಾಗಿತ್ತು. ವಿವಾಹ ಸಂಬಂಧ ಸಂತುಷ್ಟವಾದ ಒಂದು ಜೀವನವಾಗುವ ಬದಲಿಗೆ

ಸಂತಪ್ತ ಜೀವನವಾಗಿ ಅವಳಿಗೆ ಪರಿಣಮಿಸುತ್ತಿತ್ತು. ತನ್ನ ಮತ್ತು ತನ್ನ ಗಂಡನ ಹೊಣೆಗಳನ್ನು ಸಹ ವಹಿಸುವುದರೊಂದಿಗೆ ಗಂಡನ ಬರವನ್ನೇ ನಿರೀಕ್ಷಿಸುತ್ತಾ ಅವಳು ದಿನ ಕಳೆಯಬೇಕಾಗಿತ್ತು. ಉಪ ಜೀವನಮಾರ್ಗವನ್ನು ಕಂಡು ಹಿಡಿಯುವ ಗಂಡನ ಕರ್ತವ್ಯ ಮತ್ತು ಮಕ್ಕಳ ಪಾಲನೆ ಪೋಷಣೆ ಮಾಡುವ ತನ್ನ ಸ್ವಂತ ಕರ್ತವ್ಯ ಎರಡನ್ನೂ ಅವಳೇ ನಿರ್ವಹಿಸಬೇಕಾಗಿತ್ತು. ಒಂದು ಕಡೆಯಲ್ಲಿ ಗಂಡ ಬಿಟ್ಟು ಹೋದ ಮನೋವ್ಯಥೆ; ಇನ್ನೊಂದು ಕಡೆಯಲ್ಲಿ ತನ್ನ ಮತ್ತು ಮಕ್ಕಳ ಜೀವನವನ್ನು ಸಾಗಹಾಕುವ ಮಹಾಭಾರ, ಸಂಕ್ಷಿಪ್ತವಾಗಿ, ರಕ್ಷಣೆಯಿಲ್ಲದ ಬಡಪಾಯಿಯಾದ ಸ್ತ್ರೀ ಎಂಬ ಈ ಜೀವಿ ಇವನ್ನೆಲ್ಲಾ ಸಹಿಸಿಕೊಳ್ಳಬೇಕೆಂದಾಗಿತ್ತು ಅಂದಿನ ಸ್ಥಿತಿ. ಸ್ತ್ರೀಯನ್ನು ಥಳಿಸಲಾಗುತ್ತಿತ್ತು; ಅವಳನ್ನು ಗಂಡನ ಸೊತ್ತೆಂದು ಪರಿಗಣಿಸಲಾಗುತ್ತಿತ್ತು. ಗಂಡ ತೀರಿಹೋದರೆ ಅವಳನ್ನು ನಿರ್ಬಂಧವಾಗಿ ಅವನ ಸಮೀಪದ ಸಂಬಂಧಿಕರಿಗೆ ಮದುವೆ ಮಾಡಿ ಕೊಡುತ್ತಿದ್ದರು; ಅಥವಾ ಹಣಕ್ಕಾಗಿ ಬೇರೆ ಯಾರಿಗಾದರೂ ಮಾರಾಟ ಮಾಡುತ್ತಿದ್ದರು. ಗಂಡನೇ ಹೆಂಡತಿಯನ್ನು ಮಾರಾಟ ಮಾಡಿದ ಸಂಭವವಿದೆ. ಪಾಂಡವರಂತಹ ಭಾರತೀಯ ರಾಜಕುಮಾರರು ತಮ್ಮ ಪತ್ನಿಯನ್ನು ಜೂಜಾಟದಲ್ಲಿ ಕಳಕೊಳ್ಳಬೇಕಾಯಿತು. ರಾಜ್ಯದ ನಿಯಮವನ್ನನುಸರಿಸಿ, ದ್ರೌಪದಿಯಂತಹ ಶ್ರೇಷ್ಠ ರಾಜಕುಮಾರಿಗಾಗಲಿ ಚಕಾರವೆತ್ತಲು ಸಾಧ್ಯವಿರಲಿಲ್ಲ.

ಮಕ್ಕಳ ವಿದ್ಯಾಭ್ಯಾಸದ ವಿಷಯವಲ್ಲಾಗಲಿ ಪಾಲನೆಯ ಕುರಿತಾಗಲಿ ತಾಯಿಯ ಇಚ್ಛೆಯನ್ನು ವಿಚಾರಿಸಲಾಗುತ್ತಿರಲಿಲ್ಲ. ತನ್ನ ಮಕ್ಕಳ ಮೇಲೆ ಅವಳಿಗೆ ಯಾವ ಅಧಿಕಾರವೂ ಇರಲಿಲ್ಲ ತಂದೆ-ತಾಯಿ ಪರಸ್ಪರ ಬೇರ್ಪಟ್ಟರೆ ಮಕ್ಕಳನ್ನು ತಂದೆಗೆ ಒಪ್ಪಿಸಲಾಗುತ್ತಿತ್ತು. ಗಂಡನ ಜೀವಿತ ಕಾಲದಲ್ಲಿಯೂ ಮರಣಾನಂತರವೂ ಸ್ತ್ರೀಗೆ ಗೃಹಕಾರ್ಯದಲ್ಲಿ ಯಾವ ಅಧಿಕಾರವೂ ಇರಲಿಲ್ಲ. ಗಂಡ ಇಚ್ಛಿಸಿದಾಗ ಯಾವ ಸಂದರ್ಭದಲ್ಲೂ ಅವಳನ್ನು ಮನೆಯಿಂದ ಹೊರಗೆ ಹಾಕಲು ಅವನಿಗೆ ಅಧಿಕಾರವಿತ್ತು. ಅಂತಹ ಸಂದರ್ಭದಲ್ಲಿ ಅವಳು ಅಲೆದು ಜೀವನ ಸಾಗಿಸಬೇಕಾಗಿತ್ತು.

ಪೈಗಂಬರರ ಆವಿರ್ಭಾವದ ನಂತರ ಈ ಎಲ್ಲಾ ಅನೀತಿಗಳು ಒಂದೇ ಹೊಡೆತಕ್ಕೆ ಎಂಬಂತೆ ನಿವಾರಿಸಲ್ಪಟ್ಟವು. ಸ್ತ್ರೀ ವರ್ಗದ ಹಕ್ಕುಗಳನ್ನು ಸಂರಕ್ಷಿಸುವ ಹೊಣೆಯನ್ನು ದೇವರು ವಿಶಿಷ್ಟ ರೀತಿಯಲ್ಲಿ ತನಗೆ ಒಪ್ಪಿಸಿರುವನೆಂದು ಅವರು ಘೋಷಿಸಿದರು. ಮಾನವೀಯತೆಯ ಆಧಾರದಲ್ಲಿ ಸ್ತ್ರೀ-ಪುರುಷರಲ್ಲಿ ವ್ಯತ್ಯಾಸವಿಲ್ಲವೆಂದೂ ಒಟ್ಟಿಗೆ ಜೀವನ ನಡೆಸುವಾಗ ಪುರುಷನಿಗೆ ಸ್ತ್ರೀಯ ಮೇಲೆ ಕೆಲವು ಹಕ್ಕುಗಳಿರುವಂತೆ ಸ್ತ್ರೀಗೆ ಪುರುಷನ ಮೇಲೆ ಸಹ ಕೆಲವು ಹಕ್ಕುಗಳಿವೆಯೆಂದೂ ಅವರು ದೇವರ ಹೆಸರಿನಲ್ಲಿ ಪ್ರಖ್ಯಾಪಿಸಿದರು. ಪುರುಷನ ಹಾಗೆಯೇ ಸ್ತ್ರೀಯೂ ಸೊತ್ತನ್ನು ಹೊಂದಬಹುದು. ಪತ್ನಿ ಸ್ವಇಚ್ಛೆಯಿಂದ ತನ್ನ ಸೊತ್ತಿನಿಂದ ಒಂದು ಪಾಲನ್ನು ಗಂಡನಿಗೆ ಬಿಟ್ಟುಕೊಡದಿದ್ದರೆ, ಅವಳ ಸೊತ್ತನ್ನು ಉಪಯೋಗಿಸಲು ಅವನಿಗೆ ಅಧಿಕಾರವಿಲ್ಲ. ಅವಳ ಸಂಪತ್ತನ್ನು ಬಲಾತ್ಕಾರದಿಂದಲೋ, ಸ್ವಾಭಾವಿಕವಾದ ಅವಳ ಲಜ್ಜಾ ಕಾರಣದಿಂದ ಅವಳು ಅಸಮ್ಮತಿಯನ್ನು ಸೂಚಿಸದಿದ್ದರೆ, ಅದನ್ನೇ ಒಪ್ಪಿಗೆಯೆಂದು ಭಾವಿಸಿಯೋ ಅಪಹರಿಸುವುದು ತಪ್ಪು. ಗಂಡ ತನ್ನ ಇಚ್ಛೆಯಿಂದ ಏನನ್ನಾದರೂ ಪತ್ನಿಗೆ ಕೊಟ್ಟ ನಂತರ, ಅದು ಅವಳ ಸೊತ್ತಾಗುತ್ತದೆ. ಅದನ್ನು ಹಿಂದಕ್ಕೆ ಪಡೆಯಲು ಅವನಿಗೆ ಹಕ್ಕಿಲ್ಲ. ಪಾರಂಪರ್ಯ ಸೊತ್ತಿನಲ್ಲಿ ಅವಳಿಗೆ ತನ್ನ ಸಹೋದರರಂತೆಯೇ ಹಕ್ಕಿದೆ. ಕುಟುಂಬದ ಎಲ್ಲಾ ವಿಧ ಹೊಣೆ ಪುರುಷನ ಮೇಲೆ ಬೀಳುವುದಾದರೂ ಸ್ತ್ರೀಗೆ ತನ್ನ ಸ್ವಂತದ ಬಗ್ಗೆ ಮಾತ್ರ ಗಮನಿಸಿದರೆ ಸಾಕಾಗುವುದರಿಂದಾಗಿ, ಮಾತಾಪಿತರ ಸೊತ್ತಿನಲ್ಲಿ ಪುರುಷನ ಪಾಲಿನ ಸರಿ ಅರ್ಧವನ್ನು ಸ್ತ್ರೀಗೆ ನಿಶ್ಚಯಿಸಲಾಗಿದೆ. ಇದೇ ರೀತಿಯಲ್ಲಿ ಮೃತಹೊಂದಿದ ಪುತ್ರನ ಸೊತ್ತಿನಲ್ಲಿ ತಂದೆಯ ಹಾಗೆಯೇ ತಾಯಿಗೂ ಹಕ್ಕಿದೆ. ಪರಿಸ್ಥಿತಿ ಹಾಗೂ ಜವಾಬ್ದಾರಿಕೆಗಳನ್ನು ಪರಿಗಣಿಸಿ ಕೆಲವು ಸಂದರ್ಭಗಳಲ್ಲಿ ತಂದೆಗೆ ಸಿಗುವಂತಹ ಪಾಲು ಅಥವಾ ಅದಕ್ಕಿಂತ ಕಮ್ಮಿಯಾಗಿರುವ ಪಾಲು ತಾಯಿಗೆ ಸಿಗುತ್ತದೆ. ಗಂಡ ಮೃತಪಟ್ಟರೆ, ಮಕ್ಕಳಿದ್ದರೂ ಇಲ್ಲವಾದರೂ ಆತನ ಸೊತ್ತಿನಲ್ಲಿ ಹೆಂಡತಿಗೆ ಹಕ್ಕಿದೆ. ಅವಳು ಅನ್ಯರ ಆಶ್ರಿತಳಾಗಿ ದಿನಕಳೆಯಬೇಕಾದ ದುರವಸ್ಥೆಗೆ ತುತ್ತಾಗಬಾರದೆಂದು ಇದರ ಉದ್ದೇಶವಾಗಿದೆ.

ಮದುವೆ ಎಂಬುದು ಒಂದು ಪವಿತ್ರ ಸಂಬಂಧವಾಗಿದೆ. ಪುರುಷನೂ ಸ್ತ್ರೀಯೂ ಅನ್ಯೋನ್ಯ ಅತ್ಯಂತ ಪ್ರೀತಿಯಲ್ಲಿದ್ದುಕೊಂಡು, ನಂತರ ಆ ಸಂಬಂಧವನ್ನು ವಿಚ್ಛೇದಿಸುವುದು ಬಹಳ ಖೇದಕರ ಪ್ರವೃತ್ತಿಯಾಗಿದೆ.

ಆದರೂ, ಈರ್ವರಿಗೂ ಪತಿ-ಪತ್ನಿ ಎಂಬ ಸ್ಥಿತಿಯಲ್ಲಿ ಒಟ್ಟಿಗೆ ಜೀವಿಸಲು ಪ್ರಯಾಸಕರವಾದ ರೀತಿಯಲ್ಲಿ ಅವರೆಡೆಯಲ್ಲಿ ಸ್ವಭಾವ ಭಿನ್ನತೆಯಿದೆಯೆಂದು ಗೋಚರಿಸುವಾಗ; ಮತಪರವಾಗಿ, ಶಾರೀರಿಕವಾಗಿ, ಸಾಂಪತ್ತಿಕವಾಗಿ, ಸಾಮಾಜಿಕವಾಗಿ, ಮಾನಸಿಕವಾಗಿ ಏನಾದರೂ ವಿಪರ್ಯಾಸ ತೋರುವಾಗ, ಬರೇ ನೆಂಟುತನದ ಹೆಸರಿನಲ್ಲಿ ಅವರ ಜೀವನವನ್ನು ಹಾಳುಗೆಡಹಲಿಕ್ಕೂ ಜನ್ಮೋದ್ದೇಶವನ್ನು ಅಸಾಫಲ್ಯಗೊಳಿಸಲಿಕ್ಕೂ ಅವರನ್ನು ನಿರ್ಬಂಧಿಸಲಾಗುವುದಿಲ್ಲ. ಅಂತಹ ವೈಪರೀತ್ಯಗಳುಂಟಾಗುವಾಗ, ತಮಗೆ ಒಟ್ಟಿಗೆ ಜೀವಿಸಲಿಕ್ಕೆ ಪ್ರಯಾಸಕರವೆಂದು ಸ್ತ್ರೀ ಮತ್ತು ಪುರುಷ ಈರ್ವರಿಗೂ ಮನದಟ್ಟಾದರೆ, ಪರಸ್ಪರ ಒಪ್ಪಿಕೊಂಡು ಅವರಿಗೆ ಆ ವಿವಾಹ ಸಂಬಂಧವನ್ನು ಮುರಿಯಲು ಸಾಧ್ಯವಿದೆ. ವಿಚ್ಛೇದನಕ್ಕೆ ಗಂಡ ಮಾತ್ರ ಅಗತ್ಯಪಡಿಸಿ ಹೆಂಡತಿ ಅದಕ್ಕೆ ಸಮ್ಮತಿಸದೆ ಇದ್ದು, ಅನ್ಯೋನ್ಯ ಜೀವನವನ್ನು ಅಳವಡಿಸಲು ಅಸಾಧ್ಯವಾದರೆ, ಅವರ ಕುರಿತು ಪರ್ಯಾಲೋಚನೆ ಮಾಡಿ ಅದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯಲು ಎರಡು ಮಂದಿಯ ಒಂದು ಸಮಿತಿಯನ್ನು ರೂಪಿಸಬೇಕು. ಅದರಲ್ಲಿ ಒಬ್ಬ ಪ್ರತಿನಿಧಿ ಗಂಡನ ಕಡೆಯಿಂದಲೂ ಇನ್ನೊಬ್ಬ ಹೆಂಡತಿಯ ಕಡೆಯಿಂದಲೂ ಇರಬೇಕು. ಗಂಡ ಮತ್ತು ಹೆಂಡತಿ ಒಟ್ಟಿಗೆ ಜೀವಿಸಲಿಕ್ಕೆ ಇನ್ನೊಮ್ಮೆ ಪ್ರಯತ್ನಿಸಬೇಕೆಂದು ಸಮಿತಿ ತೀರ್ಮಾನಿಸುವುದಾದರೆ, ಸಮಿತಿಯ ಸಲಹೆಯಂತೆ, ಆ ದಂಪತಿಗಳು ತಮ್ಮ ಭಿನ್ನತೆಗಳನ್ನು ಸರಿಪಡಿಸಲು ಇನ್ನೊಮ್ಮೆ ಪ್ರಯತ್ನಿಸಬೇಕು. ಆದರೂ ಪತಿ–ಪತ್ನಿಯಂತೆ ಜೀವಿಸಲು ನಿರ್ವಾಹವಿಲ್ಲವೆಂದು ಕಂಡುಬರುವುದಾದರೆ, ಗಂಡ ಹೆಂಡತಿಯನ್ನು ವಿಚ್ಛೇದನ ಮಾಡಿಕೊಳ್ಳಬಹುದು. ಹಾಗೆ ಗಂಡ ಹೆಂಡತಿಯನ್ನು ಉಪೇಕ್ಷಿಸುವನಾದರೆ, ಅವನು ಅವಳಿಗೆ ಮೊದಲು ನೀಡಿದ ಮಹರ್ (ವಿವಾಹ ಶುಲ್ಕ) ಸಹಿತ ಏನನ್ನೂ ಹಿಂದೆ ಪಡೆಯಲು ಅವನಿಗೆ ಹಕ್ಕಿಲ್ಲ. ಗಂಡ ಇಚ್ಛಿಸದೆ, ಹೆಂಡತಿ ಮಾತ್ರ ವಿವಾಹ ವಿಚ್ಛೇದನಕ್ಕೆ ಬಯಸುವಳಾದರೆ, ಅವಳು ಖಾಝಿ (ನ್ಯಾಯಾಧೀಶ)ಗೆ ಅರ್ಜಿ ಸಲ್ಲಿಸಬೇಕು. ಅವಳ ಅಪೇಕ್ಷೆಯ ಹಿಂದೆ ಏನೂ ದುರುದ್ದೇಶದ ಪ್ರೇರಣೆಯಿಲ್ಲವೆಂದು ಖಾಝಿಗೆ ಮನವರಿಕೆಯಾದರೆ ಅವಳಿಗೆ ವಿವಾಹ ವಿಚ್ಛೇದನ ವಿಧಿಸಬೇಕು. ಅಂತಹ ಸಂದರ್ಭಗಳಲ್ಲಿ ಮಾತ್ರ ಅವಳಿಗೆ ನೀಡಿದ ಮಹರ್ ಮತ್ತು ಇತರ ಎಲ್ಲಾ ಸೊತ್ತುಗಳನ್ನು ಅವಳ ವಾಪಾಸು ಕೊಡಬೇಕಾಗಿದೆ. ದಾಂಪತ್ಯನಿಯಮಗಳನ್ನು ಗಂಡ ಪಾಲಿಸದಿದ್ದರೆ, ಅವನು ಅವಳೊಡನೆ ಮಾತುಕತೆ ನಿಲ್ಲಿಸಿದರೆ, ಬೇರೆಯಾಗಿ ಮಲಗಿಕೊಳ್ಳಲು ಅವನು ಅವಳೊಡನೆ ಅಗತ್ಯಪಡಿಸುವನಾದರೆ, ಅದಕ್ಕೊಂದು ಕಾಲ ಮಿತಿ ಇದೆ. ನಾಲ್ಕು ತಿಂಗಳ ಕಾಲ ಈ ಪರಿಸ್ಥಿತಿ ಮುಂದುವರಿಯುವುದಾದರ, ತನ್ನ ಸ್ವಭಾವವನ್ನು ಪರಿವರ್ತಿಸಲು ಅವನನ್ನು ಒತ್ತಾಯಿಸಬೇಕು; ಅಥವಾ ವಿವಾಹ ವಿಚ್ಛೇದನ ಮಾಡಲಿಕ್ಕೆ ಅವನನ್ನು ನಿರ್ಬಂಧಿಸಬೇಕು. ಅವನು ಅವಳಿಗೆ ಖರ್ಚು ಕೊಡುವುದಿಲ್ಲವಾದರೆ, ಅವಳನ್ನು ಬಿಟ್ಟು ಹೋದರೆ, ಅವಳನ್ನು ಸಂರಕ್ಷಿಸಲಿಕ್ಕೆ ಮನಸ್ಸು ಕೊಡುವುದಿಲ್ಲವಾದರೆ, ಅವರ ವಿವಾಹ ಸಂಬಂಧ ರದ್ದುಗೊಂಡಿತೆಂದು ಪರಿಗಣಿಸಬೇಕು. (ಮುಸ್ಲಿಂ ನ್ಯಾಯ ಶಾಸ್ತ್ರಜ್ಞರು ಇದಕ್ಕೆ ಮೂರು ವರ್ಷಗಳ ಕಾಲಾವಧಿ ನಿರ್ಣಯಿಸಿದ್ದಾರೆ). ಆಗ ಆ ಸ್ತ್ರೀ ಅವನನ್ನು ಬಿಟ್ಟು ಬೇರೆ ವಿವಾಹ ಮಾಡಿಕೊಳ್ಳಬಹುದಾಗಿದೆ. ಪತ್ನಿ ಮತ್ತು ಮಕ್ಕಳನ್ನು ಸಂರಕ್ಷಿಸುವ ಹೊಣೆಯಾವಾಗಲೂ ಗಂಡನಿಗಿದೆ. ಪತ್ನಿಗೆ ಯೋಗ್ಯ ಶಿಸ್ತುಕ್ರಮ ಕಲಿಸುವ ಅಧಿಕಾರ ಗಂಡನಿಗಿದೆ. ಶಿಸ್ತು ಕ್ರಮ ಕೈಗೊಂಡು ಅವಳನ್ನು ಶಿಕ್ಷಿಸಲು ಅವನು ಬಯಸುವನಾದರೆ, ಅವಳ ಅಪರಾಧವನ್ನು ಸಾಕ್ಷ್ಯಗಳ ಸಹಿತ ಸಮರ್ಥಿಸಬೇಕಾಗಿದೆ. ಆದರೆ ಶರೀರಕ್ಕೆ ಊನ ಉಂಟಾಗುವ ರೀತಿಯಲ್ಲಿ ಅವಳನ್ನು ಶಿಕ್ಷಿಸಬಾರದು. ಗಂಡನಿಗೆ ಹೆಂಡತಿಯ ಮೇಲೆ ಯಜಮಾನಿಕೆ ಇಲ್ಲ. ಅವಳನ್ನು ಮಾರಾಟಮಾಡುವುದಾಗಲಿ, ಕೇವಲ ಮನೆ ಕೆಲಸಗಾರಳಂತೆ ನೋಡಿಕೊಳ್ಳುವುದಾಗಲಿ ಕೂಡದು. ಗೃಹಕಾರ್ಯಗಳಲ್ಲಿ ಅವಳು ಅವನ ಪಾಲುಗಾರಳಾಗಿದ್ದಾಳೆ. ತನ್ನ ರೀತಿಯಲ್ಲೇ ಅವನು ಅವಳನ್ನು ಭಾವಿಸಬೇಕು. ತನಗಿಂತ ಕೀಳುಮಟ್ಟದಲ್ಲಿ ಅವಳನ್ನು ಕಾಣುವುದು ಸರಿಯಲ್ಲ. ಗಂಡ ತೀರಿಹೋದರೆ ಅವನ ಸಂಬಂಧಿಕರಿಗೆ ಅವಳ ಮೇಲೆ ಯಾವ ಅಧಿಕಾರವೂ ಇಲ್ಲ. ಅವಳು ಸಂಪೂರ್ಣ ಸ್ವತಂತ್ರಳು. ತಕ್ಕ ಸಂದರ್ಭವೊದಗಿ ಬಂದಾಗ, ಬೇರೆ ವಿವಾಹ ಮಾಡಿಕೊಳ್ಳಲು ಅವಳಿಗೆ ಸ್ವಾತಂತ್ರ್ಯವಿದೆ. ಹಾಗೆ ಮಾಡುವುದರಿಂದ ಅವಳನ್ನು ತಡೆಯಲು ಯಾರಿಗೂ ಅಧಿಕಾರವಿಲ್ಲ. ವಿಧವೆಯನ್ನು ಪ್ರತ್ಯೇಕ ಸ್ಥಳದಲ್ಲಿ ವಾಸಿಸಲಿಕ್ಕೆ ನಿರ್ಬಂಧಿಸಬಾರದು. ವಿಧವೆ ನಾಲ್ಕು ತಿಂಗಳು ಹತ್ತು ದಿನಗಳ ಕಾಲ ಮಾತ್ರ ತನ್ನ ಗಂಡನ ಮನೆಯಲ್ಲಿ ವಾಸಿಸುವಳು. ಅವಳ ಮತ್ತು ಅವಳ ಗಂಡನ ಸಂಬಂ

ಧಿಕರ ಹಕ್ಕುಗಳಿಗೆ ಸಂಬಂಧಿಸಿದ ಎಲ್ಲಾ ಸಂಗತಿಗಳು ಈ ಅವಧಿಯೊಳಗೆ ಬಹಿರಂಗವಾಗಬೇಕು. ಗಂಡ ಮೃತಿ ಹೊಂದಿದ ನಂತರ ಒಂದು ವರ್ಷದ ವರೆಗೆ ಇತರ ಹಕ್ಕು ಗಳ ಜೊತೆಗೆ ಗಂಡನ ಮನೆಯನ್ನು ಕೂಡ ಉಪಯೋಗಿ ಸಲು ಅವಳಿಗೆ ಹಕ್ಕು ಇದೆ. ಗಂಡನ ಆಸ್ತಿಯಿಂದ ತನಗೆ ಲಭಿಸುವ ಪಾಲಿನಲ್ಲಿ ಬೇರೊಂದು ವಾಸಸ್ಥಳದ ಸೌಕರ್ಯವನ್ನು ಮಾಡಿಕೊಳ್ಳುವರೆ ಸಾಕಷ್ಟು ಸಮಯ ವನ್ನು ನೀಡುವುದು ಇವರ ಉದ್ದೇಶವಾಗಿದೆ. ಹೆಂಡತಿ ಯೊಂದಿಗೆ ಸಾಮರಸ್ಯದಿಂದ ಒಡನಾಟಮಾಡಲು ಗಂಡನಿಗೆ ಸಾಧ್ಯವಾಗುವುದಿಲ್ಲವಾದರೆ ಅವನು ಮನೆಯಿಂದ ಹೊರಗೆ ಹೋಗಿ ವಾಸಿಸಬೇಕು ಹೊರತು ಮನೆಯಿಂದ ಹೊರಗೆ ಹೋಗಲಿಕ್ಕೆ ಹೆಂಡತಿಯನ್ನು ಅಗತ್ಯಪಡಿಸಬಾರದು. ಏಕೆಂದರೆ ಮನೆಯ ಯಜಮಾನಿಕೆ ಗೃಹಿಣಿಯದ್ದಾಗಿದೆ.

ಮಕ್ಕಳ ಪರಿಪಾಲನೆಯಲ್ಲಿ ಸ್ತ್ರೀಗೆ ಅವಳ ಪಾತ್ರ ಇದೆ; ಆ ಬಗ್ಗೆ ಅವಳೊಡನೆ ಸಮಾಲೋಚನೆ ನಡೆಸ ಬೇಕಾಗಿದೆ. ಮಕ್ಕಳ ಸಂಗತಿಯಲ್ಲಿ ಅವಳ ಅಭೀಷ್ಟ ಗಳನ್ನೂ ಆಸಕ್ತಿಗಳನ್ನೂ ಅವಗಣಿಸಬಾರದು. ದಾದಿ ಯನ್ನು ನೇಮಿಸುವುದು; ಪಾಲನೆ ಪೋಷಣೆ ಮಾಡುವುದು ಮುಂತಾದ ಕಾರ್ಯಗಳಲ್ಲಿ ಅವಳ ಸಲಹೆಯನ್ನು ಪರಿಗಣಿ ಸಬೇಕಾಗಿದೆ. ಪತಿ ಪತ್ನಿಯರಿಗೆ ಒಟ್ಟಿಗೆ ಜೀವಿಸಲು ಅಸಾಧ್ಯವಾಗಿ, ಅಗಲಿಕೊಳ್ಳಲು ತೀರ್ಮಾನಿಸುವುದಾದರೆ, ಚಿಕ್ಕ ಮಕ್ಕಳನ್ನು ತಾಯಿಯ ಅಧೀನಕ್ಕೆ ಒಪ್ಪಿಸಬೇಕಾಗಿದೆ. ಪ್ರಾಯಕ್ಕೆ ಬಂದರೆ ವಿದ್ಯಾಭ್ಯಾಸವನ್ನು ಪಡೆಯಲಿಕ್ಕಾಗಿ ಅವರು ತಂದೆಯ ಬಳಿಗೆ ಬರಬಹುದು. ತಾಯಿಯೊಂದಿ ಗೆ ಇರುವಾಗಲೂ ಮಕ್ಕಳ ಖರ್ಚಿಗೆ ಕೊಡಲು ತಂದೆ ಬಾಧ್ಯನಾಗಿದ್ದಾನೆ. ಮಕ್ಕಳನ್ನು ಸಾಕಲಿಕ್ಕಾಗಿ ತಾಯಿ ಮಾಡಿದ ದೈಹಿಕ ಶ್ರಮಕ್ಕೂ ವ್ಯಯಿಸಿದ ಸಮಯಕ್ಕೂ ತಂದೆ ಪ್ರತಿಫಲ ನೀಡಬೇಕು. ಸಂಕ್ಷಿಪ್ತವಾಗಿ, ಸ್ತ್ರೀಗೆ ಸ್ವತಂತ್ರವಾದ ಒಂದು ಸ್ಥಾನವಿರಬೇಕಾಗಿದೆ. ಆಧ್ಯಾತ್ಮಿಕ ವಾದ ಎಲ್ಲಾ ಅನುಗ್ರಹಗಳ ದಾರಿ ಅವಳಿಗೆ ತೆರೆದಿರಿಸಲ್ಪ ಡಬೇಕಾಗಿದೆ. ಮರಣಾನಂತರ ಜೀವಿತದಲ್ಲಿ ಅತ್ಯಂತ ಉತ್ಕೃಷ್ಟ ಪದವಿಗಳು ಅವಳಿಗೆ ಲಭಿಸಬೇಕಾಗಿದೆ ಐಹಿಕ ಜೀವನದಲ್ಲಿ ಮತ್ತು ಪೌರಾಡಳಿತದಲ್ಲಿ ಅವಳು ತನ್ನ ಪಾತ್ರ ವಹಿಸಬಹುದಾಗಿದೆ, ಈ ಸಂಗತಿಗಳಲ್ಲೆಲ್ಲಾ ಪುರುಷನಿ ಗಿರುವ ಸ್ಥಾನ ಸ್ತ್ರೀಗೆ ಸಹ ಕೊಡಬೇಕಾಗಿದೆ.

ಮುಹಮ್ಮದ್ ಪೈಗಂಬರರು ಸ್ತ್ರೀಯರಿಗೆ ಸಂಬಂ ಧಿಸಿ ಘೋಷಿಸಿದ ತತ್ವಗಳೂ ನಿಯಮಗಳೂ ಈ ಮೇಲೆ ವಿವರಿಸಿದುದಾಗಿವೆ. ಆದರೆ ಪೈಗಂಬರರು ಇದನ್ನು ಜ್ಯಾರಿಗೊಳಿಸಿದ ಕಾಲದಲ್ಲಿ ಲೋಕದ ಬೌದ್ಧಿಕ ಹಾಗೂ ಸಾಂಸ್ಕೃತಿಕ ನೆಲೆ ಈ ಸಾಮಾಜಿಕ ಸುಧಾರಣೆಯನ್ನು ಅಂಗೀಕರಿಸುವ ಮಟ್ಟದಲ್ಲಿರಲಿಲ್ಲ. ಆದುದರಿಂದ ವಿರೋ ಧಗಳನ್ನು ಎದುರಿಸಬೇಕಾಗಿ ಬಂತು. ಈ ನಿರ್ದೇಶ–ಉಪದೇಶಗಳ ಮೂಲಕ ಸಹಸ್ರ ವರ್ಷಗಳ ಕಾಲ ಎಲ್ಲಾ ರಾಜ್ಯಗಳಲ್ಲೂ ಸ್ತ್ರೀ ಅನುಭವಿಸಬೇಕಾದ ದುರವಸ್ಥೆಯಿಂದ ಮತ್ತು ಧರ್ಮ ಅವಳ ಕುತ್ತಿಗೆಯ ಮೇಲಿರಿಸಿದ ಗುಲಾಮ ತನದ ನೊಗದಿಂದ ಅವಳನ್ನು ಅವರು ಮುಕ್ತಗೊಳಿಸಿ ದರು. ಒಬ್ಬನೇ ಒಬ್ಬ ವ್ಯಕ್ತಿ ಒಂದೇ ಹೊಡತಕ್ಕೆ ಈ ದಾಸತ್ವದ ಸಂಕೋಲೆಯನ್ನು ತುಂಡರಿಸಿದರು. ತಾಯಂ ದಿರನ್ನು ಸ್ವತಂತ್ರಗೊಳಿಸಿ ಗುಲಾಮತನದ ಮನೋಭಾವ ದಿಂದ ಸಂತಾನಗಳನ್ನು ಕಾಪಾಡಿ ಅವರಲ್ಲಿ ಉತ್ಕೃಷ್ಟ ಮನೋಭಾವನೆಗಳೂ ವೀರೋಚಿತ ಉತ್ಸಾಹವೂ ಅಂಕು ರಿಸಲು ಅರ್ಹರನ್ನಾಗಿ ಮಾಡಿದರು.

ಆದರೂ ಲೋಕ ಈ ಅಧ್ಯಾಪನಗಳನ್ನು ಮನ್ನಿಸ ಲಿಲ್ಲ. ಯಥಾರ್ಥದಲ್ಲಿ, ವರವನ್ನು ಉಗ್ರಶಾಸನವೆಂದು ಮುದ್ರೆಯೊತ್ತಲಾಯಿತು. ವಿವಾಹ ವಿಚ್ಛೇದನ ಮತ್ತು ಅಗಲಿಕೆ ಕಲಹಕ್ಕೆ ಕಾರಣವಾಗುವುದೆಂದೂ ಪಾರಂಪರ್ಯ ಹಕ್ಕು ಕುಟುಂಬವನ್ನು ನಾಶಗೊಳಿಸುವುದೆಂದೂ ಸ್ತ್ರೀ ಸ್ವಾತಂತ್ರ್ಯ ಗೃಹಜೀವನವನ್ನು ಹಾನಿಗೊಳಿಸುವುದೆಂದೂ ಭಾವಿಸಲಾಯಿತು. ಆ ಮಹಾ ಪುರುಷ ಮನುಷ್ಯವಂಶದ ಒಳಿತಿಗಾಗಿ ಜ್ಯಾರಿಗೊಳಿಸಲು ಇಚ್ಛಿಸಿದ ಈ ತತ್ವಗಳನ್ನು ಲೋಕ ಹದಿಮೂರು ಶತಮಾನ ಕಾಲ ಅಂಧತೆಯಿಂದ ಅಣಕಿಸಿತು. ಅವರ ಉಪದೇಶಗಳು ಮನುಷ್ಯ ಪ್ರಕೃತಿಗೆ ವಿರೋಧವಾದುವೆಂದು ಪರಿಗಣಿಸಿ ಅವುಗಳನ್ನು ಟೀಕಿಸ ಲಾಯಿತು.

ಅಂತೂ, ಕೊನೆಗೆ, ಪೈಗಂಬರರ ಮೂಲಕ ಘೋಷಿ ಸಲ್ಪಟ್ಟ ದಿವ್ಯ ವಚನಗಳ ಮಹತ್ವ ಸ್ವಯಂ ಪ್ರಕಟವಾ ಗುವ ಆ ಕಾಲ ಸಹ ಬಂದು ಮುಟ್ಟಿತು. ಪರಿಷ್ಕಾರ ಹಾಗೂ ನಾಗರಿಕತೆಯ ಸಂವಾಹಕರಾಗಿ ಸ್ವಯಂ ಅಭಿ ಮಾನಗೊಳ್ಳುತ್ತಿದ್ದ ಅದೇ ಜನರು ಪೈಗಂಬರರ ಸುಧಾರ ಣೆಯ ತತ್ವಗಳನ್ನು ಅನುಸರಿಸಲಿಕ್ಕೂ ಆಚರಿಸಲಿಕ್ಕೂ ಪ್ರೇರಿತರಾದರು. ಪ್ರತಿಯೊಂದು ಜನಾಂಗದವರು ತಮ್ಮ ನಿಯಮ ಶಾಸ್ತ್ರಗಳನ್ನು ಪೈಗಂಬರರ ನಿರ್ದೇಶನಗಳಿಗೆ ಅನುಗುಣವಾದ ರೀತಿಯಲ್ಲಿ ಬದಲಾಯಿಸಿಕೊಂಡರು.

ವ್ಯಭಿಚಾರ, ದುಷ್ಟ ವರ್ತನೆ, ಥಳಿಸುವುದು ಎಂಬಿತ್ಯಾದಿ ದುರ್ಗುಣಗಳು ಪತಿ–ಪತ್ನಿಯರ ಪೈಕಿ ಯಾರಿಗಾದರೂ ಇದ್ದರೆ ಮಾತ್ರ ಇಂಗ್ಲೆಂಡಿನಲ್ಲಿ ನಿಯಮ ಪ್ರಕಾರ ವಿವಾಹ ವಿಚ್ಛೇದನಕ್ಕೆ ಅನುಮತಿ ಇತ್ತು. 1923ರಲ್ಲಿ ಈ ಕಾನೂನು ಬದಲಾಯಿತು. ವಿವಾಹ ವಿಚ್ಛೇದನಕ್ಕೆ ತಕ್ಕುದಾದ ಕಾರಣವಾಗಿ ವ್ಯಭಿಚಾರ ಮಾತ್ರವಿದ್ದರೂ ಸಾಕಾಯಿತು.*

ಏಳು ವರ್ಷಗಳ ಕಾಲ ಮಾನಸಿಕ ರೋಗಿಯಾಗಿರುವ ಒಬ್ಬಳೊಡನೆ ವಿವಾಹ ಸಂಬಂಧ ಅಳಿಯುವುದೆಂದು 1912ರಲ್ಲಿ **ನ್ಯೂಝಿಲೇಂಡ್** ನಿಯಮ ಮಾಡಿತು. ಪತಿ ಅಥವಾ ಪತ್ನಿ ದಾಂಪತ್ಯ ಧರ್ಮವನ್ನು ಪಾಲಿಸದಿದ್ದರೆ ವಿವಾಹ ವಿಚ್ಛೇದನಕ್ಕೆ ಅಥವಾ ಅಗಲಿಕೆಗೆ ಒಪ್ಪಿಗೆಯೀಯಬಹುದೆಂದು ಸಹ 1925ರಲ್ಲಿ ಅಲ್ಲಿ ನಿಯಮವಾಯಿತು. ಅಲ್ಲಿ ಮೂರು ವರ್ಷಗಳ ಕಾಲ ಪತಿ-ಪತ್ನಿಯರು ಪರಸ್ಪರ ಗಮನಿಸುವುದಿಲ್ಲವಾದರೆ ವಿವಾಹ ವಿಚ್ಛೇದನ ಸಾಧ್ಯವಿದೆ. ಇದು ಮುಸ್ಲಿಂ ನಿಯಮ ಶಾಸ್ತ್ರಜ್ಞರ ವಿಧಿಗಳನ್ನು ಪೂರ್ಣವಾಗಿ ಅನುಸರಿಸುವಂತಹದಾಗಿದ್ದರೂ ಈ ಅನುಕರಣೆ 1300 ವರ್ಷಗಳ ಕಾಲ ಇಸ್ಲಾಮನ್ನು ವಿರೋಧಿಸಿದ ನಂತರವಾಗಿದೆ.

**ಆಸ್ಟ್ರೇಲಿಯದ ಕ್ವೀನ್ಸ್‌ಲೇಂಡಿನಲ್ಲಿ,** ಮಾನಸಿಕ ರೋಗದಿಂದ 5 ವರ್ಷಗಳ ಕಾಲ ಪೀಡಿತವಾಗಿದ್ದರೆ, ವಿವಾಹ ವಿಚ್ಛೇದನಕ್ಕೆ ನ್ಯಾಯವಾದ ಕಾರಣವಾಗುತ್ತದೆ.

ವ್ಯಭಿಚಾರ, ನಾಲ್ಕು ವರ್ಷಗಳ ವರೆಗೆ ಸಂಬಂಧವಿಲ್ಲದಿರುವುದು, ಮದ್ಯಪಾನ, 3 ವರ್ಷಗಳ ವರೆಗೆ ಅನಾಸ್ಥೆ, ಸೆರೆಮನೆ ಶಿಕ್ಷೆಗೆ ಗುರಿಯಾಗುವುದು, ಥಳಿಸುವುದು, ಚಿತ್ತಭ್ರಮೆ ಮೊದಲಾದ ಪ್ರತಿಯೊಂದು ವಿವಾಹ ವಿಚ್ಛೇದನಕ್ಕೆ ನ್ಯಾಯೀಕರಣವಾಗುತ್ತದೆಂದು 1919ರಲ್ಲಿ **ತಾಸ್ಮಾನಿಯಾದಲ್ಲಿ** ನಿಯಮ ಜ್ಯಾರಿಗೆ ಬಂತು,

ಮೂರು ವರ್ಷಗಳ ಕಾಲ ಗಂಡ ಹೆಂಡತಿಯನ್ನು ಸಾಕಿ ಸಲಹುವುದಿಲ್ಲವಾದರೆ, ವ್ಯಭಿಚರಿಸುವನಾದರೆ, ಹೆಂಡತಿಗೆ ಖರ್ಚಿಗೆ ಕೊಡುವುದಿಲ್ಲವಾದರೆ, ಹೆಂಡತಿಯೊಡನೆ ದುಷ್ಟವಾಗಿ ವರ್ತಿಸುವನಾದರೆ ವಿಚ್ಛೇದನ ಮಾಡಿಕೊಳ್ಳಬಹುದೆಂದು 1923ರಲ್ಲಿ **ವಿಕ್ಟೋರಿಯಾದಲ್ಲಿ** ನಿಯಮವಾಯಿತು. ಜೈಲುವಾಸ, ಪ್ರಹಾರ, ಪರಪುರುಷನೊಡನೆ ಪತ್ನಿಯ ಸಂಗ, ಹುಚ್ಚು, ದುರ್ವರ್ತನೆ, ನಿತ್ಯಕಲಹ ಇವು ಸಹ ವಿವಾಹ ವಿಚ್ಛೇದನಕ್ಕೆ ಅಥವಾ ಅಗಲಿಕೆಗೆ ತಕ್ಕುದಾದ ಕಾರಣವೆಂದು ಪರಿಗಣಿಸಲಾಯಿತು.

**ಪಶ್ಚಿಮ ಆಸ್ಟ್ರೇಲಿಯಾದಲ್ಲಿ,** ಮೇಲೆ ವಿವರಿಸಲಾದ ನಿಯಮಗಳಲ್ಲದೆ, ಗರ್ಭಿಣಿಯಾದ ಸ್ತ್ರೀಯ ವಿವಾಹವನ್ನು ಅಸಿಂಧುವೆಂದು ಪರಿಗಣಿಸಲಾಗುತ್ತದೆ. (ಇಸ್ಲಾಂ ಸಹ ಇದೇ ಮನೋದೃಷ್ಟಿಯನ್ನು ಇಟ್ಟುಕೊಂಡಿದೆ).

**ಕ್ಯೂಬಾದಲ್ಲಿ** 1918ರಲ್ಲಿ ಜ್ಯಾರಿಗೆ ಬಂದ ನಿಯಮ ಪ್ರಕಾರ, ವ್ಯಭಿಚಾರಕ್ಕೆ ನಿರ್ಬಂಧಿಸುವುದು, ಹೊಡೆಯುವುದು, ಅಸಭ್ಯವಾಗಿ ಮಾತನಾಡುವುದು, ಜೈಲು ಶಿಕ್ಷೆಗೆ ಗುರಿಯಾಗುವುದು, ಮದ್ಯಪಾನ, ಜೂಜಾಟ, ಋಣಾನುಬಂಧವನ್ನು ನಿರ್ವಹಿಸದಿರುವುದು, ಖರ್ಚಿಗೆ ಕೊಡದಿರುವುದು, ಸಾಂಕ್ರಮಿಕ ರೋಗ, ಮೊದಲಾದ ಕಾರಣಗಳನ್ನು ತೋರಿಸಿ ಅಥವಾ ಉಭಯ ಸಮ್ಮತದಿಂದಲೂ ವಿವಾಹ ವಿಚ್ಛೇದನ ಮಾಡಿಕೊಳ್ಳಬಹುದು,

ಸ್ತ್ರೀ ಆಸ್ತಿಯ ಮೇಲೆ ಹಕ್ಕನ್ನು ಹೊಂದಬಹುದೆಂದು 1919ರಲ್ಲಿ **ಇಟಲಿ*** ಕಾನೂನು ಮಾಡಿತು. ಅವಳ ಇಷ್ಟ ಪ್ರಕಾರ ತನ್ನ ಸೊತ್ತಿನಿಂದ ದಾನ ಮಾಡಿಕೊಳ್ಳಬಹುದು; ಅಥವಾ ಸೊತ್ತನ್ನು ಮಾರಾಟ ಮಾಡಿಕೊಳ್ಳಬಹುದು. (ಅಷ್ಟರ ವರೆಗೆ ಸ್ತ್ರೀ ಅವಳ ಆಸ್ತಿಗೆ ಒಡೆಯಳೆಂದು ಯುರೋಪಿನಲ್ಲಿ ಪರಿಗಣಿಸಲ್ಪಟ್ಟಿರಲಿಲ್ಲ.)

**ಮೆಕ್ಸಿಕೋದಲ್ಲಿ** ಸಹ ವಿವಾಹ ವಿಚ್ಛೇದನಕ್ಕೆ ಮೇಲಿನ ಕಾರಣಗಳೇ ಅಂಗೀಕರಿಸಲ್ಪಟ್ಟವು. ಇದರ ಹೊರತು ಉಭಯ ಸಮ್ಮತಿಯಿಂದಲೂ ವಿಚ್ಛೇದನ

---

* ಪುನಃಸ್ಥಾಪಿಸಲು ಸಾಧ್ಯವಾಗದಂತಹ ದಾಂಪತ್ಯ ವಿಘಟನೆ ಮಾತ್ರವೇ ವಿವಾಹ ವಿಚ್ಛೇದನಕ್ಕೆ ಏಕ ಕಾರಣವಾಗಿ ಅಂಗೀಕರಿಸಿ ಒಂದು ನಿಯಮವನ್ನು 1969 ಜೂನ್ 14ರಂದು ಕಾಮನ್ಸ್ ಸಭೆ ಪಾಸು ಮಾಡಿತು. —ಸಂ.

* ಲೈಂಗಿಕ ಅಪರಾಧಕ್ಕೆ ಶಿಕ್ಷಿಸಲ್ಪಡುವುದು, 12 ವರ್ಷ ಕಾಲ ಜೈಲುವಾಸದಲ್ಲಿರುವುದು, ನಿಯಮಾನುಸಾರ 5 ವರ್ಷ ಕಾಲ ಅಗಲಿ ಜೀವಿಸುವುದು, 5 ವರ್ಷಕಾಲ ಹುಚ್ಚಾಸ್ಪತ್ರೆಯಲ್ಲಿ ರೋಗಿಯಾಗಿರುವುದು, ದಾಂಪತ್ಯ ಸಂಬಂಧ ಯಥಾರ್ಥದಲ್ಲಿ ಸ್ಥಾಪಿಸದಿರುವುದು, ಮೊದಲಾದ ಕಾರಣಗಳಿಂದ ವಿವಾಹ ವಿಚ್ಛೇದನಕ್ಕೆ ನಿಯಮದ ಒಪ್ಪಿಗೆ ನೀಡಬಹುದೆಂಬ ಒಂದು ಕಾನೂನು ವೆಟಿಕನ್‌ನ ಬಿಷಪರುಗಳ ಶಕ್ತಿಯುತವಾದ ವಿರೋಧವನ್ನು ಅವಗಣಿಸಿ 1969 ರಲ್ಲಿ ಇಟಲಿಯಲ್ಲಿ ಜ್ಯಾರಿಗೆ ಬಂತು. —ಸಂ.

ಮಾಡಿಕೊಳ್ಳಬಹುದು. 1917ರಲ್ಲಿ ಈ ನಿಯಮ ಅಲ್ಲಿ ಜ್ಯಾರಿಗೆಬಂತು.

**ಪೋರ್ಚುಗಲ್** 1915ರಲ್ಲಿ, **ನೋರ್ವೆ** 1909 ರಲ್ಲಿ, **ಸ್ವೀಡನ್** 1920ರಲ್ಲಿ, **ಸ್ವಿಟ್ಜರ್ಲೇಂಡ್** 1912 ರಲ್ಲಿ ವಿವಾಹ ವಿಚ್ಛೇದನ ಮತ್ತು ಅಗಲಿಕೆ ನ್ಯಾಯಬದ್ಧ ವೆಂದು ನಿಯಮವನ್ನು ಅಂಗೀಕರಿಸಿದವು. ಸ್ವೀಡನಿನ ಕಾನೂನು ಪ್ರಕಾರ ತನ್ನ ಪ್ರತಿಯೊಂದು ಮಗುವಿಗೆ ಕನಿಷ್ಠ ಪಕ್ಷ 18 ವರ್ಷ ಪ್ರಾಯದ ವರೆಗಾದರೂ ಪಾಲನೆ ಪೋಷಣೆಗೆ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡ ಬೇಕು.

ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ತನ್ನ ಮಕ್ಕಳ ಮೇಲಿನ ತಂದೆಯ ಹಕ್ಕನ್ನು ಕಾನೂನು ಬೆಂಬಲಿಸುವುದಾದರೂ ಪ್ರಯೋಗದಲ್ಲಿ, ಅಲ್ಲಿಯ ನ್ಯಾಯಾಧೀಶರು ತಾಯಂದಿರ ಮನೋಮಾರ್ದವಗ ಳನ್ನೂ ವಿಷಮ ಪರಿಸ್ಥಿತಿಗಳನ್ನೂ ಪರಿಗಣಿಸಿ, ತಾಯಿ ಯೊಂದಿಗೆ ವಾಸಿಸುವ ಮಕ್ಕಳಿಗೂ ಖರ್ಚಿಗೆ ಕೊಡಲು ತಂದೆಯನ್ನು ನಿರ್ಬಂಧಿಸುತ್ತಾರೆ. ಅವರ ನಿಯಮ ಕಟ್ಟಳೆಗಳಲ್ಲಿ ಹಲವು ನ್ಯೂನತೆಗಳಿವೆಯೆಂಬುದು ದಿಟ. ಆದರೂ ಪುರುಷನ ಹಕ್ಕುಗಳನ್ನು ಹೆಚ್ಚು ಸುರಕ್ಷಿತಗೊಳಿ ಸುವುದರೊಂದಿಗೆ ಸ್ತ್ರೀಗೆ ಸಹ ಆಸ್ತಿಯ ಮೇಲೆ ಅವಳ ಹಕ್ಕನ್ನು ಚಲಾಯಿಸಲು ಸಮ್ಮತಿಸಲಾಗುತ್ತದೆ. ಅದೇ ಸಮಯದಲ್ಲಿ, ಗಂಡ ನಿತ್ಯರೋಗಿಯೆಂದಾದರೆ, ಹೆಂಡತಿ ಅವನನ್ನು ಸಲಹಬೇಕೆಂಬ ನಿಯಮ ಸಹ ಅಲ್ಲಿ ಹಲವೆಡೆ ಗಳಲ್ಲಿ ರೂಢಿಯಲ್ಲಿದೆ.

ಸ್ತ್ರೀಗೆ ಇಂದು ಓಟಿನ ಹಕ್ಕಿದೆ. ದೇಶಕ್ಕೆ ಸಂಬಂಧಿ ಸಿದ ವಿಚಾರಗಳಲ್ಲಿ ಸ್ತ್ರೀಯರು ತಮ್ಮ ಅಭಿಪ್ರಾಯವನ್ನು ಪ್ರಕಟಿಸುವ ಅವಕಾಶ ಇಂದು ಇದೆ. ಆದರೆ ಇವೆಲ್ಲಾ ಉಂಟಾದುದು ಮುಹಮ್ಮದ್ ಪೈಗಂಬರರು ತನ್ನ ಅಧ್ಯಾ ಪನೆಗಳನ್ನು ಜ್ಯಾರಿಗೆ ತಂದು 1300 ವರ್ಷಗಳು ಕಳೆದ ನಂತರ ಮಾತ್ರವಾಗಿದೆ. ಇನ್ನೂ ಹಲವು ಸಂಗತಿಗಳು ರಂಗ ಪ್ರವೇಶ ಮಾಡಲಿಕ್ಕಿವೆ. ಹಲವು ರಾಜ್ಯಗಳಲ್ಲಿ ಇನ್ನೂ ಸ್ತ್ರೀಗೆ ಮಾತಪಿತರ ಮತ್ತು ಗಂಡನ ಆಸ್ತಿಪಾಸ್ತಿ ಗಳ ಮೇಲೆ ಉತ್ತರಾಧಿಕಾರದ ಹಕ್ಕು ನೀಡಲ್ಪಟ್ಟಿಲ್ಲ.*

ಹಲವು ಸಂಗತಿಗಳ ಬಗ್ಗೆ ಇಸ್ಲಾಂ ಲೋಕಕ್ಕೆ ಮಾರ್ಗದರ್ಶನವಿತ್ತಿದೆ, ಅವುಗಳನ್ನು ಲೋಕವು ಮನ್ನಿ ಸದಿದ್ದರೂ, ಮುಹಮ್ಮದ್ ಪೈಗಂಬರರು ಇತರ ಸಂಗತಿ ಗಳ ಕುರಿತು ನೀಡಿದ ನಿರ್ದೇಶನಗಳು ಸ್ವೀಕೃತವಾದಂತೆ ಯೇ ಈ ಸಂಗತಿಗಳಿಗೆ ಸಂಬಂಧಿಸಿದ ಉಪದೇಶಗಳನ್ನು ಸಹ ಜಗತ್ತು ಅಂಗೀಕರಿಸುವ ಕಾಲ ವಿದೂರವಲ್ಲ. ಸ್ತ್ರೀ ಸ್ವಾತಂತ್ರ್ಯಕ್ಕೆ ಬೇಕಾಗಿ ಪೈಗಂಬರರು ಆರಂಭಿಸಿದ ಹೋರಾಟ ಅದರ ಪೂರ್ಣ ಫಲವನ್ನು ನೀಡುವ ಸಮಯ ಸಹ ವಿದೂರವಲ್ಲ. ★

---

*ಕ್ರೈಸ್ತ ಧರ್ಮೀಯರ ಸ್ತ್ರೀಯರಿಗೆ ಕುಟುಂಬದ ಸೊತ್ತಿ ನಲ್ಲಿ ಪಾಲು ಸಿಗುವ ನಿಯಮವನ್ನು ಜ್ಯಾರಿಗೊಳಿಸುವರೆ 1975 ರಲ್ಲಿ ಕೇರಳ ರಾಜ್ಯದ ಮಂತ್ರಿ ಮಂಡಲ ಅಂಗೀಕರಿಸಿತು. —ಸಂ.


# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: **ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್**

ಪುಟ: **60** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: **ಉಚಿತ**

ಬರೆಯಿರಿ: **Book Secretary, Ahmadiyya Muslim Mission,**
**10-23/1008, Ansari Road, Bunder, Mangalore-575 001.**

# ಬುರ್ಖಾ ಧರಿಸಿ ಆಕ್ಸ್‌ಫರ್ಡ್‌ನಲ್ಲಿ

★ ಡಾ। ಅಮತುಲ್ ಮುಜೀಬ್, ಡಿ. ಫಿಲ್. (ಆಕ್ಸನ್)

ನಾನು ನನ್ನ ವಿದ್ಯಾಭ್ಯಾಸ ಕಾಲವನ್ನು ಪಾಕಿಸ್ತಾನದಲ್ಲೂ ಹೊರಗೂ ಇಸ್ಲಾಮೀ ಪರ್ದಾ ಧರಿಸಿಕೊಂಡೇ ಪೂರ್ತಿಗೊಳಿಸಿರುವೆನು. ಪಾಕಿಸ್ತಾನದಲ್ಲಿ ಮನೆಯಿಂದ ಹೊರಗೆ ಹೋಗುವಾಗಲೂ ಲಾಬೊರಟರಿಯಲ್ಲಿ ಪ್ರಾಕ್ಟಿಕಲ್ ಮಾಡುವಾಗಲೂ ಬುರ್ಖಾ ಧರಿಸುವುದರಲ್ಲಿ ನನಗೆ ಪ್ರಯಾಸವೇನೂ ಉಂಟಾಗಲಿಲ್ಲ. ಆದರೆ ಎಂ.ಎಸ್.ಸಿ.ಯ ನಂತರದ ನನ್ನ ವ್ಯಾಸಂಗದಲ್ಲಿ ಆರಂಭದಿಂದಲೇ, ಗೋಷಾ ಪದ್ಧತಿಯನ್ನು ಆಚರಿಸಬೇಕೆಂಬ ನನ್ನ ನಿಷ್ಕರ್ಷೆ ನನಗೆ ಸ್ವಲ್ಪ ತೊಡಕುಂಟುಮಾಡಿತು. ವಿದೇಶಕ್ಕೆ ಹೋಗಲಿಕ್ಕೆ ಸ್ಕಾಲರ್‌ಶಿಪ್‌ಗಾಗಿ ಅರ್ಜಿ ಸಲ್ಲಿಸಿದಾಗ ದೈವಾನುಗ್ರಹದಿಂದ ಯೋಗ್ಯತಾನುಸಾರ ನಾನು ಆಯ್ಕೆಗೊಂಡೆನಾದರೂ ಇಂಟರ್‌ವ್ಯೂ ವೇಳೆಯಲ್ಲಿ ಸಿಲೆಕ್ಷನ್ ಕಮಿಟಿಯ ವಿದೇಶಿ ಕಾರ್ಯದರ್ಶಿ ಗೋಷಾದ ಬಗ್ಗೆ ನನ್ನ ನಿಷ್ಠೆ ಪರದೇಶದಲ್ಲಿ ತೊಂದರೆಯುಂಟು ಮಾಡೀತೆಂದು ಹೇಳಿ ನನ್ನ ಅಪೇಕ್ಷೆಯನ್ನು ತಳ್ಳಿಹಾಕಿದರು. ವ್ಯಾಸಂಗವೇತನ ಸಿಗದುದರಿಂದ ಸ್ವಾಭಾವಿಕವಾಗಿ ನನಗೆ ದುಃಖವುಂಟಾದರೂ ಅಲ್ಲಾಹನು ಇಷ್ಟ ಪಡದ ರೀತಿಯಲ್ಲಿ ವಿದ್ಯಾಭ್ಯಾಸ ಮಾಡಿ ಏನು ಪ್ರಯೋಜನವೆಂದು ನಾನು ಯೋಚಿಸಿದೆ. ಅಲ್ಲಾಹನಿಗೆ ಸಹಸ್ರ ಸಹಸ್ರ ನಮನಗಳು! ಅವನು ಕೆಲವೇ ಮಾಸಗಳೊಳಗೆ ಬೇರೊಂದು ಸ್ಕಾಲರ್‌ಶಿಪ್‌ನ ದಾರಿಯನ್ನು ನನಗೆ ತೆರೆದು ಕೊಟ್ಟನು.

ಇಂಗ್ಲೆಂಡಿಗೆ ಹೋದ ನಂತರ ಮೊದಲ ಒಂದು ವರ್ಷ ಕಾಲ ಪರ್ದಾದ ಬಗ್ಗೆ ನನಗೆ ತೊಂದರೆಗಳು ಎದುರಾದುವು. ಅಲ್ಲಿ ಬುರ್ಖಾ ಬಿಡಿ, ಚಾದರ್ (ಮೇಲು ಹೊದಿಕೆ) ಧರಿಸಿದ ಸ್ತ್ರೀಯರನ್ನು ಅಪೂರ್ವವಾಗಿ ಕಾಣಬಹುದು. ಆ ರಾಜ್ಯದವರಿಗೆ ಬುರ್ಖಾ ಒಂದು ಅದ್ಭುತವಾಗಿತ್ತು. ಬುರ್ಖಾದ ಕಪ್ಪು ಬಣ್ಣವನ್ನು ಕಂಡು ಕೆಲವರು ನನ್ನನ್ನು ವಿಧವೆಯೆಂದು ತಿಳಿದುಕೊಂಡರು. ರಸ್ತೆಗಳಲ್ಲಿ ನಡೆಯುವಾಗ ಹಲವರ ಪರಿಹಾಸ್ಯ ಮಾತುಗಳಿಗೆ ನಾನು ಗುರಿಯಾದೆನು. ಅಪಹಾಸ್ಯ ಮಾಡುವವರ ಪೈಕಿ ಆಂಗ್ಲೇಯರು ಕಮ್ಮಿ ಮತ್ತು ಏಶ್ಯಾದವರು ಹೆಚ್ಚು.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸದಸ್ಯರು ವಿದ್ಯಾರ್ಥಿಗಳಾದರೂ ಪ್ರಾಧ್ಯಾಪಕರಾದರೂ ಬೇರೆ ಯಾವುದಾದರೂ ಕಾಲೇಜಿನೊಂದಿಗೆ ಸಂಬಂಧವಿರಿಸಬೇಕಾದುದು ಅಗತ್ಯ. (ಕಾಂಬ್ರಿಜ್ ವಿಶ್ವವಿದ್ಯಾಲಯದಲ್ಲೂ ಇದೇ ನಿಯಮವಿದೆ.) ಆದರೆ ಪಾಠಪ್ರವಚನಗಳನ್ನು ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಒಂದೇ ಸ್ಥಳದಲ್ಲಿ ನಡೆಸಲಾಗುತ್ತದೆ. ಹಾಗೆಯೇ ಸಂಶೋಧನೆ ನಡೆಸುವುದು ವಿದ್ಯಾರ್ಥಿಗಳೂ ಪ್ರೊಫೆಸರುಗಳೂ ನಿರ್ದಿಷ್ಟ ಡಿಪಾರ್ಟ್‌ಮೆಂಟುಗಳಲ್ಲಾಗಿದೆ. ನಾನು ಒಂದು ವನಿತಾ ಕಾಲೇಜಿಗೆ ಸೇರಿದವಳು. ಮೂರು ವರ್ಷ ಕಾಲ ಅಲ್ಲಿ ನಾನು ವ್ಯಾಸಂಗ ಮಾಡಿದೆ. ಲೆಕ್ಚರ್ ಕೇಳಲಿಕ್ಕೂ ರಿಸರ್ಚ್ ಮಾಡಲಿಕ್ಕೂ ನಾನು ಬುರ್ಖಾ ಧರಿಸಿಕೊಂಡೇ ಹೋಗುತ್ತಿದ್ದೆ. ನನ್ನ ಈ ರೀತಿಯನ್ನು ವಿದ್ಯಾರ್ಥಿಗಳೂ ಪ್ರೊಫೆಸರುಗಳೂ ಬಹಳ ಆಶ್ಚರ್ಯದಿಂದಲೂ 'ಅನುಕಂಪ'ದಿಂದಲೂ ವೀಕ್ಷಿಸುತ್ತಿದ್ದರು. ಇತರರು ಏನು ಬೇಕಾದರೂ ಭಾವಿಸಲಿ. ನಾನು ನನ್ನ ದೇವರನ್ನು ತೃಪ್ತಿಪಡಿಸಬೇಕೆಂದು ದೃಢಚಿತ್ತನಾಗಿದ್ದೆ.

ಸುಮಾರು ಒಂದು ವರ್ಷದ ಬಳಿಕ ಅವರಲ್ಲಿ ಬದಲಾವಣೆಯುಂಟಾಯಿತು. ನನ್ನನ್ನು ನಿಂದಾದೃಷ್ಟಿಯಿಂದ ವೀಕ್ಷಿಸುತ್ತಿದ್ದವರು ಗೌರವದಿಂದ ಕಾಣಲು ತೊಡಗಿದರು. ನಾನು ನಿಂದಿಸಲ್ಪಟ್ಟಾಗ ಮತ್ತು ಪರಿಹಾಸ್ಯಕ್ಕೆ ಈಡಾದಾಗ ನನಗಿಂತ ಹೆಚ್ಚು ದುಗುಡವೂ ನೋವೂ ನನ್ನ ಸಹಪಾಠಿಗಳಿಗೂ ಅಧ್ಯಾಪಕರಿಗೂ ಉಂಟಾಗುತ್ತಿತ್ತು. ನಾನು ಒಂದು ಘಟನೆಯನ್ನು ವಿವರಿಸುತ್ತೇನೆ :

ಒಂದು ದಿನ ಸಂಜೆ ನಾನೂ ಸಿಂಗಾಪುರದ ನನ್ನ ಚೀನೀ ಸಹಪಾಠಿಯೂ ಹಾಸ್ಟೆಲಿಗೆ ಮರಳುತ್ತಿದ್ದೆವು.

ದಾರಿಯಲ್ಲಿ ಒಂದು ಶರಾಬು ಅಂಗಡಿಯ ಬಳಿ ಕೆಲವು ಅರಬಿ ಯುವಕರು ನಿಂತುಕೊಂಡಿದ್ದರು. ಅವರು ನನ್ನ ಬುರ್ಖಾದ ಕುರಿತು ಅಪಹಾಸ್ಯ ಮಾಡತೊಡಗಿದರು. ನಾನು ವಾಡಿಕೆಯಂತೆ ಅದೇನೂ ಕೇಳದ ಮಟ್ಟಿನಲ್ಲಿ ದಾಟಿ ಹೋಗುತ್ತಿದ್ದೆ. ಆದರೆ ನನ್ನ ಸಹಪಾಠಿ ತುಂಬಾ ಕೋಪಗೊಂಡು ಅಲ್ಲೇ ನಿಂತು ಬಿಟ್ಟಳು. ಅವರಿಗೆ ಬುದ್ಧಿಕಲಿಸಿ ಬರುತ್ತೇನೆಂದು ಆಕೆ ಹೇಳಿದಳು. ಆಕೆಯನ್ನು ಅಲ್ಲಿಂದ ಕದಲಿಸಲಿಕ್ಕೆ ನಾನು ಪ್ರಯಾಸಪಡಬೇಕಾಯಿತು. ನನ್ನನ್ನೇಕೆ ತಡೆದೆ ಎಂದು ಕೇಳಿ ಆಕೆ ಆ ಮೇಲೆ ನನ್ನೊಡನೆ ತರಾಟೆಗಿಳಿದಳು. ನನ್ನನ್ನು ಯಾರಾದರೂ ಅಪಹಾಸ್ಯ ಮಾಡಿದರೆ ನನಗೇನೂ ತಟ್ಟುವುದಿಲ್ಲ. ನಾನು ಅದಕ್ಕೆಲ್ಲಾ ಲಕ್ಷ್ಯಕೊಡುವುದಿಲ್ಲವೆಂದು ನಾನು ಆಕೆಯನ್ನು ಸಮಾಧಾನ ಪಡಿಸಿದೆ. "ಮುಸ್ಲಿಮರೆಂದು ಹೇಳುವ ನೀವು ಶರಾಬು ಅಂಗಡಿಯಲ್ಲಿ ಕಾಲಕಳೆಯುತ್ತೀರಿ. ಇಸ್ಲಾಮಿ ಸಂಪ್ರದಾಯವನ್ನು ಪಾಲಿಸುವ ಈ ಹೆಣ್ಮಗಳನ್ನು ನೀವು ಅಪಹಾಸ್ಯ ಮಾಡುತ್ತೀರಿ; ನಿಮಗೆ ನಾಚಿಕೆಯಾಗುವುದಿಲ್ಲವೇ?" ಹೀಗೆ ತಾನು ಅವರೊಡನೆ ಕೇಳಲು ಉದ್ದೇಶಿಸಿದ್ದೆ ಎಂದಾಕೆ ಹೇಳಿದಳು.

ಡಾಕ್ಟರೇಟ್‌ನ ಎರಡನೇ ವರ್ಷ ಒಂದು ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲಿಕ್ಕೆ ನಾನು ಸ್ಕಾಟ್‌ಲಾಂಡಿಗೆ ಹೋಗಿದ್ದೆ. ಅಲ್ಲಾಹನ ಅನುಗ್ರಹದಿಂದ ಅಲ್ಲಿ ಸಮ್ಮೇಳಿಸಿದ್ದ ಬ್ರಿಟಿಷ್ ಯೂನಿವರ್ಸಿಟಿಗಳ ವಿದ್ಯಾರ್ಥಿಗಳಾದ ರಿಸರ್ಚ್ ಸ್ಕಾಲರ್ಸ್‌ಗಳಲ್ಲಿ ನನ್ನ ಪ್ರಬಂಧ ಮಾತ್ರ ಆಯ್ಕೆಗೊಂಡಿತು. ಅದರ ಕುರಿತು ವಿಶದೀಕರಿಸಿ ಭಾಷಣ ಮಾಡಲು ನನ್ನೊಡನೆ ಕೇಳಿಕೊಳ್ಳಲಾಯಿತು. ಸಮ್ಮೇಳನದಲ್ಲಿ ಭಾಗವಹಿಸಲಿಕ್ಕೆ ಬಂದವರಿಗೆ ಊರೆಲ್ಲಾ ತಿರುಗಾಡಿಕೊಂಡು ಬರಲಿಕ್ಕೆ ಏರ್ಪಾಡುಗಳನ್ನು ಮಾಡಲಾಗಿತ್ತು. ಒಂದು ಆದಿತ್ಯವಾರದಂದು ದಕ್ಷಿಣ ದಿಕ್ಕಿನಲ್ಲಿರುವ ಬಲ್ಲಾಟರ್ (Ballater) ಎಂಬ ಗ್ರಾಮದಲ್ಲಿ ಸಾವಿರಾರು ಅಡಿ ಎತ್ತರದ ಒಂದು ಪರ್ವತ ಶಿಖರಕ್ಕೇರುವ ಕಾರ್ಯಕ್ರಮವಿತ್ತು. ಪರ್ವತಾರೋಹಣದಲ್ಲಿ ಆಸಕ್ತಿಯಿಲ್ಲದವರಿಗೆ, ಮುಖ್ಯವಾಗಿ ಸ್ತ್ರೀಯರಿಗೆ ಸ್ಕಾಟ್‌ಲಾಂಡಿನ ರಾಜಧಾನಿ ಎಡಿನ್‌ಬರ್ಗ್ ಸಂದರ್ಶಿಸುವ ಕಾರ್ಯಕ್ರಮವಿತ್ತು. ನಾನು ಪರ್ವತಾರೋಹಣವನ್ನು ಆಯ್ಕೆ ಮಾಡಿದೆ. ಹಲವರು ಅದು ನನ್ನ ಮಟ್ಟಿಗೆ ಯೋಗ್ಯ ಆಯ್ಕೆಯಲ್ಲವೆಂದು ಭಾವಿಸಿದರು. ನಾನು ಯೋಚಿಸಿದೆ: ದೇವರು ಸುಂದರವಾದ ನಿಸರ್ಗ ಸಂಪತ್ತನ್ನು ಸೃಷ್ಟಿಸಿರುವನು. ಅದನ್ನು ನೋಡುವುದಕ್ಕೆ ತಡೆಯೇನೂ ಇಲ್ಲ. ಪಟ್ಟಣವನ್ನು ಬೇರೊಂದು ಸಂದರ್ಭದಲ್ಲಿ ಒಬ್ಬಂಟಿಗಳಾಗಿಯೂ ಸಂದರ್ಶಿಸಬಹುದು. ಆದರೆ ಒಂಟಿಯಾಗಿ ಪರ್ವತವನ್ನೇರುವುದು ಪ್ರಯಾಸಕರ. ಹಾಗೆ ಪರ್ವತಾರೋಹಣ ಕಾರ್ಯಕ್ರಮದಲ್ಲಿ ನಾನು ಸಹ ಪಾಲ್ಗೊಂಡೆನು. ಕೊನೆಗೆ ಕಾರ್ಯಕ್ರಮ ಮುಗಿದು ಜೊತೆಗಾರರೊಂದಿಗೆ ಹಿಂತೆರಳಿದಾಗ ಕಾನ್ಫರೆನ್ಸ್ ಡೈರೆಕ್ಟರ್ ನನ್ನನ್ನು ತುಂಬಾ ಪ್ರಶಂಸೆ ಮಾಡಿ ನನ್ನ ಪ್ರತ್ಯೇಕ ತರದ ಪೋಷಾಕಿನಿಂದ ಏನೂ ಮಾಡಲು ಸಾಧ್ಯವಿದೆಯೆಂದು ನಾನು ಸಾಬೀತು ಪಡಿಸಿರುವೆನೆಂದು ಹೇಳಿದರು,

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಇಲ್ಲಿನ ಇತರ ಕಾಲೇಜುಗಳಲ್ಲಿರುವಂತೆ ಯೂನಿಫಾರ್ಮ್ ಇಲ್ಲ. ಆದ್ದರಿಂದ ನಾನು ಬುರ್ಖಾ ಧರಿಸುವುದು ಇಲ್ಲಿ ಆಕ್ಷೇಪಾರ್ಹವಾಗಿರಲಿಲ್ಲ. ಆದರೆ ಪರೀಕ್ಷಾ ವೇಳೆಯಲ್ಲೂ ಘಟಿಕೋತ್ಸವ ಸಂದರ್ಭದಲ್ಲೂ ವಿಶೇಷ ಉಡುಪು ಧರಿಸುವುದು ಅಗತ್ಯವಾಗಿತ್ತು. ಮಹಿಳೆಯರು ಬಿಳಿ ರವಿಕೆ, ಕಪ್ಪು ಲಂಗ ಮತ್ತು ಮೇಲೆ ಕಪ್ಪು ಗೌನು ಧರಿಸಬೇಕಾಗಿತ್ತು. ವಾಚಾ ಪರೀಕ್ಷೆಯ (Viva) ಸಮಯದಲ್ಲೂ ಇದೇ ರೀತಿಯ ಉಡುಪನ್ನು ಧರಿಸಬೇಕಾಗಿತ್ತು. ನಾನು ಕಳವಳಗೊಂಡು ಬಹಳ ಪ್ರಾರ್ಥನೆ ಮಾಡಿದೆ: "ಅಲ್ಲಾಹನೆ, ನಿನ್ನ ಅನುಗ್ರಹದಿಂದ ಮೂರು ವರ್ಷಕಾಲ ಗೋಷಾ ಸಹಿತ ನನ್ನ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದೆ. ಕೊನೆಯ ಘಟ್ಟದಲ್ಲಿ ಸ್ಕರ್ಟ್ ಮತ್ತು ಬ್ಲೌಸ್ ಧರಿಸಿ ಡಿಪಾರ್ಟ್‌ಮೆಂಟಿಗೆ ಹೋಗುವುದಾದರೆ, ಪರ್ದಾ ನನ್ನ ಪ್ರಗತಿಗೆ ತಡೆಯಾಗುತ್ತದೆಂಬ ಆರೋಪ ಸರಿಯೆಂದು ಸಾಬೀತಾದೀತು. ಆದ್ದರಿಂದ ಒಂದು ಮಾರ್ಗವನ್ನು ನನಗೆ ತೋರಿಸು." ನಾನು ಯೂನಿವರ್ಸಿಟಿಯ ನಿಯಮಾವಳಿಯನ್ನು ಓದಿದೆ. ಆ ವಿಶ್ವವಿದ್ಯಾಲಯದಂತೆ ನಿಯಮಸಂಹಿತೆಯೂ ಸುಮಾರು 750 ವರ್ಷ ಹಿಂದಿನದಾಗಿದೆ. ಅದರಲ್ಲಿ ಬದಲಾವಣೆ ಮಾಡಲು ಯಾರಿಗೂ ಅಧಿಕಾರವಿಲ್ಲ. ನಿಯಮಾವಳಿಯ ಒಂದು ಕಡೆಯಲ್ಲಿ, ಆಗತ್ಯ ಬಿದ್ದರೆ ಯಾರಿಗಾದರೂ ಹಿಂದಿನ ಯೂನಿವರ್ಸಿಟಿಯ ಯೂನಿಫಾರ್ಮ್ ಧರಿಸಬಹುದೆಂದು ಬರೆದುದಾಗಿ ನಾನು ಕಂಡೆ. ಪಂಜಾಬ್ (ಪಾಕಿಸ್ತಾನ್) ಯೂನಿವರ್ಸಿಟಿಯಲ್ಲಿ ಪ್ರತ್ಯೇಕ ಸಮವಸ್ತ್ರ ನಿರ್ಬಂಧಕರವಾಗಿರಲಿಲ್ಲ. ಪದವೀದಾನ

ಸಮಾರಂಭದಲ್ಲಿ ವನಿತಾ ಲೆಕ್ಚರರುಗಳು ಸಾಮಾನ್ಯವಾಗಿ ಬಿಳಿ ಸೀರೆ ಧರಿಸುತ್ತಿದ್ದರು. ನಾನು ಬಿಳಿ ಸೀರೆಗೆ ಬದಲು ಬಿಳಿ ಬುರ್ಖಾ ಮತ್ತು ಮೇಲೆ ಕಪ್ಪು ನಿಲುವಂಗಿ ಧರಿಸಲು ನಿರ್ಧರಿಸಿದೆ. ಹಾಗೆ ಮಾಡಿದರೆ ಬಿಳಿ ಮತ್ತು ಕಪ್ಪು ಪೋಷಾಕು ಧರಿಸಬೇಕೆಂಬ ನಿಬಂಧನೆ ಪಾಲಿಸಿದಂತಾಗುತ್ತದೆ. ಹಾಗೆ ಬಿಳಿ ಬುರ್ಖಾ ಮತ್ತು ಕಪ್ಪು ನಿಲುವಂಗಿ ಧರಿಸಿ ವಾಚಾ ಪರೀಕ್ಷೆಗಾಗಿ ಕೋಣೆಯನ್ನು ಪ್ರವೇಶಿಸಿದಾಗ ಪರೀಕ್ಷೆ ನಡೆಸುವ ಪ್ರೊಫೆಸರ್ ಮೊದಲು ನನ್ನೊಡನೆ ಕೇಳಿದ ಪ್ರಶ್ನೆ ಒಂದು ವೇಳೆ ನಿಮ್ಮನ್ನೂ ಚಕಿತಗೊಳಿಸೀತು. ಅವರು ಕೇಳಿದರು– "ನಿಮಗೆ ಗೊತ್ತಿದೆಯೇ, ನಾವಿಲ್ಲಿ ಅರ್ಧ ತಾಸು ಕಾಲ ಯಾವ ವಿಷಯದ ಬಗ್ಗೆ ಚರ್ಚೆ ಮಾಡುತ್ತಿದ್ದೆವೆಂದು ? ನಾನು ಗಾಬರಿಗೊಂಡೆ. ನನ್ನ ಸಂಶೋಧನಾ ಪ್ರಬಂಧದಲ್ಲಿ ಕುಂದೇನಾದರೂ ಇದ್ದಿರಬಹುದೆಂದೂ ಅದರ ಬಗ್ಗೆ ಅವರಿಗೆ ಭಿನ್ನಾಭಿಪ್ರಾಯವಿರಬಹುದೆಂದೂ ನಾನು ಊಹಿಸಿದೆ. ಅವರು ಹೇಳಿದರು "ಯಾವ ಡ್ರೆಸ್ಸಿನಲ್ಲಿ ಇಂದು ನೀವು ಇಲ್ಲಿಗೆ ಬರಬಹುದೆಂದಾಗಿತ್ತು ನಮ್ಮ ಚರ್ಚಾ ವಿಷಯ. ಆದರೆ ನಿಮ್ಮ ಉಡುಪು ನಿಮ್ಮ ವಿದ್ಯಾಭ್ಯಾಸಕ್ಕೆ ತಡೆಯಾಗುವುದಿಲ್ಲವೆಂದು ನಮಗೆ ಮನವರಿಕೆಯಾಯಿತು. ಇದೇ ರೀತಿ ಪದವೀದಾನ ಸಮಾರಂಭದಲ್ಲೂ ನಾನು ಬಿಳಿ ಬುರ್ಖಾ ಮತ್ತು ಕಪ್ಪು ಗೌನು ಧರಿಸಿದೆನು. ಅಲ್ಲಿಯ ಸಂಪ್ರದಾಯದ ಪ್ರಕಾರ ವೈಸ್ ಚಾನ್ಸಲರಿಗೆ ನಾನು ಹಸ್ತಲಾಘವವನ್ನೂ ಮಾಡಲಿಲ್ಲ. ಆಗ ನನ್ನ ಕಾಲೇಜ್ ಸೆಕ್ರೆಟರಿ (ಅವರನ್ನು ನಾವು ಪಾಕಿಸ್ತಾನದಲ್ಲಿ ವೈಸ್ ಪ್ರಿನ್ಸಿಪಾಲ್ ಎಂದು ಕರೆಯುತ್ತೇವೆ) ನನ್ನೊಡನೆ ಹೇಳಿದರು–ಈ ವಿಶ್ವವಿದ್ಯಾಲಯದ ನೂರಾರು ವರ್ಷಗಳ ದೀರ್ಘಕಾಲ ಚರಿತ್ರೆಯಲ್ಲಿ ನಾನು ಹೊಸ ಒಂದು ಕ್ರಮವನ್ನು ಸೃಷ್ಟಿಸಿರುವೆನೆಂದು.

ದೈವಾನುಗ್ರಹದಿಂದ ವಾಚಾಪರೀಕ್ಷೆಯಲ್ಲಿ ನನ್ನ ಉನ್ನತ ಶ್ರೇಣಿಯ ಯಶಸ್ಸು ಮತ್ತು ಡಾಕ್ಟರೇಟಿಗಾಗಿ ಸಿದ್ಧಪಡಿಸಿದ ಏಳು ಸಂಶೋಧಕ ಪ್ರಬಂಧಗಳಿಗೆ ಲಭಿಸಿದ ಮನ್ನಣೆಯ ಪರಿಣಾಮವಾಗಿ ನನ್ನ ಅಧ್ಯಾಪಿಕೆಯರು ನನ್ನನ್ನು ಬಹಳವಾಗಿ ಶ್ಲಾಘಿಸಿದರು. ನನ್ನ ಕಾಲೇಜ್ ಪ್ರಿನ್ಸಿಪಾಲ್ ನನ್ನ ಹಾಸ್ಟೆಲ್ ಕೋಣೆಗೆ ಬಂದು ನನ್ನನ್ನು ಪ್ರಶಂಸಿದಾಗ ನಾನು ಚಕಿತಗೊಂಡೆ. ನಾನು ಲಜ್ಜಿತಳಾಗಿ, ನನ್ನನ್ನು ನಿಮ್ಮಲ್ಲಿಗೆ ಕರೆಯಬಹುದಿತ್ತಲ್ಲವೇ ಎಂದು ಹೇಳಿದಾಗ ಅವರು, "ಅಲ್ಲ, ನಿಮ್ಮಂಥ ಪ್ರತಿಭೆಯುಳ್ಳ ಆದರ್ಶ ಸ್ಥೈರ್ಯವುಳ್ಳ ವಿದ್ಯಾರ್ಥಿಗಳನ್ನು ಯಾವಾಗಲೂ ಕಾಣುವುದು ದುರ್ಲಭ. ಸಂರೋಲ್ ಕಾಲೇಜಿಗೆ (ನನ್ನ ಕಾಲೇಜಿನ ಹೆಸರು) ನಿಮ್ಮ ಮೇಲೆ ಅಭಿಮಾನವಿದೆ" ಎಂದು ಹೇಳಿದರು. ಈ ವಿಷಯವನ್ನು ನಾನು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ (ಅಹ್ಮದಿಯಾ ಜಮಾಅತಿನ ಚತುರ್ಥ ಸರ್ವೋನ್ನತ ನಾಯಕ) ಅವರಿಗೆ ಬರೆದು ತಿಳಿಸಿದಾಗ ಖಲೀಫರು ಅವರ ಸ್ವಂತ ಕೈ ಬರಹದಲ್ಲಿ ಉತ್ತರ ಬರೆದರು: "ಒಂದು ಸಂರೋಲ್ ಕಾಲೇಜೇನು, ದೂರದೃಷ್ಟಿಯಿದ್ದರೆ ಮುಸ್ಲಿಂ ಜಗತ್ತೇ ನಿಮ್ಮ ಬಗ್ಗೆ ಅಭಿಮಾನ ಪಡಬೇಕಾಗಿದೆ."

ಅಲ್ಲಾಹನ ಅನುಗ್ರಹದಿಂದ ಬುರ್ಖಾ ಧರಿಸಿಕೊಂಡೇ ನಾನು ಉನ್ನತ ವಿದ್ಯಾಭ್ಯಾಸವನ್ನು ಗಳಿಸಿ ಹಲವು ರಾಜ್ಯಗಳನ್ನು ಸಂದರ್ಶಿಸಿದೆನು. ದಿವಂಗತ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ – ಅಹ್ಮದಿಯಾ ಜಮಾಅತಿನ ಮೂರನೇ ಖಲೀಫ– (ಅವರ ಪ್ರೋತ್ಸಾಹ ಮತ್ತು ಪ್ರಾರ್ಥನೆಯ ಫಲವಾಗಿಯೂ ಅವರ ನಿರ್ದೇಶನ ಪ್ರಕಾರವೂ ನಾನು ಆಕ್ಸ್‌ಫರ್ಡಿಗೆ ಹೋಗಿದ್ದೆ) ನಾನು ಹೋಗುವ ಸಂದರ್ಭದಲ್ಲಿ ನನಗೆ, "ಕಲಿಯುವುದು ಮಾತ್ರವಲ್ಲ, ಯುರೋಪಿನ ಪರ್ಯಟನ ಸಹ ಮಾಡಬೇಕು." ಎಂದು ಉಪದೇಶಿಸಿದ್ದರು.

ಅಲ್ಲಾಹನ ಅನುಗ್ರಹದಿಂದ ನಾನು ಕಲಿತೆ. ಯುರೋಪ್ ದೇಶಗಳ ಪ್ರವಾಸವನ್ನೂ ಮಾಡಿದೆ. ಆಕ್ಸ್‌ಫರ್ಡ್‌ನಲ್ಲಿ ಡಾಕ್ಟರೇಟ್ ಪೂರ್ಣಗೊಳಿಸಿದ ನಂತರ ಪೋಸ್ಟ್ ಡಾಕ್ಟರೇಟ್ ರಿಸರ್ಚ್ ಸಹ ಮುಗಿಸಿದೆ. ಆ ಮಧ್ಯೆ ರಜೆಯ ಮೇಲೆ ನಾನು ಸ್ವಿಟ್ಝರ್ಲೆಂಡಿಗೆ ಹೋಗಿದ್ದೆ. ಅಲ್ಲಿ ನನಗೆ ಒಬ್ಬ ಅಮೇರಿಕನ್ ಏರ್‌ಫೋರ್ಸ್ ಆಫೀಸರ್ ಮತ್ತು ಅವರ ಪತ್ನಿಯೊಂದಿಗೆ ಮಾತನಾಡುವ ಅವಕಾಶ ಸಿಕ್ಕಿತು. ನೀವು ಮುಸ್ಲಿಮೋ ಎಂದು ಅವರು ನನ್ನೊಡನೆ ಪ್ರಶ್ನಿಸಿದರು. ನಾನು ಹೌದೆಂದು ಹೇಳಿದಾಗ, ಅವರು ಇಸ್ಲಾಮಿನ ಕುರಿತು ಮತ್ತು ಇಸ್ಲಾಂ ಧರ್ಮದಲ್ಲಿ ಸ್ತ್ರೀಯರಿಗಿರುವ ಹಕ್ಕುಗಳ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದರು. ಕೊನೆಗೆ ಅವರು "ನಿಮ್ಮ ವೈಯಕ್ತಿಕ ವಿಷಯದ ಕುರಿತು ಒಂದು ಪ್ರಶ್ನೆ–ನೀವು ಎಷ್ಟು ಕಲಿತಿದ್ದೀರಿ?" ಎಂದು ಕೇಳಿದರು. ಪೋಸ್ಟ್ ಡಾಕ್ಟರೇಟ್ ರಿಸರ್ಚ್ ಮಾಡುತ್ತಿದ್ದೇನೆಂದು ನಾನು ಹೇಳಿದೆ. ಇದು ಕೇಳಿದಾಗ ಅವರಿಬ್ಬರೂ ಚಕಿತರಾಗಿ ಹೇಳಿದರು "ಮುಸ್ಲಿಮರು ತಮ್ಮ

# ಯೇಸುಕ್ರಿಸ್ತರ ಪುನರುತ್ಥಾನ ಮತ್ತು ಸ್ವರ್ಗಾರೋಹಣ*

★ ಸೂಫಿ ಎಂ. ಆರ್. ಬಂಗಾಳಿ, ಎಂ. ಎ.

ಕಲ್ಪಿತ ಕಥನದ ವರ್ಗದಲ್ಲಿ ಸೇರಿಸಬೇಕಾದ ಯೇಸು ಕ್ರಿಸ್ತರ 'ಪುನರುತ್ಥಾನ' ಮತ್ತು 'ಸ್ವರ್ಗಾರೋಹಣ' ಅವೈಚಾರಿಕ ಊಹನೆಗಳಿಂದ ರಚಿತವಾದ ಸಿದ್ಧಾಂತಗಳಾಗಿವೆ. ರೆನಾನ್ ಹೀಗೆ ಹೇಳುತ್ತಾರೆ:

" 'ಪುನರುತ್ಥಾನ'ದ ಕೀರ್ತಿ ಮಗ್ದಲದ ಮರಿಯಳಿಗೆ ಸಲ್ಲುತ್ತದೆ...... ಆಕೆಯ ಸ್ಪಷ್ಟ ಮನೋಚಾಪಲ್ಯ ಸೃಷ್ಟಿಸಿದ ಮಾಯಾರೂಪ ಜಗತ್ತಿನ ಮುಂದೆ ಇನ್ನೂ ಸುಳಿದಾಡುತ್ತಿದೆ. ಭಾವನಾ ಪ್ರಪಂಚಿಯರಲ್ಲಿ ಮುಖಂಡಳೂ ರಾಜಕುಮಾರಿಯೂ ಎಂಬ ಸ್ಥಾನದಲ್ಲಿ ಅವಳು ತನ್ನ ಅನುರಕ್ತ ಆತ್ಮದ ಈ 'ದರ್ಶನ'ವನ್ನು ಲೋಕದ ದೃಢವಾದ ನಂಬಿಕೆಗೆ ಹೇತುವನ್ನಾಗಿ ಮಾಡುವುದರಲ್ಲಿ ಬೇರಾರಿಗಿಂತಲೂ ಹೆಚ್ಚು ಕಾರಣಕರ್ತಳು. ಆಕೆಯ ಅಬಲ ಹೃದಯದಿಂದ ಹೊರಟ 'ಆತ ಸ್ವರ್ಗಾರೋಹಣ ಗೈದ' ಎಂಬ ಕೂಗು ಮನುಷ್ಯ ವಂಶದ ಮತ ವಿಶ್ವಾಸಕ್ಕೆ ಮುಖ್ಯ ಕಾರಣವಾಗಿ ಬಿಟ್ಟಿತು. ಆದ್ದರಿಂದಲೇ ಬಲಹೀನವಾದ ನ್ಯಾಯವೆಂದು ಹೇಳಲಾಗುತ್ತದೆ. ಭಾವಾತ್ಮಕ ಸ್ನೇಹ ಪರವಶತೆಯ ಈ ಅನುಪಮ ಕೊಡುಗೆಯನ್ನು ನಿರ್ದಾಕ್ಷಿಣ್ಯವಾದ ವಿಶ್ಲೇಷಣೆಗೆ ಗುರಿಪಡಿಸಬೇಡಿರಿ. ವಿಧಿ ಕೈಬಿಟ್ಟ ನಿರ್ಭಾಗ್ಯ ಮಾನುಕುಲಕ್ಕೆ ಸಮಾಧಾನ ನೀಡುವರೆ ವಿವೇಕ ಪರಾಜಯಗೊಳ್ಳುವಾಗ ಅವಿವೇಕತನ ಕಾರ್ಯ ನಡೆಸಲಿ. ಮಗ್ದಲದ ಮರಿಯ ಎಂಬ ಭಾವನಾ ಪ್ರಪಂಚಿಯಾದ ಈ ಅತಿ ಉದಾರ ಆನಂದವನ್ನು ಲೋಕಕ್ಕೆ ನೀಡಿದ ಆ ಮಹಾ ಜ್ಞಾನಿ ಎಲ್ಲಿ ? "[1]

ಪುನರುತ್ಥಾನ ಕಥೆಯ ನಿವೇದಕಳಾದ ಮಗ್ದಲದ ಮರಿಯ ಏಳು ದೆವ್ವಗಳ ಕಾಟಕ್ಕೆ ಈಡಾದವಳಾಗಿದ್ದಳು. ಬೇರೆ ಮಾತಿನಲ್ಲಿ ಹೇಳುವುದಾದರೆ, ಉನ್ಮಾದದ ಮಟ್ಟಕ್ಕೆ ತಲುಪಿದ ಹಿಸ್ಟೀರಿಯಾ ರೋಗಕ್ಕೆ ತುತ್ತಾದವಳು.[2]

ಯೇಸುಕ್ರಿಸ್ತರ ಪುನರುತ್ಥಾನ ಮತ್ತು ಆಕಾಶಾರೋಹಣಕ್ಕೆ ಸಂಬಂಧಿಸಿದ ಸಾಮಾನ್ಯ ಅವಲೋಕನವನ್ನು ಎಂದಿಗೂ "ಸತ್ಯಪಡಿಸಲು ಸಾಧ್ಯವಿಲ್ಲ"[3] ಎಂಬ ಖ್ಯಾತ ಆಕ್ಸ್‌ಫರ್ಡ್ ವಿದ್ವಾಂಸನ ಅಭಿಪ್ರಾಯವನ್ನು ನಾವು ಪೂರ್ಣವಾಗಿ ಒಪ್ಪುತ್ತೇವೆ. 'ಪುನರುತ್ಥಾನ', 'ಸ್ವರ್ಗಾರೋಹಣ' ಎಂದೆಲ್ಲಾ ಹೇಳಲಾಗುವ ಆ ಘಟನೆಗಳ ಕುರಿತು 'ಎನ್‌ಸೈಕ್ಲೋಪೀಡಿಯಾ ಬೈಬ್ಲಿಕ'ದಲ್ಲಿ "ಶಿಷ್ಯಂದಿರಿಗೆ ಯೇಸು ಪ್ರತ್ಯಕ್ಷನಾದುದರ ಕುರಿತು ವಿವರಿಸಲ್ಪಟ್ಟದ್ದು ಹೊರತು ಬೇರೇನನ್ನೂ ಖಚಿತವಾಗಿ ಊಹಿಸಲು ಅಸಾಧ್ಯ."[4] ಎಂದು ಉಲ್ಲೇಖಿಸಲಾಗಿದೆ. ಕಿಸೋರ್ಪ್ ಲೇಕ್ ಹೀಗೆ ಹೇಳುತ್ತಾರೆ: "ಪುರಾತನ ಅನುಶ್ರುತಿಗಳಲ್ಲಿ ಯಥಾರ್ಥ 'ಪುನರುತ್ಥಾನ'ದ ಬಗ್ಗೆ ಏನೂ ಪ್ರಸ್ತಾಪಿಸಲ್ಪಟ್ಟಿಲ್ಲ. ಸಮಾಧಿಯ ಕುರಿತು ಮತ್ತು ಎಬ್ಬಿಸಲ್ಪಟ್ಟ ಸ್ವಾಮಿ ಪ್ರತ್ಯಕ್ಷನಾದುದರ ಕುರಿತು ಮಾತ್ರ ಕೆಲವು ಪ್ರಸ್ತಾಪನೆಗಳಿವೆ. 'ಸ್ವರ್ಗಾರೋಹಣ' ವಾಸ್ತವಿಕವಾಗಿ ನಡೆದುದರ ಬಗ್ಗೆ ವಿವರಣೆಯೂ ಇಲ್ಲ. ಪ್ರಭು ಸ್ವರ್ಗೀಯನೆಂಬ ಯಾಥಾರ್ಥ್ಯವನ್ನು ಒತ್ತಿ ಹೇಳುವ ಒಂದು

---

* The Tomb of Jesus ಎಂಬ ಪುಸ್ತಕದಿಂದ.

1. E. Renan, Les Apotres, Histoire des Origines du Christianisme, livre 2-eme, Paris 1866, p-13. Translated by J. H. Boston, 1898, P-49.

2. ಲೂಕ 8 : 2.

3. Bernard M. Allen, Story Behind the Gospels, pp. 107, 108.

4. Encyclopaedia Biblica, Vol. II, P. 1881.

---

( 12ನೇ ಪುಟದಿಂದ )

ಹೆಣ್ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದಿಲ್ಲವೆಂದು ನಾವು ತಿಳಿದುಕೊಂಡಿದ್ದೆವು. ಆದರೆ ನಮ್ಮ ಗಂಡು ಮಕ್ಕಳು ಕೂಡ ತಲುಪದ ಸ್ಥಾನಕ್ಕೆ ನೀವು ತಲುಪಿದ್ದೀರಿ." ನಾನು ತುಂಬಾ ಹೊತ್ತು ಅಲ್ಲಾಹನ ಸ್ತುತಿಗಾನ ಮಾಡುತ್ತಾ ಇದ್ದೆ.

("ಮಿಸ್ಬಾಹ್," ರಬ್ವಾ: ಡಿಸೆಂಬರ್ 19೬3)

ಪ್ರಸ್ತಾಪನೆ ಮಾತ್ರವಿದೆ."[5] ಎಸ್. ವಿ. ಮೆಕಾಸ್‌ಲೆಂಡ್ ಇದೇ ಅಭಿಪ್ರಾಯ ಹೊಂದಿದವನಾಗಿದ್ದಾನೆ: "ಆರಂಭದಿಂದಲೇ ಕ್ರೈಸ್ತ ಸಂಘಟನೆಗಳಿಂದ ನಮಗೆ ದೊರೆತ ಅತ್ಯಂತ ಹಳೆಯ ದಾಖಲೆಗಳು ಸ್ಪಷ್ಟವಾಗಿಯೂ 'ಲೋಗಿಯ' ಅಥವಾ 'ಕ್ಯೂ' ಎಂದು ನಾವು ಕರೆಯುವ ಹಾಗೂ ಮತ್ತಾಯ ಮತ್ತು ಲೂಕನ ಸಾಮಾನ್ಯ ಮಾರ್ಕೇತರ ಮೂಲಗಳಲ್ಲಿ ನಿರೂಪಿಸಲ್ಪಟ್ಟವುಗಳಾಗಿವೆ...... ಅಲ್ಲೆಲ್ಲೂ ಯೇಸುವಿನ ಪುನರುತ್ಥಾನದ ಬಗ್ಗೆ ಯಾವುದೇ ಸೂಚನೆಯೂ ಗೋಚರಿಸುವುದಿಲ್ಲ ಎಂಬುದು ವಿಸ್ಮಯಕರ ಸಂಗತಿಯಾಗಿದೆ."[6]

ಸಂಕ್ಷಿಪ್ತದಲ್ಲಿ, ಯೇಸುಕ್ರಿಸ್ತರ ಕುರಿತು ಹೇಳಲಾಗುವ ಪುನರುತ್ಥಾನಕ್ಕೆ ದೃಕ್‌ಸಾಕ್ಷಿಯಾಗಿ ಯಾರೂ ಇಲ್ಲ. ಯೇಸು ಯಥಾರ್ಥದಲ್ಲಿ ಮೃತಪಟ್ಟು ಮತ್ತು ನಂತರ ಪುನರ್ಜೀವ ಪಡೆದುದನ್ನು ಯಾರು ಸಹ ಕಂಡಿಲ್ಲ. ಸಮಾಧಿ ಬರಿದಾಗಿತ್ತೆಂಬ ವಸ್ತು ಸ್ಥಿತಿಯನ್ನು ಬೇರೆ ರೀತಿಯಲ್ಲೂ ವ್ಯಾಖ್ಯಾನಿಸಬಹುದಾಗಿದೆ. ಆದರಿಂದ, ಯೇಸು ಮರಣ ಹೊಂದಿ, ಅನಂತರ ಪುನರುತ್ಥಾನಗೊಂಡರೆಂದಾಗುವುದಿಲ್ಲ. ಅದೇ ಪ್ರಕಾರ, ಪುನರುತ್ಥಾನದ ನಂತರ ಕಾಣಿಸಿಕೊಂಡ ಬಳಿಕ ಯೇಸು ಎಲ್ಲಿಗೆ ಹೋದರೆಂದು ಯಾರಿಗೂ ಗೊತ್ತಿಲ್ಲದ ಕಾರಣ ಅವರು ಸ್ವರ್ಗಾರೋಹಣ ಮಾಡಿದರೆಂದು ನಿರ್ಧರಿಸಲಿಕ್ಕೂ ಸಾಧ್ಯವಿಲ್ಲ.

ಯೇಸುಕ್ರಿಸ್ತರ ದೈಹಿಕ ಪುನರುತ್ಥಾನ ಮತ್ತು ಸ್ವರ್ಗಾರೋಹಣದ ಕುರಿತು ಕ್ರೈಸ್ತರು ಹೇಳುವ ಸಿದ್ಧಾಂತದಲ್ಲಿ ಮೂರು ಪ್ರಶ್ನೆಗಳು ಒಳಗೊಂಡಿವೆ. ಒಂದು, ನಿಜವಾಗಿಯೂ ಮೃತಪಟ್ಟ ವ್ಯಕ್ತಿ ಪುನಃ ಜೀವವನ್ನು ಪಡೆದುದು. ಎರಡು, ಭೌತಿಕ ದೇಹ ಆಕಾಶಕ್ಕೆ ಎತ್ತಲ್ಪಟ್ಟುದು. ಮೂರು, ಭೂಮಿಯಲ್ಲಿರುವವರಿಗೆ ಇಲ್ಲಿಯ ಹಾಗೆಯೇ ಬದುಕಲು ಯೋಗ್ಯವಾದ ನಿವಾಸ ಸ್ಥಾನ ಆಕಾಶ ಎಂಬ ಭಾವನೆ. ಆದರೆ ಇವೆಲ್ಲ ಭೌತಿಕವಾಗಿ ನೋಡುವಾಗ ಅಸಂಬದ್ಧ ಪ್ರಲಾಪವೆಂದು ಮನಗಾಣಬಹುದು.

ಯೇಸುಕ್ರಿಸ್ತರ ಸಶರೀರ ಸ್ವರ್ಗಾರೋಹಣ ಸಾಬೀತುಗೊಂಡಿಲ್ಲ. ಅದನ್ನು ಸಾಬೀತುಪಡಿಸಲು ಸಾಧ್ಯವೂ ಇಲ್ಲ. ಆಕಾಶದಿಂದ ಇಳಿದು ಬಂದವನ ಹೊರತು ಮತ್ತಾರಿಗೂ ಆಕಾಶಕ್ಕೆ ಏರಿಹೋಗಲು ಅಸಾಧ್ಯವೆಂದು ಯೇಸುವೇ ಹೇಳಿದ್ದಾರೆ.[7]

ಸಂತ ಪೌಲ – ಆತನ ವಿವರಣೆ ಎಲ್ಲಕ್ಕಿಂತ ಪೂರ್ವಿಕವೆಂದು ಗಣಿಸಲ್ಪಡುತ್ತದೆ–ಯೇಸುಕ್ರಿಸ್ತರ ಆಕಾಶಾರೋಹಣವನ್ನು ಕಟುವಾಗಿ ಖಂಡಿಸಿದ್ದಾರೆ. ಅವರು ಹೇಳುತ್ತಾರೆ: "ರಕ್ತ ಮಾಂಸವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು."[8]

ಸುವಾರ್ತೆಗಳ ಸರ್ವಾನುಮತದ ಸಾಕ್ಷ್ಯಾನುಸಾರ "ಮಾಂಸ ಮತ್ತು ರಕ್ತ"ದಿಂದ ಕೂಡಿದ ಯೇಸು ಶಿಷ್ಯರಿಗೆ ಪ್ರತ್ಯಕ್ಷರಾಗಿದ್ದರು. ಯೇಸುವಿನ ಮಾತೆ ಅವರನ್ನು ತೋಟಗಾರನೆಂದು ನೆನಸಿದ್ದರು.[9] ಶಿಷ್ಯರು ಅವರನ್ನು ಭೌತಿಕ ಶರೀರ ಸಹಿತ ಕಂಡಿದ್ದರು:

"ನನ್ನ ಕೈಗಳನ್ನೂ ನನ್ನ ಕಾಲುಗಳನ್ನೂ ನೋಡಿರಿ, ನಾನೇ ಅಲ್ಲವೇ, ನನ್ನನ್ನು ಮುಟ್ಟಿ ನೋಡಿರಿ. ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವೂ ಎಲುಬುಗಳೂ ಉಂಟು; ಅವು ಭೂತಕ್ಕಿಲ್ಲ ಎಂದು ಹೇಳಿದನು.

"ಇದನ್ನು ಹೇಳಿದ ಮೇಲೆ ಆತನು ತನ್ನ ಕೈಗಳನ್ನೂ ಕಾಲುಗಳನ್ನೂ ಅವರಿಗೆ ತೋರಿಸಿದನು.

"ಆದರೆ ಅವರು ಸಂತೋಷದ ದೆಸೆಯಿಂದ ಇನ್ನೂ ನಂಬದೆ ಆಶ್ಚರ್ಯ ಪಡುತ್ತಿರಲಾಗಿ ಆತನು–ತಿನ್ನ ತಕ್ಕ ಪದಾರ್ಥವೇನಾದರೂ ಇಲ್ಲಿ ನಿಮಗುಂಟೋ ಎಂದು ಅವರನ್ನು ಕೇಳಲು ಅವರು ಸುಟ್ಟ ಮೀನಿನ ಒಂದು ತುಂಡನ್ನು ಆತನಿಗೆ ಕೊಟ್ಟರು.

"ಆತನು ಅದನ್ನು ತಕ್ಕೊಂಡು ಅವರ ಮುಂದೆ ತಿಂದನು."[10]

ಯೇಸು ಸಮಾಧಿಯಿಂದ ಸಜೀವವಾಗಿಯೇ ಹೊರಗೆ ಬಂದಿದ್ದರೆಂದು ಈ ವಾಕ್ಯಗಳು ಸ್ಪಷ್ಟವಾಗಿ ಸಮರ್ಥಿಸುತ್ತವೆ. ಎಚ್. ಸ್ಪೆನ್ಸರ್ ಲೂಯಿಸ್ ಈ ರೀತಿ ಹೇಳುತ್ತಾರೆ:

---

5. Kirsopp Lake, The Historical Evidence for the Resurrection of Jesus Christ, 1907, p. 231.

6. S. V. McCasland, The Resurrection of Jesus, 1932, p. 131.

7. ಯೋಹಾನ 3 : 13.

8. I ಕೊರಿಂಥದವರಿಗೆ 15 : 50.

9. ಯೋಹಾನ 20 : 15.

10. ಲೂಕ: 39–43.

# ಯೇಸು ಪುನರುತ್ಥಾನಗೊಂಡಿಲ್ಲ : ಬಿಷಪ್

ಡರ್ಹಾಂ : ಬೈಬಲಿಗೆ ವಿರುದ್ಧವಾಗಿ ಬಿಷಪ್. ಬ್ರಿಟನಿನ ಆಂಗ್ಲಿಕನ್ ಸಭೆಯ ನಾಲ್ಕನೆಯ ಸ್ಥಾನೀಯನಾದ ಬಿಷಪ್ ಡೇವಿಡ್ ಜಂಕಿನ್ಸನ್ (60) ಕ್ರೈಸ್ತ ನಂಬಿಕೆಗೆ ವಿರುದ್ಧವಾದ ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಯೇಸು ಸತ್ತವರೊಳಗಿಂದ ಜೀವಿತನಾಗಿ ಎದ್ದು ಬಂದಿರುವರೆಂಬ ಮೂಲ ಕ್ರೈಸ್ತ ಸಿದ್ಧಾಂತ ಸರಿಯಲ್ಲವೆಂದೂ ಯೇಸುಕ್ರಿಸ್ತರ ಶರೀರವನ್ನು ಶಿಷ್ಯರು ಕದ್ದು ಕೊಂಡೊಯ್ದಿರಲಿಕ್ಕೆ ಸಾಧ್ಯತೆಯಿದೆಯೆಂದೂ ಅವರು ಹೇಳುತ್ತಾರೆ. ಯೇಸು ಕ್ರಿಸ್ತರ ಪುನರುತ್ಥಾನ, ಅವರ ತಾಯಿಯ ಕನ್ಯತ್ವ, ಬೈಬಲಿನಲ್ಲಿ ಹೇಳಲಾಗುವ ಅದ್ಭುತಗಳು ಇತ್ಯಾದಿಯೆಲ್ಲಾ ಬರೇ ಪ್ರತೀಕಾತ್ಮಕ ಕಥೆಗಳಾಗಿವೆಯೆಂದೂ ಯಾವುದೂ ಸಂಭವಿಸಿದ್ದಲ್ಲವೆಂದೂ ಬಿಷಪ್ ಹೇಳುತ್ತಾರೆ. ಕಳೆದ ವರ್ಷ ಜಂಕಿನ್ಸನ್ ಅವರನ್ನು ಬಿಷಪ್ ಆಗಿ ನೇಮಿಸಿದಾಗಲೇ ದೊಡ್ಡ ವಿವಾದವೆದ್ದಿತ್ತು.

"ಮಲಯಾಳ ಮನೋರಮ" 31-3-1985.

"ಕಾವಲು ಭಟರು ಸ್ವಲ್ಪ ದೂರದ ಹಸುಗಳ ಆಲಯಗಳಲ್ಲಿ ಮಳೆಯಿಂದ ರಕ್ಷಣೆಯನ್ನು ಪಡೆಯಲು ಶ್ರಮಿಸುತ್ತಿದ್ದಾಗ, ಸೂರ್ಯೋದಯಕ್ಕೆ ಸ್ವಲ್ಪ ಮುಂಚೆ, ಹತ್ತಿರವೇ ಇನ್ನೊಂದೆಡೆಯಲ್ಲಿ ಅವಿತುಕೊಂಡಿದ್ದ ಅರಿಮಥಾಯದ ಯೋಸೆಫ್ ಮತ್ತು ಕೆಲವು ಮಂದಿ ಎಸ್ಸೀನ್ಯರು ಸಮಾಧಿಯ ಸಮೀಪಕ್ಕೆ ಬಂದರು. ಮೊದಲೇ ಏರ್ಪಾಡು ಮಾಡಿದ್ದಂತೆ, ಸಮಾಧಿಯ ದ್ವಾರವನ್ನು ಭದ್ರವಾಗಿ ಮುಚ್ಚುವುದರಲ್ಲಿ ಅಧಿಕಾರಿಗಳು ತೋರಿಸಿದ್ದ ಅಸಡ್ಡೆಯ ಪ್ರಯೋಜನವನ್ನು ಪಡೆದು, ಅವರು ಸಮಾಧಿಯ ಮುಖದ್ವಾರಕ್ಕೆ ಮುಚ್ಚಿದ್ದ ದೊಡ್ಡ ಕಲ್ಲನ್ನು ಹೊರಳಿಸಿ ಕವಾಟವನ್ನು ತೆರೆದಿಟ್ಟರು. ಅವರು ಸಮಾಧಿಯೊಳಗೆ ಪ್ರವೇಶಿಸಿದಾಗ ಯೇಸು ವಿಶ್ರಮಿಸುತ್ತಿರುವುದಾಗಿ ಕಂಡರು. ಅವರು ಪುನಶ್ಚೇತನಗೊಳ್ಳುತ್ತಿದ್ದರು. ಒಂದು ತಾಸು ಕಳೆದ ಬಳಿಕ ಬಿರುಗಾಳಿ ನಿಂತಾಗ, ಸಮಾಧಿಯಿಂದ ಯೇಸುಕ್ರಿಸ್ತರನ್ನು ಎಸ್ಸೀನ್ಯರಿಗೆ ಕೊಂಡೊಯ್ಯಲು ಸಾಧ್ಯವಾಯಿತು."[11]

ಮೇಲೆ ಪ್ರಸ್ತಾಪಿಸಲಾದ ಸಂಗತಿಗಳ ಬೆಳಕಿನಲ್ಲಿ ಈ ಚಾರಿತ್ರಿಕ ಘಟನೆಗಳು-ಭೂಮಿಯ ಹೊಟ್ಟೆಯಿಂದ ತಾನು ಜೀವಂತನಾಗಿಯೇ ಹೊರಗೆ ಬರುವೆನೆಂದು ಯೇಸುವಿನ ಭವಿಷ್ಯ ನುಡಿ, ಶಿಲುಬೆಯ ಮೇಲೆ ಸಾಯುವುದರಿಂದ ರಕ್ಷಿಸಬೇಕೆಂದು ಯೇಸು ನೊಂದು ಪ್ರಾರ್ಥಿಸಿದ್ದು, ಶಾಪ ಮರಣಕ್ಕೆ ತುತ್ತಾಗುವುದರ ಬಗ್ಗೆ ಅಪಮಾನ, ಗಾಯದಿಂದ ರಕ್ತವೂ ನೀರೂ ಒಸರಿದ್ದು, ಶಿಲುಬೆಯ ಮೇಲಿದ್ದ ಸಮಯದ ಹ್ರಸ್ವತೆ, ಅಷ್ಟು ಬೇಗ ಮೃತಪಟ್ಟರೆಂದು ಕೇಳಿದಾಗ ಎಲ್ಲರಿಗೂ ಸಂಶಯವಾದುದು, ಯೇಸುಕ್ರಿಸ್ತರ ಶರೀರವನ್ನು ಅವರ ನಿಕಟ ಸ್ನೇಹಿತರಿಗೂ ಶಿಷ್ಯರಿಗೂ ಒಪ್ಪಿಸಿಕೊಡುವುದರಲ್ಲಿ ಪಿಲಾತನು ತೋರಿಸಿದ ಸಹತಾಪ ಪೂರ್ಣ ಮನೋಭಾವ, ಯೇಸು ತನ್ನ ತಾಯಿಗೂ ಶಿಷ್ಯರಿಗೂ ಭೌತಿಕ ಶರೀರ ಸಹಿತ ಪ್ರತ್ಯಕ್ಷರಾದುದು-ಇವನ್ನೆಲ್ಲಾ ಸೂಕ್ಷ್ಮವಾಗಿ ಪರಿಶೀಲಿಸಿ ಸಿಂಹಾವಲೋಕನ ಮಾಡಿದರೆ ಯೇಸು ಪ್ರಜ್ಞಾಶೂನ್ಯ ಸ್ಥಿತಿಯಲ್ಲಿ, ಮರಣಿಸಿದ್ದರೆಂದು ಬಾಹ್ಯವಾಗಿ ತೋರುವಂತೆ ಇದ್ದರೆಂದು ನಮಗೆ ಸುಲಭದಲ್ಲಿ ಮನಗಾಣಲು ಸಾಧ್ಯ. ಯೇಸು ಕ್ರಿಸ್ತರನ್ನು ರಕ್ಷಿಸಲಿಕ್ಕಾಗಿ ಅವರ ಶಿಷ್ಯರೂ ಸ್ನೇಹಿತರೂ ಒಂದು ಗೂಢಾಲೋಚನೆ ಮಾಡಿದ್ದರೆಂಬುದು ಸ್ಪಷ್ಟ. ಈ ಗೂಢಾಲೋಚನೆಯಲ್ಲಿ ಪಿಲಾತನು ಕೂಡ ಮುಖ್ಯ ಪಾತ್ರವನ್ನು ವಹಿಸಿದ್ದನು. ಶಿಲುಬೆಯಿಂದ ಪಾರಾದ ನಂತರ, ಪುನಃ ಬಂಧಿಸಲ್ಪಡದಿರಲಿಕ್ಕಾಗಿ ಯೇಸುಕ್ರಿಸ್ತರಿಗೆ ವೇಷ ಪಲ್ಲಟ ಮಾಡಿ ಸಂಚರಿಸಬೇಕಾಗಿ ಬಂದಿತ್ತು.

★

11. Spencer Lewis Mystical Life of Jesus, p-269.

# ಸಂಯುಕ್ತ ರಾಷ್ಟ್ರ ವಿಚಾರಗೋಷ್ಠಿಯಲ್ಲಿ ಅಹ್ಮದಿಯಾ ಬಗ್ಗೆ

ಪಾಕಿಸ್ತಾನದಲ್ಲಿ 1984 ಎಪ್ರಿಲ್ 26ರಂದು ಹೊರಡಿಸಲಾದ ಅಹ್ಮದಿಯಾ ವಿರುದ್ಧ ಅಧ್ಯಾದೇಶದ ಕುರಿತು ವಿವಿಧ ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಅಹ್ಮದೀಯರು ತಮ್ಮ ಅಹವಾಲು ಸಮರ್ಪಿಸುತ್ತಿದ್ದಾರೆ.

1984 ಡಿಸೆಂಬರ್‌ನಲ್ಲಿ 'ಧರ್ಮ–ಧರ್ಮ ವಿಶ್ವಾಸಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಸ್ಪರ ತಿಳುವಳಿಕೆ, ಸಹಿಷ್ಣುತೆ, ಪರಸ್ಪರಾದರ ಎಂಬಿವುಗಳ ಪ್ರೋತ್ಸಾಹ' ಎಂಬ ವಿಷಯದಲ್ಲಿ ಜಿನೇವಾದಲ್ಲಿ ಒಂದು ಸೆಮಿನಾರ್ ಏರ್ಪಡಿಸಲಾಗಿತ್ತು. ಒಂದು ಸರಕಾರೇತರ ಸಂಘಟನೆಯಾದ (Non Governmental Organisation) ಅಲ್ಪಸಂಖ್ಯಾತ ಹಕ್ಕು ಗ್ರೂಪ್ (The Minorities Rights Group)ನ ಮುಂದೆ ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತಪಡಿಸಲು ಸಾಧ್ಯವಾಯಿತು. N. G. O. ವೀಕ್ಷಕನಾಗಿ ಭಾಗವಹಿಸಿದ ಅಹ್ಮದಿಯಾ ಪ್ರತಿನಿಧಿ ಎಸ್. ನಾಸಿರ್ ಅಹ್ಮದ್ 1984 ಡಿಸೆಂಬರ್ 5ರಂದು ಒಂದು ಹೇಳಿಕೆ ನೀಡಿದರು. ಪಾಕಿಸ್ತಾನದಲ್ಲಿ ಅಹ್ಮದೀ ಮುಸ್ಲಿಮರಿಗೆ ಬಂದೊದಗಿದ ಸಂಕಷ್ಟಗಳ ಆಧಾರದಲ್ಲಿ ಧರ್ಮ–ಧರ್ಮ ವಿಶ್ವಾಸ ವಿಚಾರಗಳಲ್ಲಿ ಈ ಕಾಲದಲ್ಲಿ ಅಲ್ಲಿ ಪ್ರಕಟಗೊಂಡ ಅಸಹಿಷ್ಣುತೆಯ ಉದಾಹರಣೆಗಳನ್ನು ಅವರು ಬೊಟ್ಟು ಮಾಡಿದರು.

ಪಾಕಿಸ್ತಾನದ ಪ್ರತಿನಿಧಿ ಡಾ। ಜಾವೀದ್ ಇಖ್ಬಾಲ್ (ಲಾಹೋರ್ ಹೈಕೋರ್ಟಿನ ಮುಖ್ಯ ನ್ಯಾಯಾಧೀಶ ಆಗಿರುವ ಇವರು ವಿಶ್ವ ಮಹಾಕವಿ ಅಲ್ಲಾಮ ಇಖ್ಬಾಲರ ಪುತ್ರ) ಪ್ರಸ್ತುತ ಹೇಳಿಕೆಗೆ ಉತ್ತರ ನೀಡಿದರು. ಡಿಸೆಂಬರ್ 6ರಂದು ಡಾ। ಜಾವೀದ್ ಇಖ್ಬಾಲರ ಪ್ರಸ್ತಾಪನೆಗೆ ಉತ್ತರವಾಗಿ ಎಸ್. ನಾಸಿರ್ ಅಹ್ಮದ್ ಎರಡನೆಯ ಹೇಳಿಕೆ ಇತ್ತರು. ಈ ಮೂರು ಹೇಳಿಕೆಗಳ ಭಾಷಾಂತರವನ್ನು ಕೆಳಗೆ ಕೊಡಲಾಗಿದೆ,

## ಅಹ್ಮದಿಯಾ ಪ್ರತಿನಿಧಿಯ ಪ್ರಸ್ತಾಪನೆ

ಮಿಸ್ಟರ್ ಚೇರ್‌ಮನ್,

ಕಾರ್ಯ ಸೂಚಿಯ ಎರಡನೆ ವಿಷಯದ ಬಗ್ಗೆ ಈ ವಿಚಾರ ಗೋಷ್ಠಿಯಲ್ಲಿ ನನಗೆ ಮಾತನಾಡಲು ಸಂದರ್ಭ ನೀಡಿದುದಕ್ಕೆ ಕೃತಜ್ಞತೆಯನ್ನು ಸೂಚಿಸುತ್ತೇನೆ.

ಒಂದು ನಿರ್ದಿಷ್ಟ ಮುಸ್ಲಿಂ ರಾಜ್ಯದಲ್ಲಿ ತಾಂಡವವಾಡಿದ ಅಸಹಿಷ್ಣುತಾ ಪ್ರಕಟನೆಯ ರೂಪ ಮತ್ತು ವೈಪುಲ್ಯಕ್ಕೆ ಸಂಬಂಧಿಸಿದ ಒಂದು ಹೇಳಿಕೆಯನ್ನು ಕಳೆದ ಆಗಸ್ಟ್ 15ರಂದು ದಿ ಮೈನಾರಿಟೀಸ್ ರೈಟ್ಸ್ ಗ್ರೂಪ್ ಮಾನವ ಹಕ್ಕು ಸಮಿತಿಗೆ ಸಲ್ಲಿಸಿದೆ. ಇಸ್ಲಾಮೀ ಗಣರಾಜ್ಯವೆಂದು ಸ್ವಯಂ ಕರೆದುಕೊಳ್ಳುವ ಆ ರಾಷ್ಟ್ರ ಮತ ಸ್ವಾತಂತ್ರ್ಯ ಮತ್ತು ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಇಸ್ಲಾಂ ಧರ್ಮದ ಸುಂದರವಾದ ಅಧ್ಯಾಪನಗಳನ್ನು ಗಾಳಿಗೆ ತೂರುತ್ತಿರುವುದನ್ನು ಕಾಣಬಹುದು.

ಈ ವಿಷಯದ ಬಗ್ಗೆ ಸೌದಿ ಅರೇಬ್ಯ ಮತ್ತು ಪಾಕಿಸ್ತಾನದ ಗೌರವಾನ್ವಿತ ಪ್ರತಿನಿಧಿಗಳು, ಈ ವಿಚಾರದಲ್ಲಿ ಇಸ್ಲಾಂ ನೀಡುವ ಅಧ್ಯಾಪನಗಳು ಎಷ್ಟು ಮಹತ್ತರವಾದುದೆಂದು ನಿನ್ನೆ ಇಲ್ಲಿ ವಿವರಿಸಿದ್ದು ಅತ್ಯಂತ ಹೃದಯ ಸ್ಪರ್ಶಿಯಾಗಿತ್ತು. ಮುಖ್ಯವಾಗಿ, ಪಾಕಿಸ್ತಾನದ ಪ್ರತಿನಿಧಿ (ಚೀಫ್ ಜಸ್ಟಿಸ್ ಜಾವೀದ್ ಇಖ್ಬಾಲ್) ಈ ಬಗ್ಗೆ ಪ್ರಕಟಪಡಿಸಿದ ಅಭಿಪ್ರಾಯಗಳಿಗೆ ಅವರನ್ನು ಅಭಿನಂದಿಸಲೇ ಬೇಕಾಗಿದೆ. ಪಾಕಿಸ್ತಾನದ ಈ ಪ್ರತಿನಿಧಿ ಆ ಉಪಭೂಖಂಡದ ಒಬ್ಬ ಮಹಾಚಿಂತಕನೂ ಕವಿಯೂ ಪಂಡಿತನೂ ಆಗಿದ್ದ ಒಬ್ಬ ಮಹಾನ್ ವ್ಯಕ್ತಿಯ ಪುತ್ರರಾಗಿದ್ದಾರೆ. ಸಹಿಷ್ಣುತೆಯೂ ವಿಶಾಲ ಹೃದಯತೆಯೂ ಸ್ಫುರಿಸುವ ಅವರ ನಡೆವಳಿಕೆಯಲ್ಲಿ ಅದು ಚೆನ್ನಾಗಿ ಪ್ರತಿಫಲಿಸಿ ಕಾಣಲು ಸಾಧ್ಯ. ಇಸ್ಲಾಮಿನ ಮತಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಅವರ ಸಂಕ್ಷಿಪ್ತ ವಿವರಣೆ ಖಂಡಿತವಾಗಿಯೂ ಯಥಾರ್ಥ ಇಸ್ಲಾಮೀ ಅಧ್ಯಾಪನಗಳ ಒಂದು ಚಿತ್ರೀಕರಣವೇ ಆಗಿದೆ,

ಮತಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಮಟ್ಟಿಗೆ 1400 ವರ್ಷಗಳ ಮೊದಲೇ ಪವಿತ್ರ ಖುರ್‌ಆನಿನಲ್ಲಿ ಈ ರೀತಿ ಘೋಷಿಸಲಾಗಿದೆ: "ಲಾ ಇಕ್‌ರಾಹ ಫಿದ್ದೀನ್" ಎಂದರೆ "ಧರ್ಮದ ಕಾರ್ಯದಲ್ಲಿ ಯಾವ ಬಲಾತ್ಕಾರವೂ ಇಲ್ಲ".

ಪರಿಶುದ್ಧ ಇಸ್ಲಾಮಿನ ಪ್ರವಾದಿ ಅವಿಶ್ವಾಸಿಗಳೊಡನೆ ಈ ರೀತಿ ಹೇಳಲು ಆದೇಶಿಸಲ್ಪಟ್ಟರು: "ನಿಮಗೆ ನಿಮ್ಮ ಧರ್ಮ, ನನಗೆ ನನ್ನ ಧರ್ಮ". ಮಾತ್ರವಲ್ಲದೆ, ಮುಹಮ್ಮದ್ ಪೈಗಂಬರರೊಡನೆ, ಅವರ ಕರ್ತವ್ಯ ಸಂದೇಶವನ್ನು ತಲಪಿಸುವುದು ಮಾತ್ರವೆಂದೂ ಬಲವಂತಪಡಿಸುವುದಾಗಲಿ, ನಿರ್ಬಂಧಪಡಿಸುವುದಾಗಲಿ ಸಲ್ಲದೆಂದೂ ಪ್ರವಾದಿಯನ್ನು ಅವರ ಮೇಲ್ನೋಟದ ಕಾವಲುಗಾರನನ್ನಾಗಿ ನಿಯೋಜಿಸಲಿಲ್ಲವೆಂದೂ ಖುರ್‌ಆನ್ ಬೋಧಿಸುತ್ತದೆ.

ಧರ್ಮದ ಕುರಿತು ನಿರ್ಬಂಧ ಪ್ರೇರಣೆ ಅಥವಾ ಇತರ ಒತ್ತಾಯ ತಂತ್ರಗಳ ಕುರಿತು ಯೋಚಿಸುವುದು ಕೂಡ ಹೆದರಿಕೆ ಹುಟ್ಟಿಸುವ ವಿಚಾರವಾಗಿ ತೋರುವಂತೆ ಬಹಳ ಸ್ಪಷ್ಟವೂ ಸಂಶಯಾತೀತವೂ ವಿಶದವೂ ಆದ ತತ್ವಗಳನ್ನು ಇಸ್ಲಾಂ ಈ ಬಗ್ಗೆ ನೀಡಿರುತ್ತದೆ. ಆದರೆ ಇದು ಅದರ ತಾತ್ವಿಕ ಅಂಶ ಮಾತ್ರವಾಗಿದೆ. ನಿರ್ಭಾಗ್ಯವಶಾತ್ ಪ್ರವೃತ್ತಿ ಪಥದಲ್ಲಿ ಸಂಗತಿಗಳು ತೀರಾ ಭಿನ್ನವಾಗಿವೆ.

ಮಿ. ಚೇರ್‌ಮನ್, 1984 ಆಗಸ್ಟ್ 22ರ ಮಾನವ ಹಕ್ಕು ಸಬ್ ಕಮಿಷನಿನ ಪ್ರಸ್ತಾಪನೆಯ ಬಗ್ಗೆ ಯೋಚಿಸೋಣ. ಆ ದೇಶದ ಇತರ ಹಲವು ಸಮಸ್ಯೆಗಳಿಂದ ಜನರ ಗಮನವನ್ನು ಬದಲಾಯಿಸಲಿಕ್ಕೂ ಹೇಗಾದರೂ ತನ್ನ ಆಡಳಿತೆಯನ್ನು ಭದ್ರಪಡಿಸಲಿಕ್ಕೂ ಇರುವ ರಾಜಕೀಯ ಉದ್ದೇಶಗಳಿಗೋಸ್ಕರ ಇಸ್ಲಾಮಿನ ನಾಮವನ್ನು ಒಂದು ಮರೆಯಾಗಿ ಉಪಯೋಗಿಸಲಾಗುತ್ತದೆ ಎಂಬುದಾಗಿದೆ ವಾಸ್ತವಿಕವಾಗಿ ಅಲ್ಲಿ ನಡೆಯುತ್ತಿರುವುದು. ಇಲ್ಲಿ ಪರಾಮರ್ಶಿಸಲ್ಪಡುವ ದೇಶ ಪಾಕಿಸ್ತಾನ್ ಆಗಿದೆ. ಸಮಸ್ಯೆಯೇನೆಂದರೆ: ಆ ದೇಶದ ಒಂದು ವರ್ಗದ ಪ್ರಜೆಗಳ ಮೇಲೆ, ಸ್ವಂತ ಮನಸ್ಸಾಕ್ಷಿಗನುಗುಣವಾದ ಮತವಿಶ್ವಾಸದಲ್ಲಿ ದೃಢವಾಗಿ ನಿಲ್ಲುವ ಅವರ ಹಕ್ಕನ್ನು ಕಸಿದುಕೊಂಡು ಬರ್ಬರವೂ ಕ್ರೂರವೂ ಆದ ಮರ್ದನೆಗಳಿಗೆ ಗುರಿಪಡಿಸಲಾಗುತ್ತಿದೆ. ಪಾಕಿಸ್ತಾನದ ಮಿಲಿಟರಿ ಆಡಳಿತಾಧಿಕಾರಿ 1984 ಏಪ್ರಿಲ್ ತಿಂಗಳಲ್ಲಿ ಹೊರಡಿಸಿದ ಆರ್ಡಿನನ್ಸ್ ಎಂದು ಹೇಳಲಾಗುವ ನಿಷೇಧಾಜ್ಞೆಗೆ ಆಧುನಿಕ ಲೋಕ ಚರಿತ್ರೆಯಲ್ಲಿ ಬೇರೊಂದು ಉದಾಹರಣೆ ಕಾಣಲು ಅಸಾಧ್ಯ. ಇಸ್ಲಾಮಿನ ಹೆಸರಿನಲ್ಲಿ ಈ ಅಧ್ಯಾದೇಶವನ್ನು ಹೊರಡಿಸಲಾಗಿದ್ದರೂ ಇದು ಆ ಧರ್ಮದ ಸುಂದರವಾದ ಅಧ್ಯಾಪನಗಳ ನಿರ್ಮೂಲನವೆಂದು ಕಾಣಬಹುದು. ಅದು ಮಾನವ ಹಕ್ಕುಗಳಿಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ಘೋಷಣೆಯ 18, 19 ವಿಧಿಗಳಿಗೆ ವಿರುದ್ಧವೂ ಮತ ಸ್ವಾತಂತ್ರ್ಯದ ಹಕ್ಕು ನೀಡುವ ಪಾಕಿಸ್ತಾನದ ಸಂವಿಧಾನದ 20ನೇ ವಿಧಿಯನ್ನು ಅಸಿಂಧುಗೊಳಿಸುವಂಥದ್ದೂ ಆಗಿದೆ.

ಶಾಂತಿಪ್ರಿಯ ಸಮುದಾಯದವರೆಂಬ ನೆಲೆಯಲ್ಲಿ ಲೋಕದಲ್ಲೆಲ್ಲೂ ಹೆಸರು ಗಳಿಸಿದವರಾಗಿದ್ದಾರೆ ಅಹ್ಮದೀ ಮುಸ್ಲಿಮರು. ಆದರೆ ಪ್ರಸ್ತುತ ಆರ್ಡಿನನ್ಸ್ ಮುಸ್ಲಿಮರೆಂದು ಕರೆಸಿಕೊಳ್ಳುವ ಹಕ್ಕಿನಿಂದ ಈ ಸಮುದಾಯವನ್ನು ಮಾತ್ರ ಇತರರಿಂದ ಬೇರ್ಪಡಿಸುತ್ತದೆ. ಉದಾಹರಣೆಗೆ, ಒಂದು ರೋಮನ್ ಕೆಥೋಲಿಕ್ ಸರಕಾರ ಪ್ರೊಟೆಸ್ಟಂಟ್ ಕ್ರೈಸ್ತರನ್ನಾಗಲಿ, ಅಥವಾ ತದ್ವಿರುದ್ಧವಾಗಿಯಾಗಲಿ, ಅವರು ಕ್ರೈಸ್ತರೆಂದು ಸ್ವಯಂ ಕರೆದುಕೊಳ್ಳುತ್ತಾರೆಂಬ ಕಾರಣದಿಂದ ಜೈಲಿಗೆ ಹಾಕಲು ತೊಡಗುವುದರ ಕುರಿತು ಒಮ್ಮೆ ಕಲ್ಪಿಸಿಕೊಳ್ಳಿರಿ. ಆದರೆ ಈ ಇಪ್ಪತ್ತನೆಯ ಶತಮಾನದಲ್ಲಿ ಇದುವೇ ಅಲ್ಲಿ ನಡೆಯುತ್ತಿದೆ!

ಪಾಕಿಸ್ತಾನ ಸರಕಾರ ಅಹ್ಮದೀಯರನ್ನು ಅವರ ಧರ್ಮ ನಂಬಿಕೆಯನ್ನು ತೊರೆಯಲಿಕ್ಕೂ ಇಸ್ಲಾಮಿನೊಡನೆ ತಮಗಿರುವ ಸಂಬಂಧವನ್ನು ಹೇಳದಂತೆಯೂ ನಿರ್ಬಂಧಿಸುತ್ತಿದೆ. ಇಸ್ಲಾಂ ಧರ್ಮ ತಮ್ಮ ಧರ್ಮವಲ್ಲವೆಂದು ಹೇಳಲು ಅಹ್ಮದೀ ಮುಸ್ಲಿಮರೊಡನೆ ಲಷ್ಕರಿ ಆಡಳಿತೆ ನಿಯಮ ಮೂಲಕ ಅಗತ್ಯಪಡಿಸುತ್ತಿದೆ. ತಮ್ಮ ದೃಢ ವಿಶ್ವಾಸಗಳಿಗೆ ವಿರುದ್ಧವಾದ ನಂಬಿಕೆಗಳನ್ನು ಅಂಗೀಕರಿಸಲಿಕ್ಕೆ ಅವರನ್ನು ನಿಯಮ ಮೂಲಕ ನಿರ್ಬಂಧಿಸಲಾಗುತ್ತಿದೆ. ಈ ಅಧ್ಯಾದೇಶ ಅತ್ಯಂತ ಅಸ್ವೀಕೃತವೂ ಅಪಹಾಸ್ಯಕರವೂ ಆಗಿದೆಯೆಂದು ತೋರಿಸುವುದಕ್ಕೆ ಅದರ ಒಂದು ಚಿಕ್ಕ ಭಾಗವನ್ನು ನಾನಿಲ್ಲಿ ಉದ್ಧರಿಸುತ್ತೇನೆ. ಯಾವ ವಿವರಣೆಯೂ ಅಗತ್ಯವಿಲ್ಲ. ಆರ್ಡಿನನ್ಸಿನ ಕೆಲವು ಸಾಲುಗಳು ಹೀಗಿವೆ:

"ಒಬ್ಬ ಅಹ್ಮದಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸ್ವಯಂ ಮುಸ್ಲಿಂ ಎಂಬ ರೀತಿಯಲ್ಲಿ ಅಭಿವ್ಯಕ್ತಿಗೊಳಿಸುವುದಾಗಲಿ, ತನ್ನ ಮತ ವಿಶ್ವಾಸವನ್ನು ಇಸ್ಲಾಂ

ಎಂದು ಹೆಸರಿಸುವುದಾಗಲಿ, ತನ್ನ ಮತ ವಿಶ್ವಾಸವನ್ನು ಸ್ವೀಕರಿಸಲಿಕ್ಕೋಸ್ಕರ ಮಾತಿನಿಂದ, ಬರಹದಿಂದ ಯಾ ಇನ್ನಿತರ ಪ್ರಕಟನ ರೂಪದಲ್ಲಿ ಇತರರನ್ನು ಆಹ್ವಾನಿಸುವುದಾಗಲಿ ಮಾಡಿದ ಪಕ್ಷದಲ್ಲಿ ಮೂರು ವರ್ಷಗಳ ವರೆಗಿನ ಎರಡರಲ್ಲೊಂದು ಬಗೆಯ ಸೆರೆಮನೆ ವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದು.”

ಒಂದು ಧರ್ಮದ ಮೇಲೆ ಒಬ್ಬ ವ್ಯಕ್ತಿಗಿರುವ ವಿಶ್ವಾಸ ಸಂಬಂಧವು ಆ ವ್ಯಕ್ತಿಯ ಮತ ಪ್ರಚಾರ ಹಕ್ಕಿನ ಮುಖ್ಯಾಧಾರವೆಂದು ವಿವೇಕವು ಹೇಳುತ್ತದೆ. ಆದರೆ ಪಾಕಿಸ್ತಾನದಲ್ಲಿ ಎಲ್ಲವೂ ಬೇರೆ ರೂಪದಲ್ಲಿ.

1. ಅಹ್ಮದೀ ಮುಸ್ಲಿಮರು ಇಸ್ಲಾಮಿನ ವಿಶ್ವಾಸ ಪ್ರಮಾಣವಾದ “ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದ್ ರಸೂಲುಲ್ಲಾಹ್” ಎಂಬ ಕಲಿಮ (ಮೂಲಮಂತ್ರ)ವನ್ನು ಘೋಷಿಸಿ ಇಸ್ಲಾಂ ಧರ್ಮದಲ್ಲಿ ಸರ್ವಾತ್ಮನಾ ನಂಬುತ್ತಾರೆ. ಇಸ್ಲಾಂ ಹೊರತು ಬೇರಾವುದರೊಂದಿಗೂ ತಮ್ಮನ್ನು ಸಂಬಂಧಪಡಿಸಲು ಅವರು ಇಚ್ಛಿಸುವುದಿಲ್ಲ. ಆದರೆ 1984 ಎಪ್ರಿಲ್ 26ರ ನಂತರ, ತಮ್ಮ ಮನಸ್ಸಾಕ್ಷಿಯನ್ನು ವಂಚಿಸಬೇಕೆಂದೂ ತಮ್ಮ ಧರ್ಮನಂಬಿಕೆಯ ಬಗ್ಗೆ ಸುಳ್ಳು ಹೇಳಬೇಕೆಂದೂ ತಮ್ಮ ದೃಢವಿಶ್ವಾಸಕ್ಕೆ ವಿರುದ್ಧವಾಗಿ ತಾವು ಮುಸ್ಲಿಮರಲ್ಲವೆಂದು ಸಾರಬೇಕೆಂದೂ ಅವರನ್ನು ನಿರ್ಬಂಧಿಸಲಾಗುತ್ತಿದೆ. ಅವರಿಗೆ ಓಟಿನ ಹಕ್ಕು ನಷ್ಟವಾಗುತ್ತದೆ.

2. ಒಬ್ಬ ಅಹ್ಮದೀ ಮುಸ್ಲಿಂ ತಾನು ಮುಸ್ಲಿಂ ಎಂದೇ ಕರೆಯಲ್ಪಡಬೇಕೆಂದು ನಿಷ್ಕರ್ಷಿಸಿದರೆ ಆತನನ್ನು ಮೂರು ವರ್ಷ ಕಾಲ ಸೆರೆಮನೆಯಲ್ಲಿಡಲಾಗುವುದು; ಜುಲ್ಮಾನೆಯಿಂದಲೂ ದಂಡಿಸಲಾಗುವುದು.

3. ಪಾಕಿಸ್ತಾನದಲ್ಲಿ ಈ ವಿಶೇಷಾಜ್ಞೆ ಪ್ರಕಾರ ಅಹ್ಮದೀ ಮುಸ್ಲಿಮರನ್ನು ತಮ್ಮ ದಿನ ನಿತ್ಯದ ಪ್ರಾರ್ಥನೆಗಾಗಿ ಇಸ್ಲಾಮಿನ ಸಂಪ್ರದಾಯದಂತಿರುವ ಅಝಾನ್ ಕರೆ ಮೂಲಕ ಆಹ್ವಾನಿಸುವುದರಿಂದ ವಿರೋಧಿಸಲಾಗಿದೆ. ಉಲ್ಲಂಘಿಸಿದರೆ ಸೆರೆಮನೆ ವಾಸ ಮತ್ತು ಜುಲ್ಮಾನೆಯಿಂದ ದಂಡಿಸಲಾಗುವುದು.

4. ತಮ್ಮ ಪ್ರಾರ್ಥನಾಲಯವನ್ನು ಮಸ್‌ಜಿದ್ ಎಂದು ಹೇಳಿದರೆ ಆತನು ಮೂರು ವರ್ಷ ಕಾಲ ಜೈಲು ಶಿಕ್ಷೆಗೆ ಈಡಾಗುವನು.

5. ಆಧ್ಯಾತ್ಮಿಕ ವಿಚಾರಗಳಿಂದ ಕೂಡಿದವುಗಳಾಗಿದ್ದರೂ ಅಹ್ಮದೀ ಮುಸ್ಲಿಮರ ಪ್ರಕಟನೆಗಳಿಗೂ ಸಾಹಿತ್ಯಗಳಿಗೂ ಮುಟ್ಟುಗೋಲು ಹಾಕಲಾಗಿದೆ.

ಮಿ. ಚೇರ್‌ಮನ್,

ಮತವನ್ನು ಪ್ರಬೋಧಿಸಲಿಕ್ಕೂ ಪ್ರಚಾರಪಡಿಸಲಿಕ್ಕೂ ಆಚರಿಸಲಿಕ್ಕೂ ಇಸ್ಲಾಂ ಅನುಮತಿ ನೀಡುತ್ತದೆಂದು ಸೌದಿ ಅರೇಬ್ಯದ ಮಾನ್ಯ ಪ್ರತಿನಿಧಿ ಹೇಳಿದ್ದು ಸರಿಯೇ ಆಗಿದೆ. ಆದರೆ ಪಾಕಿಸ್ತಾನದ ಮಿಲಿಟರಿ ಸರಕಾರ ಜಾರಿಗೊಳಿಸಿದ ವಿಶೇಷಾಜ್ಞೆ ಇದು ಅನುಭವದಲ್ಲಿ ಸುಳ್ಳೆಂದು ತೋರಿಸಿದೆ.

ಆರ್ಡಿನನ್ಸ್ ಜಾರಿಗೆ ಬಂದ ಬಳಿಕ ರೈನ್ ನದಿಯಲ್ಲಿ ತುಂಬಾ ನೀರು ಹರಿದು ಹೋಯಿತು. ಆ ಅಧ್ಯಾದೇಶ ಸೃಷ್ಟಿಸಿದ ದುರವಸ್ಥೆಯಿಂದ ಪಾಕಿಸ್ತಾನದ ಅಹ್ಮದೀ ಮುಸ್ಲಿಮರು ಈಗಲೂ ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದಾರೆ. ಅಹ್ಮದೀ ಮುಸ್ಲಿಮರಿಗೆ ವಿರುದ್ಧವಾಗಿ ಅಲ್ಲಿ ನಡೆಯುತ್ತಿರುವ ಭೀಕರ ಮರ್ದನ ಧ್ವಂಸನಗಳ ವಾರ್ತೆಗಳು ಸರಕಾರದ ನಿಯಂತ್ರಣದಲ್ಲಿರುವ ವಾರ್ತಾ ಮಾಧ್ಯಮಗಳಲ್ಲಿ ಪ್ರಕಟಿಸುವುದಾಗಲಿ ಪ್ರಸಾರಗೊಳಿಸುವುದಾಗಲಿ ಸಮ್ಮತನೀಯವಲ್ಲ. ಈ ಅಮಾನವೀಯ ಆಜ್ಞೆಗೆ ವಿರೋಧವಾಗಿ ಪ್ರತಿಪಕ್ಷಗಳು ಹೊರಡಿಸುವ ಯಾವ ಪ್ರತಿಭಟನೆಯ ಶಬ್ದವೂ ಕೂಡಲೇ ದಮನಿಸಲ್ಪಡುತ್ತದೆ. ಆದರೆ, ‘ಮೈನಾರಿಟೀಸ್ ರೈಟ್ಸ್ ಗ್ರೂಪಿ’ಗೆ ಅವರದೇ ವ್ಯವಸ್ಥೆಗಳಿರುವುದರಿಂದ ಪಾಕಿಸ್ತಾನದ ಒಳಗೆ ನಡೆಯುತ್ತಿರುವ ಈ ಘಟನೆಗಳ ಕುರಿತು ಆಗಿಂದಾಗ್ಗೆ ಅರಿತುಕೊಳ್ಳಲು ಸಾಧ್ಯವಾಗುತ್ತದೆ.

‘ಅಸ್ಸಲಾಮು ಅಲೈಕುಂ’ ಎಂಬ ಸುಂದರವಾದ ಶುಭಕೋರಿಕೆ ಹೇಳಿದ ಅಪರಾಧವನ್ನು ಆರೋಪಿಸಿ ನೂರಾರು ಅಹ್ಮದೀಯರನ್ನು ಬಂಧಿಸಲಾಯಿತು. ಅಝಾನ್ ಕರೆ ನೀಡಿದ ಅಪರಾಧವನ್ನು ಹೊರಿಸಿ ಹಲವರನ್ನು ಕೈದು ಮಾಡಿ ನ್ಯಾಯಾಲಯದಲ್ಲಿ ಹಾಜರುಪಡಿಸಲಾಯಿತು, ಅವರ ಮನೆಗಳನ್ನು ಬೆಂಕಿಗಾಹುತಿ ಮಾಡಿ ಅವರ ಮಸೀದಿಗಳನ್ನು ಹಾಳುಗೆಡಹಲಾಯಿತು. ಅವರ ಮಸೀದಿಗಳಲ್ಲಿ ಬರೆಯಲಾದ ‘ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದ್ ರಸೂಲುಲ್ಲಾಹ್’ ಎಂಬ ಮಹದ್ವಚನವನ್ನು ಅಳಿಸಲಾಯಿತು, ಅವರ ಸಂಪತ್ತನ್ನು ಕೊಳ್ಳೆ

ಹೊಡೆಯಲಾಯಿತು. ಹಲವರನ್ನು ನಿಷ್ಕರುಣವಾಗಿ ಕೊಲೆಗೈಯ್ಯಲಾಯಿತು.

ಯಾರಿಗಾದರೂ ಒಬ್ಬ ಅಹ್ಮದಿಯ ಮೇಲೆ ಹಗೆ, ದ್ವೇಷವಿದ್ದರೆ, ಆ ಅಹ್ಮದಿ ಸ್ವಯಂ ಮುಸ್ಲಿಂ ಎಂದು ಹೇಳಿದನೆಂದೋ ತನ್ನ ಪ್ರಾರ್ಥನಾ ಸ್ಥಳವನ್ನು ಮಸ್‌ಜಿದ್ ಎಂದು ಹೆಸರಿಸಿದನೆಂದೋ ಆತನು ಯಾರಿಗಾದರೂ ಸಲಾಂ ಹೇಳಿದನೆಂದೋ ಇತ್ಯಾದಿಯಾಗಿ ಆರೋಪಿಸಿ ಪೋಲೀಸಿಗೆ ದೂರಿತ್ತರೆ ಸಾಕು. ಈ ಕೃತ್ಯಗಳೆಲ್ಲಾ ಒಂದು ವಿನೋದದ ಬೇಟೆಯಾಗಿ ಮಾತ್ರ ಗಣಿಸಲ್ಪಡುತ್ತದೆ. ಆರ್ಡಿನನ್ಸ್ ಜ್ಯಾರಿಗೆ ಬಂದ ನಂತರ ಪಾಕಿಸ್ತಾನದ ಪ್ರತಿ ಅಹ್ಮದಿಯ ಜೀವವೂ ಸಂಪತ್ತೂ ಮಾನವೂ ಅಪಾಯದಲ್ಲಿ ಸಿಲುಕಿದೆ. ಲಷ್ಕರಿ ಆಡಳಿತೆಯ ಕರಿ ನೆರಳಿನಲ್ಲಿ ಅವರು ಶಾರೀರಿಕವಾಗಿಯೂ ಮಾನಸಿಕವಾಗಿಯೂ ಕಠಿಣ ಪೀಡನಗಳಿಗೆ ಈಡಾಗುತ್ತಿದ್ದಾರೆ.

ಮಿ. ಚೇರ್‌ಮನ್, ಪ್ರಪಂಚದಲ್ಲಿ ಇಂದು ಇರುವ ಮತಸ್ವಾತಂತ್ರ್ಯ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯದ ಸಮಸ್ಯೆಗಳ ಕುರಿತು ಮಹಾಬುದ್ಧಿವಂತರು ಒಟ್ಟು ಸೇರಿ ಚರ್ಚಿಸುತ್ತಿರುವ ಈ ಮಹತ್ವದ ವೇದಿಕೆಯಲ್ಲಿ ಧಾರ್ಮಿಕ ಅಸಹಿಷ್ಣುತೆಯಿಂದ ಸಂಜಾತವಾಗಿರುವ ಸಮಕಾಲೀನ ಘಟನೆಗಳ ಬಗ್ಗೆ ಬೆಳಕು ಬೀರುವ ಒಂದು ಉದಾಹರಣೆಯನ್ನು ಮೈನಾರಿಟಿ ರೈಟ್ಸ್ ಗ್ರೂಪ್‌ಗೆ ಅರ್ಪಿಸುವುದು ಮಾತ್ರ ಮಾಡುತ್ತಿದ್ದೇನೆ.

ಹಾರ್ದಿಕ ಕೃತಜ್ಞತೆಗಳು.

### ಜಸ್ಟಿಸ್ ಜಾವೀದ್ ಇಖ್ಬಾಲರ ಮಾರ್ನುಡಿ

ನಾನು ಪಾಕಿಸ್ತಾನ್ ಸರಕಾರವನ್ನು ಪ್ರತಿನಿಧೀಕರಿಸಿಯಲ್ಲ, ವೈಯಕ್ತಿಕವಾಗಿ ಮಾತನಾಡುತ್ತಿದ್ದೇನೆ. ಮೈನಾರಿಟೀಸ್ ರೈಟ್ಸ್ ಗ್ರೂಪ್ ವೀಕ್ಷಕನ ಸೂಚನೆಗಳಿಗೆ ಕೆಲವು ವಿಶದೀಕರಣಗಳನ್ನು ನೀಡಬೇಕಾದುದು ಆವಶ್ಯಕ.

ಅಲ್ಪಸಂಖ್ಯಾತರ ವಿಷಯದಲ್ಲಿ ಮತಪರವಾದ ಯಾವ ಅಸಹಿಷ್ಣುತೆಯೂ ಪಾಕಿಸ್ತಾನದಲ್ಲಿಲ್ಲ. ಆದರೆ ಆರಾಧನಾ ಸ್ವಾತಂತ್ರ್ಯವೆಂದರೆ, ಇತರರಿಗೆ ಉಪದ್ರವ ಕೊಡಲಿಕ್ಕಿರುವ ಹಕ್ಕಲ್ಲ. ಇತರರ ಮೇಲೆ ಅತಿಕ್ರಮವೆಸಗಿದರೆ ಆ ಹಕ್ಕುಗಳಿಗೆ ತಡೆಯುಂಟಾಗುತ್ತದೆ. ಇಂತಹ ಹಕ್ಕುಗಳನ್ನು ನಿಯಮ ಮೂಲಕದ ನಿಯಂತ್ರಣಗಳಿಂದ ತಡೆಯಬೇಕಾಗಿದೆ. ಓರ್ವನ ಮತ ಪ್ರಚಾರ ಸ್ವಾತಂತ್ರ್ಯಕ್ಕೆ ಮಿತಿಯನ್ನು ನಿಶ್ಚಯಿಸಬೇಕಾಗುತ್ತದೆ. ಇಂತಹ ನಿಯಂತ್ರಣಗಳನ್ನು ಹೇರದಿದ್ದರೆ ಜನರ ರಕ್ಷಣೆಗೂ ಸದಾಚಾರಕ್ಕೂ ಸ್ವಾಸ್ಥ್ಯಕ್ಕೂ ಅಪಾಯ ಉಂಟಾಗುತ್ತದೆ.

ಪಾಕಿಸ್ತಾನದಲ್ಲಿ 1981ರ ಖಾನೇಷುಮಾರಿ ಪ್ರಕಾರ ಇಸ್ಲಾಂ ಅಲ್ಲದ ಇತರ ಮತಾನುಯಾಯಿಗಳು 2.8 ಮಿಲಿಯ (28 ಲಕ್ಷ) ಮಂದಿ. ಎಂದರೆ, ಜನಸಂಖ್ಯೆಯ ಶೇಕಡಾ 3.2.

ಅತಿ ದೊಡ್ಡ ಅಲ್ಪಸಂಖ್ಯಾತರಾದ ಕ್ರೈಸ್ತರು 13 ಲಕ್ಷ. ಎಂದರೆ, ಜನಸಂಖ್ಯೆಯ ಶೇಕಡಾ 1.55. ಎರಡನೆಯ ದೊಡ್ಡ ಅಲ್ಪಸಂಖ್ಯಾತರಾದ ಹಿಂದೂಗಳ ಜನಸಂಖ್ಯೆ 1.276 ಮಿಲಿಯ. ಎಂದರೆ ಶೇಕಡಾ 1.51. ಇತರ ಅಲ್ಪಸಂಖ್ಯಾತರು ಪಾರ್ಸಿಗಳೂ ಬುದ್ಧಮತದವರೂ ಸಿಕ್ಖರೂ ಆಗಿದ್ದಾರೆ.

1981ರ ಜನಗಣತಿ ಪ್ರಕಾರ ಪಾಕಿಸ್ತಾನದ ಅಹ್ಮದೀಯರ ಸಂಖ್ಯೆ 63,674. ಎಂದರೆ, ಒಟ್ಟು ಜನಸಂಖ್ಯೆಯ ಶೇಕಡಾ 0.12. ಈ ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ಮಟ್ಟಿಗೆ ಯಾವ ಪಕ್ಷಪಾತವನ್ನೂ ಪಾಕಿಸ್ತಾನದಲ್ಲಿ ಮಾಡಲಾಗುವುದಿಲ್ಲ. ಅನುಪಾತಿಕವಾಗಿ ನೋಡುವುದಾದರೆ ಅಹ್ಮದೀಯರಲ್ಲಿ ಹೆಚ್ಚು ಜನರು ಉನ್ನತ ಸರಕಾರಿ ಹುದ್ದೆಗಳನ್ನು ವಹಿಸುವವರಾಗಿದ್ದಾರೆ.

ಇತರ ಮುಸ್ಲಿಮರಿಗೆ ನೋವನ್ನುಂಟು ಮಾಡುವ ಕೆಲವು ನಂಬಿಕೆಗಳನ್ನು ಅಹ್ಮದೀಯರು ಇಟ್ಟುಕೊಂಡಿದ್ದಾರೆ. ಅವರನೇ ಸಂರಕ್ಷಣೆಗಾಗಿ ಅವರನ್ನು ಅಲ್ಪಸಂಖ್ಯಾತರನ್ನಾಗಿ ಘೋಷಿಸಲಾಗಿದೆ. ಅದು ಲಷ್ಕರಿ ಆಡಳಿತೆ ಮಾಡಿದ್ದಲ್ಲ. ಪಾಕಿಸ್ತಾನದ ಸಂವಿಧಾನದಲ್ಲಿ ತಿದ್ದುಪಡಿ ಮೂಲಕ ಹಾಗೆ ಮಾಡಲಾಗಿದೆ. ಇದು ಅವರ ಸಂರಕ್ಷಣೆಗೆ ತಾನೇ ಮಾಡಲಾಗಿದೆ.

ಕಳೆದ 100 ವರ್ಷಗಳಿಂದ ಇಸ್ಲಾಂ ಧರ್ಮದಿಂದ ಬೇರ್ಪಟ್ಟ ಎರಡು ಮತಗಳಿವೆ. ಒಂದು ಬಹಾಯಿಸಂ, ಮತ್ತೊಂದು ಅಹ್ಮದಿಯಾ. ಬಹಾಯಿಗಳು ತಾವು ಮುಸ್ಲಿಮರೇ ಅಲ್ಲವೆಂದು ವಾದಿಸುವುದರಿಂದ ಸಮಸ್ಯೆಯೇನೂ ಇಲ್ಲ. ಅಹ್ಮದೀಯರಾದರೋ ಅವರು ಸ್ವಯಂ ಮುಸ್ಲಿಮರೆಂದು ವಾದಿಸುವರು ಹಾಗೂ ಇತರ ಮುಸ್ಲಿಂ ಪಂಥಗಳನ್ನು ಕಾಫಿರೆಂದು ಗಣಿಸುತ್ತಾರೆ. ಅಲ್ಪಸಂಖ್ಯಾತರು ತಾವು ಸತ್ಯಧರ್ಮದವರೆಂದು ವಾದಿಸುತ್ತಾ ಇತರ ಬಹುಸಂಖ್ಯಾತರನ್ನು ಕಾಫಿರೆಂದು ಭಾವಿಸುವುದು ಬಹಳ ವಿಚಿತ್ರ

ವೆನಿಸುತ್ತದೆ, ಬಹುಸಂಖ್ಯಾತ ಮುಸ್ಲಿಮರೊಂದಿಗಿರುವ ಈ ವಿವಾದಕ್ಕೆ 100 ವರ್ಷ ಪ್ರಾಯವಿದೆ.

ಮಾತ್ರವಲ್ಲ, ಇತರರೆಲ್ಲರೂ ಸ್ವಾತಂತ್ರ್ಯಕ್ಕಾಗಿ ಸಮರ ಹೂಡುತ್ತಿರುವಾಗ ಈ ಜನರು ಬ್ರಿಟಿಷರಿಗೆ ವಿಧೇಯರಾಗಿದ್ದರು. ಇತರ ಮುಸ್ಲಿಮರ ಪಾಲಿಗೆ ಬರುತ್ತಿದ್ದ ಉನ್ನತ ಉದ್ಯೋಗಗಳು ಈ ಕಾರಣದಿಂದ ಅವರು ಕೈವಶಪಡಿಸಿದರು.

1974ರಲ್ಲಿ ⅔ ಅಂಶ ಬಹುಮತ ಪ್ರಕಾರ ಪಾರ್ಲಿಮೆಂಟ್ ತೀರ್ಮಾನಿಸಿದಂತೆ, ಇತರ ಮುಸ್ಲಿಮರೊಂದಿಗೆ ಅಹ್ಮದೀಯರಿಗಿರುವ ವಿಶ್ವಾಸ ಭಿನ್ನತೆಯ ಹೆಸರಿನಲ್ಲಿ ಅವರನ್ನು ಅಲ್ಪಸಂಖ್ಯಾತರನ್ನಾಗಿ ಘೋಷಿಸಲಾಯಿತು. ಕಾರಣವೇನೆಂದರೆ, ಅವರ ಭಾಷಣಗಳೂ ವಿಶ್ವಾಸ ಘೋಷಣೆಗಳೂ ಒಂದು ಭೀಕರ ವಾತಾವರಣವನ್ನು ಸೃಷ್ಟಿಸಿರುವುವುದರಿಂದ ಅವರ ಸಂರಕ್ಷಣೆಗಾಗಿಯೇ ಹಾಗೆ ಮಾಡಲಾಗಿತ್ತು. ಈ ಪರಿಸ್ಥಿತಿಯಲ್ಲಿ ಅಲ್ಪಸಂಖ್ಯಾತರ ಸಂರಕ್ಷಣೆಗಿರುವ ವಿಶ್ವ ಘೋಷಣೆಯೇ ಹೀಗೆ ನಿಯಂತ್ರಿಸಲಿಕ್ಕೆ ನಿರ್ಬಂಧಿಸುತ್ತದೆ.

'ಅಸ್ಸಲಾಮು ಅಲೈಕುಂ' ಎಂದು ಹೇಳಿದುದಕ್ಕೆ ಅಹ್ಮದೀಯರನ್ನು ಕೈದು ಮಾಡಲಾಗುತ್ತದೆಯೆಂಬುದು ಮೈನಾರಿಟಿ ರೈಟ್ಸ್ ಗ್ರೂಪಿನ ಆ ವೀಕ್ಷಕನು ಹೇಗೆ ಮನಗಂಡದ್ದೆಂದು ನನಗೆ ತಿಳಿದಿಲ್ಲ.

ಅಹ್ಮದೀಯರು ಈಗಲೂ ಪ್ರಧಾನ ಉದ್ಯೋಗದಲ್ಲಿದ್ದಾರೆ. ಇಲ್ಲಿ ಯುನೈಟೆಡ್ ನೇಶನ್ಸ್‌ನಲ್ಲಿ ನಮ್ಮ ಅಂಬಾಸಿಡರ್ ಸಹ ಓರ್ವ ಅಹ್ಮದಿ.

ಹೆಚ್ಚಿನ ವಿವರಣೆಗೆ ಪ್ರವೇಶಿಸದೆಯೇ, ಅಹ್ಮದೀಯರ ಅಝಾನ್ ಕರೆ ಜನರನ್ನು ಯಾಕೆ ಕ್ಷುಭಿತರನ್ನಾಗಿ ಮಾಡುತ್ತದೆಂದು ನಾನು ಹೇಳುತ್ತೇನೆ: ಇಬ್ಬರು ಯುವಕರು ಅಹ್ಮದೀಯರ ಒಂದು ಮಸೀದಿಯಲ್ಲಿ ಅವರು ಅಝಾನ್ ಕರೆ ನೀಡುತ್ತಿದ್ದಾರೆಯೇ ಎಂದು ನೋಡಲಿಕ್ಕೆ ಹೋದರು. ಅವರೀರ್ವರಿಗೂ ಗುಂಡಿಕ್ಕಲಾಯಿತು. ಆದರೆ ಗಲಭೆ ಸ್ಫೋಟಗೊಳ್ಳುವುದನ್ನು ತಡೆಯಲಿಕ್ಕಾಗಿ ಸರಕಾರವು ಈ ವಾರ್ತೆಯನ್ನು ರಹಸ್ಯವಾಗಿರಿಸಿತು.

ಈ ನಿಯಮ ನಿರ್ಮಾಣವು ಅವರ ಸಂರಕ್ಷಣೆಗೋಸ್ಕರ ಮಾತ್ರವಾಗಿತ್ತು. ಅವರನ್ನು ಮರ್ದಿಸಲಾಗುತ್ತದೆಯೆಂದು ಹೇಳಿದ್ದು ಸರಿಯಲ್ಲ. ಮಿತಿಯೊಳಗೆ ಅವರ ವಿಶ್ವಾಸಗಳನ್ನು ಆಚರಿಸುವುದಕ್ಕೆ ಅವರಿಗೆ ಸ್ವಾತಂತ್ರ್ಯವಿದೆ. ಉಚ್ಚ ಸ್ವರದಲ್ಲಿ ಅಝಾನ್ ಕರೆ ನೀಡುವುದನ್ನು ಮುಸ್ಲಿಮರು ಅಲ್ಪಸಂಖ್ಯೆಯಲ್ಲಿರುವ ಕೆಲವು ಸ್ಥಳಗಳಲ್ಲಿ ಅನುಮತಿಯನ್ನೀಯದ ಘಟನೆಗಳು ನಡೆದಿವೆ. ಮಸೀದಿಯೊಳಗೆ ಮಾತ್ರ ಕೇಳುವಂತೆ ತಗ್ಗು ಸ್ವರದಲ್ಲಿ ಅವರು ಅಝಾನ್ ಕರೆ ನೀಡಬಹುದಾಗಿದೆ.

ಅಹ್ಮದೀಯರಿಗೆ ಅವರ ಆರಾಧನಾ ಸ್ಥಳದಲ್ಲಿ ಅವರಿಗೆ ಬೇಕಾದುದೆಲ್ಲಾ ಹೇಳಬಹುದು. ಇದು ಮತ ಅಸಹಿಷ್ಣುತೆಯ ಸರಿಯಾದ ಒಂದು ಉದಾಹರಣೆಯೇ ಅಲ್ಲ.

## ಅಹ್ಮದಿಯಾ ಪ್ರತಿನಿಧಿಯ ಮರುನುಡಿ

ಡಿಸೆಂಬರ್ 6ರಂದು ಅಹ್ಮದಿಯಾ ಪ್ರತಿನಿಧಿ ಎಸ್. ನಾಸಿರ್ ಅಹ್ಮದ್ ಹೀಗೆ ಮರುತ್ತರ ನೀಡಿದರು:

ಕಾರ್ಯಸೂಚಿಯ ಎರಡನೆಯ ಅಂಶವನ್ನು ಸ್ಪರ್ಶಿಸಿ ಮತ್ತೊಮ್ಮೆ ಈ ವೀಕ್ಷಕನಿಗೆ ಮಾತನಾಡಲಿಕ್ಕೆ ಸಂದರ್ಭ ನೀಡಿದುದಕ್ಕೆ ನಾನು ತಮಗೆ ಕೃತಜ್ಞನಾಗಿದ್ದೇನೆ. ಪುನಃ ಈ ವೇದಿಕೆಯಲ್ಲಿ ನಿಲ್ಲಬೇಕಾದೀತೆಂದು ನಾನು ನಿನ್ನೆ ಭಾವಿಸಿರಲಿಲ್ಲ. ಆದರೆ, ಈ ಸೆಮಿನಾರಿನ ಉದ್ದೇಶಲಕ್ಷ್ಯಗಳನ್ನು ಮನ್ನಿಸಿಕೊಂಡು ಭಾವೀ ಪೀಳಿಗೆಗೆ ಕ್ರಿಯಾತ್ಮಕವಾದ ಸತ್ಕಾರ್ಯ ಗೈಯ್ಯಬೇಕೆಂಬ ನಿರೀಕ್ಷೆಯಲ್ಲಿ ಕೆಲವು ವಾಸ್ತವಾಂಶಗಳನ್ನು ಇಲ್ಲಿ ವಕ್ರತೆ ಇಲ್ಲದೆ ಸಾದರಪಡಿಸಬೇಕಾಗಿದೆ ಎಂದು ನನಗೆ ಅನಿಸುತ್ತಿದೆ. ಈ ಯಾಥಾರ್ಥ್ಯಗಳನ್ನು ಹೇಳದಿದ್ದರೆ ಈ ಸೆಮಿನಾರ್ ಅದರ ಕರ್ತವ್ಯಗಳ ಬಗ್ಗೆ ನೀತಿಪಾಲಿಸಿತೆಂದು ಹೇಳಲಾಗದು. ನಾನು ಬಹಳ ಬಹುಮಾನಾದರದಿಂದ ಕಾಣುವ ಪಾಕಿಸ್ತಾನದ ಗೌರವಾನ್ವಿತ ಪ್ರತಿನಿಧಿಯ ಭಾಷಣವನ್ನು ಅವಲಂಬಿಸಿ ನಾನೀಗ ಮಾತನಾಡಲು ಇಚ್ಛಿಸುತ್ತೇನೆ. ಅವರ ತಪ್ಪಿನಿಂದಲ್ಲವಾದರೂ ಅವರು ಹೇಳಿದ ಕೆಲವು ವಿಚಾರಗಳು ಸರಿಯಲ್ಲ. ಕಾರಣವೇನೆಂದರೆ, ಅವರಿಗೆ ದೊರೆತ ವಿವರಗಳು ಅಧಿಕೃತವಾಗಿ ಲಭಿಸಿದ್ದಾಗಿರಬಹುದು. ಪಾಕಿಸ್ತಾನದಲ್ಲಿ ಸಂಭವಿಸುವುದು ಒಂದು, ಅಧಿಕೃತ ವರದಿ ಮತ್ತೊಂದಾಗಿದೆ.

## ಆರಾಧನಾ ಸ್ವಾತಂತ್ರ್ಯ

ಆರಾಧನಾ ಸ್ವಾತಂತ್ರ್ಯವೆಂದರೆ ಇತರರಿಗೆ ತೊಂದರೆ ಕೊಡುವುದಲ್ಲವೆಂದು ನನ್ನ ಬಹುಮಾನ್ಯ ಪ್ರತಿನಿಧಿಯ ಅಭಿಪ್ರಾಯದೊಂದಿಗೆ ನಾನು ಪೂರ್ಣ ಸಹಮತವುಳ್ಳವ

ನಾಗಿದ್ದೇನೆ. ಆದರೆ ಒಪ್ಪಲು ತೀರಾ ಅಸಾಧ್ಯ ವಿಚಾರವೇನೆಂದರೆ: ಪಾಕಿಸ್ತಾನದ 80 ಮಿಲಿಯ ಜನರು ಅಝಾನ್ ಕರೆ ಮೂಲಕ ಆ ದೇಶದ ಶಾಂತಿಭಂಗ ಉಂಟು ಮಾಡದಿದ್ದರೆ ಓರ್ವ ಅಹ್ಮದೀ ಮುಸ್ಲಿಂ 'ಲಾ ಇಲಾಹ ಇಲ್ಲಲ್ಲಾಹ್, ಮುಹಮ್ಮದ್ ರಸೂಲುಲ್ಲಾಹ್' ಎಂದು ಅಝಾನ್ ಕರೆ ನೀಡುವಾಗ ಹೇಗೆ ಅಲ್ಲಿನ ಬಹುಸಂಖ್ಯಾತರ ಭದ್ರತೆಗೂ ಧಾರ್ಮಿಕತೆಗೂ ಸ್ವಾಸ್ಥ್ಯಕ್ಕೂ ಬೆದರಿಕೆಯಾದೀತು?

## 1981ರ ಜನಗಣತಿ

ಇಸ್ಲಾಮಿನ ವಿಶ್ವಾಸ ಪ್ರಮಾಣವಾದ 'ಕಲಿಮ'ದ ವಾಕ್ಯಗಳು, ದೇಶದಾದ್ಯಂತ ಲಕ್ಷಗಟ್ಟಲೆ ಅಹ್ಮದಿಯೇತರ ಮಸೀದಿಗಳಲ್ಲಿ ಬರೆಯಲ್ಪಟ್ಟದ್ದು ಯಾವುದೂ ಇತರರಿಗೆ ತೊಂದರೆ ಕೊಡುವುದಿಲ್ಲವಾದರೆ, ಮತ್ತೆ ಹೇಗೆ ಅಹ್ಮದಿಯಾ ಮಸೀದಿಯ ಮುಂದೆ ಕಲಿಮ ಬರೆದರೆ ಶಾಂತಿ ಭಂಗವಾಗುತ್ತದೆಂದೂ ನನಗರಿಯುವುದಿಲ್ಲ.

1981ರ ಖಾನೇಷುಮಾರಿ ಪ್ರಕಾರ ಅಹ್ಮದೀಯರ ಸಂಖ್ಯೆ 63,674 ಎಂದು ಇಲ್ಲಿ ಹೇಳಿದ್ದು ಕೇಳಿದೆನು. ಜನಗಣತಿ ಪ್ರಕಾರದ ಲೆಕ್ಕ ಇದೇ ಆಗಿದ್ದರೆ, ಆಡಳಿತಾಧಿಕಾರಿಗಳ ಕಾರ್ಯದಕ್ಷತೆ ಮನಗಾಣಲು ಇದೇ ಸಾಕು. ಸನ್ಮಾನ್ಯ ಭಾಷಣಗಾರ ಪಾಕಿಸ್ತಾನದ ಅಹ್ಮದೀಯರ ಸರಿಯಾದ ಸಂಖ್ಯೆಯನ್ನು 60ರಿಂದ ಭಾಗಿಸಿರುವರೆಂದು ನನಗೆ ತೋಚುತ್ತದೆ. ಪಾಕಿಸ್ತಾನದ ಒಂದೇ ಪಟ್ಟಣದಲ್ಲಿ 63 ಸಾವಿರಕ್ಕಿಂತಲೂ ಹೆಚ್ಚು ಅಹ್ಮದೀಯರನ್ನು ನಾನು ತೋರಿಸಿಕೊಡುವೆನು. ಒಂದು ವಾರ್ಷಿಕ ಸಮ್ಮೇಳನದಲ್ಲಿ ಎರಡೂವರೆ ಲಕ್ಷ ಮಂದಿ ಅಹ್ಮದೀಯರ ಭಾಗವಹಿಸಿರುವುದನ್ನು ಎಣಿಸಿ ಲೆಕ್ಕಹಾಕಲಾಗಿದೆ. ಅದು ಕೂಡ ಆ ರಾಜ್ಯದ ಅಹ್ಮದೀಯರ ಬಹಳ ಚಿಕ್ಕ ಶೇಕಡಾ ಸಂಖ್ಯೆ ಮಾತ್ರವಾಗಿತ್ತು. ಅಹ್ಮದೀಯರಿಗೆ ಅವರ ಜನಸಂಖ್ಯೆಯನ್ನು ಹೆಚ್ಚುಮಾಡಿ ತೋರಿಸುವ ಯಾವ ಅಗತ್ಯವೂ ಇಲ್ಲ. ಅವರು ದೇಶದ ಒಂದು ಸಣ್ಣ ಅಲ್ಪಸಂಖ್ಯಾತ ವರ್ಗದವರಾಗಿದ್ದಾರೆ. ಆದರೆ ತಮ್ಮ ಜನಸಂಖ್ಯೆಯನ್ನು 60ರಿಂದ ಭಾಗಿಸಿ ತೋರಿಸಲಿಕ್ಕೂ ಅವರಿಚ್ಛಿಸುವುದಿಲ್ಲ. ಅದು ಬಿಡಿ, ಅವರ ಜನಸಂಖ್ಯೆ ಇಷ್ಟು ಕಿರಿದಾಗಿದ್ದರೆ. ಒಂದು ಅಧ್ಯಾದೇಶ ಮೂಲಕ ಇಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಾದ ಅವಶ್ಯವೇನಿದೆ?

## ಉನ್ನತ ಹುದ್ದೆಗಳು

ಜನಸಂಖ್ಯೆಯ ಅನುಪಾತಕ್ಕಿಂತ ಹೆಚ್ಚು ಅಹ್ಮದೀಯರು ಉನ್ನತ ಸ್ಥಾನದಲ್ಲಿರುವ ಉದ್ಯೋಗಗಳಲ್ಲಿ ಇದ್ದಾರೆಂಬುದು ಸತ್ಯವೇ ಆಗಿದೆ. ಅದು ಅರ್ಹತೆಗನುಸಾರವಾದ ಸ್ಥಾನ ನೀಡುವಿಕೆಯ ಕ್ರಮವನ್ನು ಪಾಲಿಸುತ್ತಿರುವುದರಿಂದಾಗಿದೆ. ಉನ್ನತ ವಿದ್ಯಾಭ್ಯಾಸದ ಕಾರಣದಿಂದಲೂ ಸತ್ಯಸಂದತೆ, ಕರ್ತವ್ಯ ನಿಷ್ಠೆ, ಸ್ಥಿರೋತ್ಸಾಹ, ಪ್ರಾಮಾಣಿಕತೆ ಎಂಬೀ ಸದ್ಗುಣಗಳಿಗೆ ಅಹ್ಮದೀಯರ ಹೆಸರುವಾಸಿಯಾಗಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಅವರ ದೇಶಾಭಿಮಾನವೂ ಪ್ರಸಿದ್ಧವಾಗಿದೆ. ಅವರ ತ್ಯಾಗಶೀಲತೆಯು ಆದರ್ಶಪ್ರಾಯವಾಗಿದೆ. ಉನ್ನತ ಹುದ್ದೆ ನೀಡಲಾದುದು ಯಾರದೇ ಔದಾರ್ಯದಿಂದಲ್ಲ. ದೇಶಕ್ಕೆ ಅಂತಹವರ ಅಗತ್ಯವಿರುವುದರಿಂದ ಮಾತ್ರವಾಗಿದೆ. ಪಾಕಿಸ್ತಾನ ನಭೋಮಂಡಲದಲ್ಲಿ ಅಹ್ಮದೀ ಮುಸ್ಲಿಮರು ಮಿನುಗುವ ನಕ್ಷತ್ರಗಳೋಪಾದಿಯಲ್ಲಿ ಶೋಭಿಸಿದರು. ಕಾರಣವೇನೆಂದರೆ, ಅಷ್ಟು ಸಂಘಟಿತವಾದ ಅಂತಹ ಶಿಸ್ತು ಇರುವ ಬೇರೊಂದು ಸಮುದಾಯವನ್ನು ಪಾಕಿಸ್ತಾನದಲ್ಲಿ ಕಾಣಲು ಸಾಧ್ಯವಿಲ್ಲ. ಅವರು ಅತಿ ನುರಿತ ಕೆಲವು ಜನರಲುಗಳನ್ನೂ ರಾಜತಾಂತ್ರಿಕರನ್ನೂ ವಿಜ್ಞಾನಿಗಳನ್ನೂ ಕೊಡುಗೆಯಿತ್ತರು. ಇದೇ ಕಾರಣದಿಂದಲೇ ಪಾಕಿಸ್ತಾನದ ರಾಷ್ಟ್ರಪಿತ ಮುಹಮ್ಮದಲಿ ಜಿನ್ನಾ ಓರ್ವ ಅಹ್ಮದೀ ಮುಸ್ಲಿಮರಾದ ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್ (ಇವರು ಜಾಗತಿಕ ನ್ಯಾಯಾಲಯದ ಅಧ್ಯಕ್ಷರಾದ ಬಳಿಕ ನಿವೃತ್ತಿ ಹೊಂದಿದರು) ಅವರನ್ನು ಪ್ರಥಮ ವಿದೇಶ ಮಂತ್ರಿಯಾಗಿ ನೇಮಿಸಿದರು. ಪಾಕಿಸ್ತಾನದ ಚರಿತ್ರೆಯಲ್ಲಿ ಅಷ್ಟು ದೀರ್ಘ ಕಾಲ ವಿದೇಶ ಸಚಿವರಾಗಿ ವಿರಾಜಿಸಿದ ಬೇರೆ ಯಾರೂ ಇಲ್ಲ. ಮುಸ್ಲಿಂ ಲೋಕದಲ್ಲಿಡೀ ನೊಬೆಲ್ ಪ್ರಶಸ್ತಿ ಗಳಿಸಿದ ಒಬ್ಬನೇ ಒಬ್ಬ ವಿಜ್ಞಾನಿ ಓರ್ವ ಅಹ್ಮದೀ ಮುಸ್ಲಿಂ ಆಗಿದ್ದಾರೆ. ಆದರೆ ಅರ್ಹತೆ ನೋಡಿ ಉದ್ಯೋಗ ನೀಡುವ ಆ ರೂಢಿ ಹೋಗಿ ಎಷ್ಟೋ ಕಾಲವಾಯಿತು. ಈಗ ಸ್ವಜನ ಪಕ್ಷಪಾತವು ಪಾಕಿಸ್ತಾನದಲ್ಲಿ ತಾಂಡವವಾಡುತ್ತಿದೆ. ಅಹ್ಮದೀಯರನ್ನು ಉನ್ನತ ಹುದ್ದೆಗಳಿಂದೆಲ್ಲಾ ವಜಾಮಾಡಲಾಗುತ್ತದೆ. ಅಹ್ಮದಿಯೆಂಬ ಕಾರಣದಿಂದ ಓರ್ವ ಸ್ಟೆನೋಗ್ರಾಫರ್‌ನಿಗೆ ಕೂಡ ತನ್ನ ನೌಕರಿಯನ್ನು ತೊರೆಯಬೇಕಾಗಿಬಂತು.

## ಬ್ರಿಟಿಷ್ ಆಳ್ವಿಕೆಯೊಂದಿಗೆ ಸಹಕಾರ ಮತ್ತು ಸ್ವಾತಂತ್ರ್ಯ ಸಮರ

ಹೌದು, ಅಹ್ಮದೀಯರು ಬ್ರಿಟಿಷ್ ಸರಕಾರದೊಡನೆ ಸಹಕರಿಸಿದ್ದರು. ಕಾರಣವೇನೆಂದರೆ, ಆಯಾ ಕಾಲದ ಆಡಳಿತದೊಂದಿಗೆ ಸಹಕರಿಸಬೇಕೆಂಬುದು ಅವರ ಒಂದು ತತ್ವವಾಗಿದೆ. ಅವರು ಸಂಪೂರ್ಣ ಶಾಂತಿಪ್ರಿಯರಾಗಿದ್ದಾರೆ. ಮಾತ್ರವಲ್ಲದೆ, ಬ್ರಿಟಿಷ್ ಸರಕಾರ ಅತ್ಯಂತ ಮತಸ್ವಾತಂತ್ರ್ಯವನ್ನು ನೀಡಿದ್ದರು. ಸಹಿಷ್ಣುತೆಯ ಉತ್ತಮ ಮಾದರಿಯನ್ನು ಅವರು ತೋರಿಸಿದ್ದರು. ಇಂದಿನ ಮುಲ್ಲಾಗಳಿಗೆ ಅವರಿಂದ ಬಹಳಷ್ಟು ಕಲಿಯಲಿಕ್ಕಿದೆ. ನಮ್ಮ ಗೌರವಾನ್ವಿತರಾದ ಪಾಕಿಸ್ತಾನ್ ಪ್ರತಿನಿಧಿಯ ಪಿತ ಅಲ್ಲಾಮ ಇಖ್ಬಾಲ್ ಸಹ ಬ್ರಿಟಿಷರೊಂದಿಗೆ ಬಹಳ ಹೆಚ್ಚು ಸಹಕಾರವನ್ನು ತೋರಿಸಿದವರು. ವಿಕ್ಟೋರಿಯಾ ರಾಣಿ ಮೃತಪಟ್ಟಾಗ ಅವರು ಒಂದು ಕವಿತೆ ಬರೆದರು. ಅದು ಹೀಗಿತ್ತು:

ಅಯೆ ಹಿಂದ್ ತೇರೆ ಸರ್ ಸೆ ಉಠಾ ಸಾಯೆ ಖುದಾ

"ಎಲೈ ಇಂಡಿಯಾ ದೇಶವೇ,ನಿನ್ನ ತಲೆಯ ಮೇಲಿಂದ ದೈವಿಕ ನೆರಳು ನೀಗಿಸಲ್ಪಟ್ಟಿದೆ,"

ವಿಕ್ಟೋರಿಯಾ ಮಹಾರಾಣಿಯನ್ನು ಅಲ್ಲಾಹ್ ನೀಡಿದ ನೆರಳಿಗೆ ಇಖ್ಬಾಲ್ ಹೋಲಿಸಿದ್ದಾರೆ. ಬ್ರಿಟಿಷ್ ಕಿರೀಟಕ್ಕೆ ಮಾಡಿದ ಸೇವೆಗಳ ಪ್ರತಿಫಲವಾಗಿ ಅಲ್ಲಾಮ ಇಖ್ಬಾಲರಿಗೆ ಸರ್ ಪದವಿ ಲಭಿಸಿತು!

ತದ್ವಿರುದ್ಧವಾಗಿ ಅಹ್ಮದೀ ಮುಸ್ಲಿಮರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂದಿನ ಸಾಲಿನಲ್ಲಿದ್ದರು—ಅದು ಶಾಂತಿಪೂರ್ಣವಾದ ಒಂದು ಮಾರ್ಗದ ಮೂಲಕವಾಗಿತ್ತಷ್ಟೆ. ಹೌದು, ಇಂದು ಆಡಳಿತದ ಚುಕ್ಕಾಣಿ ಹಿಡಿಯುವ ಮುಲ್ಲಾಗಳು ಪಾಕಿಸ್ತಾನದ ರಾಷ್ಟ್ರಪಿತರನ್ನು 'ಖಾಯಿದೆ ಆಝಂ' ಎಂಬುದಕ್ಕೆ ಬದಲು 'ಕಾಫಿರೆ ಆಝಂ' (ಅತಿ ದೊಡ್ಡ ಕಾಫಿರ್) ಎಂದು ಕರೆಯುತ್ತಿದ್ದ ಕಾಲವಾಗಿತ್ತು ಅದು,

## ಧ್ವಂಸನ ಸಿದ್ಧಾಂತ

ಅಹ್ಮದೀಯರು ಕೆಲವು ಆಕ್ರಮಣಪರವಾದ ಕ್ರಮಗಳನ್ನು ಕೈಗೊಂಡಿದ್ದರೆಂದು ಇಲ್ಲಿ ಪ್ರಸ್ತಾಪಿಸಲಾಯಿತಷ್ಟೇ. ನಾನೊಂದು ಹೇಳಲೆ, ಅಹ್ಮದೀಯರು ಇಸ್ಲಾಮಿನ, ಹೌದು ಇಸ್ಲಾಂ ಧರ್ಮದ ಎಲ್ಲಾ ಮೂಲ ತತ್ವಗಳನ್ನೂ ನಂಬುವವರಾಗಿದ್ದಾರೆ. ಪವಿತ್ರ ಖುರ್ಆನಿನಲ್ಲಾಗಲಿ, ಪೈಗಂಬರರ ಚರ್ಯೆಗಳಲ್ಲಾಗಲಿ ಕಾಣದ ಯಾವ ತತ್ವವೂ ಅವರಿಗಿಲ್ಲ. ಇತರ ಕೆಲವರ ಅಭಿಪ್ರಾಯ ಪ್ರಕಾರ ಇಸ್ಲಾಂ ಮತವನ್ನು ತ್ಯಜಿಸುವವರಿಗೆ ಮರಣ ದಂಡನೆ ಇದೆ. ತನ್ನ ಮತ ವಿಶ್ವಾಸವನ್ನು ತೊರೆಯುವವನಿಗೆ ಶಿಕ್ಷೆಯೇ ಇಲ್ಲವೆಂದು ಅಹ್ಮದೀಯರು ಘೋಷಿಸುತ್ತಾರೆ, ಏಕೆಂದರೆ ಮತ ಸ್ವಾತಂತ್ರ್ಯ ತತ್ವಕ್ಕೆ ಈ ಶಿಕ್ಷೆ ಸರಿಹೊಂದುವುದಿಲ್ಲ.

## ಬಹಾಯಿಗಳು

ಬಹಾಯಿಗಳು ಇಸ್ಲಾಮಿನಿಂದ ಹೊರಗೆ ಹೋದವರಾಗಿರಬಹುದು. ಆದರೆ ಅಹ್ಮದೀಯರು ಇಸ್ಲಾಂ ಧರ್ಮದಿಂದ ಅಗಲಿ ಹೋದವರಲ್ಲ. ತದ್ವಿರುದ್ಧವಾಗಿ, ಅಹ್ಮದಿಯಾ ಜಮಾಅತ್ ಸತ್ಯವಾದ, ಶುದ್ಧವಾದ ಇಸ್ಲಾಮೇ ಆಗಿದೆ. ಅದು ಇಸ್ಲಾಮನ್ನು ಪುನಃಸ್ಥಾಪಿಸಲಿಕ್ಕೂ ಪುನರುತ್ಥಾನಗೊಳಿಸಲಿಕ್ಕೂ ಶಕ್ತಿಪಡಿಸಲಿಕ್ಕೂ ಇದೆ. ಈ ಧರ್ಮ ಸಂಘಟನೆ ಜನ್ಮತಾಳಿದ್ದು ಕ್ರಾಂತಿಯ ಮೂಲಕವಲ್ಲ; ಬದಲು, ಸಾವಧಾನ ಮತ್ತು ಸಮಾಧಾನಪರವಾದ ಪರಿವರ್ತನ ಪ್ರಕ್ರಿಯೆಗಳ ಮೂಲಕವಾಗಿದೆ. ಅದುವೇ ಧರ್ಮದ ತಿರುಳು,

## ಅಹ್ಮದೀಯರು ಅಲ್ಪಸಂಖ್ಯಾತ ಜನಾಂಗ

ಅಹ್ಮದೀಯರನ್ನು ಅಲ್ಪಸಂಖ್ಯಾತರನ್ನಾಗಿ ಘೋಷಿಸಲಾಗಿದೆ. ನನ್ನ ಅಭಿಪ್ರಾಯದ ಪ್ರಕಾರ ಸ್ವತಂತ್ರ ರಾಷ್ಟ್ರಕ್ಕೆ ಸಂಬಂಧಿಸಿದ ಆಧುನಿಕ ಕಲ್ಪನೆಯಲ್ಲಿ ಅಲ್ಪಸಂಖ್ಯಾತ ಎಂಬ ಮಾತಿಗೆ ಬೆಲೆಯಿಲ್ಲ. ಎಲ್ಲರನ್ನೂ ಸಮಾನ ಪೌರರೆಂದು ಗಣಿಸಬೇಕು. ಅವರೆಲ್ಲರಿಗೂ ಸಮಾನ ಹಕ್ಕುಗಳಿರಬೇಕು. ಬಹುಸಂಖ್ಯಾತ ಅಲ್ಪಸಂಖ್ಯಾತ ಎಂಬ ಪ್ರಶ್ನೆಯೇ ಇರಬಾರದು.

ಆರ್ಡಿನನ್ಸ್ ಅಲ್ಲಿ ಅಸಹಿಷ್ಣುತೆಯ ವಾತಾವರಣವನ್ನು ಸೃಷ್ಟಿಸಿ ಕೋಮು ಗಲಭೆಯ ಬೆಂಕಿಯನ್ನು ಹೊತ್ತಿಸಿದೆ. ಅಲ್ಲಿ ಅಹ್ಮದೀಯರ ನಂಬಿಕೆಗೆ ಅಥವಾ ಅಮುಸ್ಲಿಂ ಸಮಸ್ಯೆಗೆ ಭೂಗೋಳ ಶಾಸ್ತ್ರದ ಛಾಯೆಯನ್ನು ನೀಡಿದುದನ್ನು ಕಂಡು ನಾನು ಆಶ್ಚರ್ಯಗೊಂಡಿದ್ದೇನೆ. ಓರ್ವ ಅಹ್ಮದಿ ಪಾಕಿಸ್ತಾನದಲ್ಲಿ ಅಮುಸ್ಲಿಮನಾಗಿ ಪರಿಗಣಿಸಲ್ಪಡುವಾಗ ಆತನು ಇಂಡಿಯಾದ ಗಡಿ ದಾಟಿದರೆ ಮುಸ್ಲಿಮನಾಗುತ್ತಾನೆ. ಇಂಡಿಯಾವಾದರೆ ಪಾಕಿಸ್ತಾನಕ್ಕಿಂತ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುವ ದೇಶವಾಗಿದೆ. ಇತರ 45 ಇಸ್ಲಾಮೀ ರಾಷ್ಟ್ರಗಳಲ್ಲೂ ಈ ಪದ್ಧತಿ ಆವರ್ತಿಸಲ್ಪಡು

ತ್ತದೆ. ಸ್ಥಳ ಬದಲಾವಣೆ ಉಂಟಾಗುವಾಗಲೆಲ್ಲಾ ಅಹ್ಮದೀಯರು ಮುಸ್ಲಿಮರಾಗಿಯೂ ಅಮುಸ್ಲಿಮರಾಗಿಯೂ ಪರಿವರ್ತಿಸಲ್ಪಡುತ್ತಾರೆ! ಇದೇನು ತಮಾಷೆ! ಮೂಲ ಪ್ರಶ್ನೆಯೇನೆಂದರೆ: ಓರ್ವ ವ್ಯಕ್ತಿ ಮುಸ್ಲಿಮನೋ. ಕ್ರೈಸ್ತನೋ, ಯಹೂದ್ಯನೋ ಎಂದು ನಮಗೆ ತಿಳಿಯಬೇಕಾದ ಅವಶ್ಯ ಬಂದರೆ ಅದು ಹೇಗೆ ಸಾಧ್ಯ? ಬಹಳ ಸುಲಭ ಮಾರ್ಗವೇನೆಂದರೆ, ಆ ವ್ಯಕ್ತಿಯೊಡನೆಯೇ ಕೇಳಿ ತಿಳಿದುಕೊಳ್ಳುವುದು. ಆತನು ಇಂದು ತಾನು ಮುಸ್ಲಿಮನೆಂದೂ ನಾಳೆ ಕ್ರೈಸ್ತನೆಂದೂ ಹೇಳುವನಾದರೆ ಆತನಿಗೆ ಅದರ ಸ್ವಾತಂತ್ರ್ಯವಿದೆ. ಹಾಗಿರುವಾಗ, ಲೋಕದ ಯಾವ ಶಕ್ತಿಗೂ ಯಾವ ನ್ಯಾಯಾಧೀಶನಿಗೂ ಯಾವ ನ್ಯಾಯಾಲಯಕ್ಕೂ ಆತನ ನಿಜವಾದ ಮತ ವಿಶ್ವಾಸ ಸಂಬಂಧದ ಕುರಿತು ಅಥವಾ ಸಂಬಂಧವಿಲ್ಲದಿರುವಿಕೆಯ ಬಗ್ಗೆ ತೀರ್ಮಾನ ಮಾಡಲು ಅಧಿಕಾರವಾಗಲಿ ಅವಕಾಶವಾಗಲಿ ಇಲ್ಲದಾಗುತ್ತದೆ. ಮತ್ತೊಬ್ಬನ ಮೇಲೆ ಒಂದು ಧರ್ಮವನ್ನು ಹೇರುವ ಪ್ರಯತ್ನ ಸ್ವಯಂ ಪರಿಶುದ್ಧನಾಗಿ ವೇಷಕಟ್ಟುವುದಾಗಿದೆ. ಇಂತಹ ಕ್ರಮವನ್ನು ಎಲ್ಲೆಡೆಗಳಲ್ಲೂ ಕೂಡಲೇ ನಿಲ್ಲಿಸಬೇಕಾಗಿದೆ. ಪ್ರತಿಯೊಬ್ಬನೂ ತನ್ನದೇ ಆತ್ಮ ಪರಿಶೋಧನ ನಡೆಸಬೇಕಾಗಿದೆ.

ಮಿ. ಚೇರ್‌ಮನ್, ಪಾಕಿಸ್ತಾನದ ಇಂದಿನ ಗಲಭೆಗಳಿಗೆಲ್ಲಾ ಕಾರಣ ಆ ದೇಶವು ಇಂದು ಮುಲ್ಲಾಗಳ ಹಿಡಿತದಲ್ಲಿರುವುದೇ ಆಗಿದೆ. ಈಗಿನ ಆಡಳಿತಾಧಿಕಾರಿ ಸಹ ಒಬ್ಬ ಮುಲ್ಲಾರ ಮಗ. ಮುಲ್ಲಾಯಿಸಂ ಮತ್ತು ಅಸಹಿಷ್ಣುತೆ ಸಮಾನಾರ್ಥ ಪದಗಳಾಗಿವೆ. ಪಾಕಿಸ್ತಾನದ ಈಗಿನ ನಮ್ಮ ಆದರಣೀಯ ಪ್ರತಿನಿಧಿಯು ಪೂರ್ವಾಧಿಕಾರಿಯು ಜಸ್ಟಿಸ್ ಮುಹಮ್ಮದ್ ಮುನೀರ್ ಅಹ್ಮದ್ ಆಗಿದ್ದರು. ಮಾನ್ಯ ಪಾಕಿಸ್ತಾನ್ ಪ್ರತಿನಿಧಿ ಕುಳಿತ ಅದೇ ಆಸನದಲ್ಲಿ ಅವರು ಸಹ ಕುಳಿತಿದ್ದರು. ಜಸ್ಟಿಸ್ ಮುನೀರ್ ವಿಚಾರಣಾ ವರದಿಯಲ್ಲಿ ಒಂದೆಡೆ ಮುಲ್ಲಾಗಳ ಕುರಿತು ಹೀಗೆ ಬರೆದಿದ್ದರು:

"ಮುಲ್ಲಾಗಳ ಕೈಗಳಲ್ಲಿ ಇಸ್ಲಾಮನ್ನು ಒಂದು ಆಯುಧವನ್ನಾಗಿ ಮಾಡಲಾಗಿದೆ. ರಾಜಕೀಯ ಮಾಯಾ ಜಾಲಗಳನ್ನು ನಡೆಸಲು ಈ ಆಯುಧವನ್ನು ಅವರು ತಮ್ಮ ಅಭಿರುಚಿಗನುಗುಣವಾಗಿ ಪ್ರಯೋಗಿಸುತ್ತಾರೆ"

(ಪುಟ 254)

ಮಿ. ಚೇರ್‌ಮನ್, ಜನಪ್ರತಿನಿಧಿಗಳ ಬದಲು ಒಬ್ಬ ಮಿಲಿಟರಿ ಆಡಳಿತಾಧಿಕಾರಿಯ ಲೇಖನಿಯಿಂದ ನಿಯಮಗಳು ಜಾರಿಗೊಳ್ಳುವ ಒಂದು ದೇಶದ ವಿಚಾರದಲ್ಲಿ ನಾವು ಚರ್ಚಿಸುತ್ತಿದ್ದೇವೆ. ಜನಬೆಂಬಲವನ್ನು ಗಳಿಸುವರೆ ಅಹ್ಮದೀ ಮುಸ್ಲಿಮರಿಗೆ ವಿರುದ್ಧವಾಗಿ ಅವರು ಒಂದು ವಿದ್ವೇಷ ಪ್ರಚಾರವನ್ನು ಆರಂಭಿಸಿದರು. ಅದುವೇ ಆರ್ಡಿನನ್ಸ್ ರೂಪದಲ್ಲಿ ಕೊನೆಗೆ ಪ್ರಕಟಗೊಂಡಿತು. ಆದರೆ ಅವರ ಇಂಗಿತವನ್ನು ಜನರು ಮನಗಂಡಿದ್ದಾರೆ. ತಥಾಕಥಿತ ಚುನಾವಣೆ ನಡೆಯಿಸುವುದಕ್ಕೆ ಮುಂಚೆ, ಮೊದಲೇ ತೀರ್ಮಾನಿಸಿಟ್ಟ ವಿಚಾರದಲ್ಲಿ ಒಂದು ಜನಮತ ಗಣನೆಯನ್ನು ಇದೇ ಡಿಸೆಂಬರ್ 19ರಂದು ನಡೆಸಲಾಗುವುದೆಂದು ಘೋಷಿಸಲಾಗಿದೆ. ಜನಾಭಿಪ್ರಾಯದ ವಿಧಿ "ಬೇಡ" ಎಂದು ಆದರೂ ಕೂಡ ಇಂದಿನ ಆಡಳಿತೆ ಹಾಗೆಯೇ ಮುಂದುವರಿಯುವುದು! ಸಂಪೂರ್ಣ ಅಸಾಧಾರಣವಾದ ಈ ಜನಮತಗಣನೆಗೆ ವಿರುದ್ಧವಾಗಿ ಉಸಿರೆತ್ತಿದರೆ ಮೂರು ವರ್ಷಗಳ ಸಜೆ ವಿಧಿಸಲಾಗುವುದೆಂದು ಸಾರುವ ಮತ್ತೊಂದು ಅಧ್ಯಾದೇಶವನ್ನು ಹೊರಡಿಸಲಾಗಿದೆಯೆಂದು ಇಂದು ಬೆಳಗ್ಗೆ ಒಂದು ವಾರ್ತೆ ಬಂದಿದೆ. ಲೋಕದ ಜನರನ್ನೆಲ್ಲಾ ಮೂರ್ಖರನ್ನಾಗಿ ಮಾಡುವ ಒಂದು ಪ್ರಯತ್ನವಾಗಿದೆ ಈ ರೆಫರಂಡಂ. ಪಾಕಿಸ್ತಾನದ ಜನತೆಯ ಬೆನ್ನ ಮೇಲೆ ಏರಿ ಸವಾರಿ ಮಾಡಲಾಗುತ್ತದೆ.

### ಶರೀಅತ್ ನ್ಯಾಯಾಲಯ

ಸಾಮಾನ್ಯ ಸಿವಿಲ್ ನ್ಯಾಯಾಲಯದೊಂದಿಗೆ ಪಾಕಿಸ್ತಾನದಲ್ಲಿ ಮಿಲಿಟರಿ ನ್ಯಾಯಾಲಯ ಸಹ ಅಸ್ತಿತ್ವದಲ್ಲಿದೆ. ಇದು ಕೂಡ ಸಾಕಾಗದೆ, ಈಗ ಲಷ್ಕರಿ ಆಡಳಿತೆಯ ಬೆಂಬಲಕ್ಕಾಗಿ ಬೇರೆ ಶರೀಅತ್ ನ್ಯಾಯಾಲಯ ಸಹ ಸ್ಥಾಪಿಸಲ್ಪಟ್ಟಿದೆ. ಅಹ್ಮದಿಯಾ ವಿರುದ್ಧ ಅಧ್ಯಾದೇಶಕ್ಕೆ ನಿಯಮ ಸಿಂಧುತ್ವ ನೀಡಲಿಕ್ಕೋಸ್ಕರ ಶರೀಅತ್ ಕೋರ್ಟೆಂದು ಕರೆಯಲ್ಪಡುವ ನ್ಯಾಯಾಲಯವು ಆ ಅಧ್ಯಾದೇಶ ನಿಯಮಬದ್ಧವೆಂದು ತೀರ್ಪು ನೀಡಿದೆ. ಆದರೆ ಪ್ರಾಸಿಕ್ಯೂಟರ್, ಸಾಕ್ಷಿ ಮತ್ತು ಜಡ್ಜ್ ಎಲ್ಲವೂ ಆ ನ್ಯಾಯಾಲಯವೇ ಆಗಿದೆ. ಆ ಶರೀಅತ್ ಕೋರ್ಟಿನ ಕೆಲಸ ಮಿಲಿಟರಿ ಆಡಳಿತೆಯನ್ನು ಬೆಂಬಲಿಸುವುದಾಗಿದೆ. ಆದ್ದರಿಂದ ಯಾತಕ್ಕಾಗಿ ಅದು ಸ್ಥಾಪಿಸಲ್ಪಟ್ಟಿದೆಯೋ ಆ ಕೆಲಸವನ್ನು ಅದು ನಿರ್ವಹಿಸುತ್ತಿದೆ. ಅಹ್ಮದೀ ಮುಸ್ಲಿಮರಿಗೆ ವಿರುದ್ಧವಾದ ಒಂದು ಮೊಕದ್ದಮೆಯನ್ನು ವಿಚಾರಣೆ ಮಾಡಿ ತೀರ್ಪು ನೀಡುವ ಮೊದಲೇ ನ್ಯಾಯಾಧಿಪತಿಗಳು ಅಹ್ಮದೀ

ಯರ ವಿರುದ್ಧ ಪಕ್ಷಪಾತವನ್ನು ಬಚ್ಚಿಡದೆ ಬಯಲುಗೊಳಿಸುತ್ತಾರೆ!

ಮಿ. ಚೇರ್‌ಮನ್, ಪಾಕಿಸ್ತಾನದ ಮಾನ್ಯ ಪ್ರತಿನಿಧಿಯ ಮುಂದೆ ನಿರ್ವ್ಯಾಜವೂ ಸತ್ಯಸಂಧವೂ ಆದ ಒಂದು ತುರ್ತಿನ ಅರಿಕೆಯನ್ನು ಮಾಡಿಕೊಂಡು ನಾನು ನನ್ನ ಮಾತನ್ನು ಕೊನೆಗೊಳಿಸುತ್ತೇನೆ. ಅವರು ಅಲಂಕರಿಸುವ ಉನ್ನತ ಸ್ಥಾನವನ್ನು ಸದುಪಯೋಗಪಡಿಸಿ ಈಗಿನ ಪಾಕ್ ಸರಕಾರದ ಮೇಲೆ ಪ್ರಭಾವವನ್ನು ಬೀರಿ, ಪಾಕಿಸ್ತಾನದಲ್ಲಿ ಇಂದು ತಾಂಡವವಾಡುತ್ತಿರುವ ಬರ್ಬರ ಕೃತ್ಯಗಳನ್ನು ಕೊನೆಗೊಳಿಸಲು ಸಾಧ್ಯವಾದುದನ್ನೆಲ್ಲಾ ಅವರು ಮಾಡಿದರೆ ಆ ಸುಂದರವಾದ ರಾಷ್ಟ್ರವನ್ನು ಲೋಕದ ಕಣ್ಣಿಗೆ ಪರಿಹಾಸ್ಯಕ್ಕೆ ಪಾತ್ರವಾಗುವುದರಿಂದ ತಪ್ಪಿಸಲು ಸಾಧ್ಯವಿದೆ. ಕಡಿವಾಣ ಹಾಕಲ್ಪಟ್ಟ ಪತ್ರಿಕೆಗಳು ಜನಸಾಮಾನ್ಯರಿಗೆ ನಿಜಾಂಶ ತಿಳಿಯದಂತೆ ವಸ್ತುಸ್ಥಿತಿಯನ್ನು ಬಚ್ಚಿಟ್ಟು ತಪ್ಪುಕಲ್ಪನೆ ಉಂಟುಮಾಡುವ ಕಾರಣ ಸ್ಥಿತಿಗತಿಗಳು ಇನ್ನೂ ಹದಗೆಡುತ್ತಿವೆ. ಪಾಕಿಸ್ತಾನದ ಪ್ರತಿನಿಧಿಯ ಹಾಗೆ ಪ್ರಸಿದ್ಧರೂ ವಿಶಾಲ ಹೃದಯಿಗಳೂ ಆದ ಬಹುಮಾನ್ಯ ವ್ಯಕ್ತಿಗಳು ಸಹ ನಿಜಸ್ಥಿತಿಯನ್ನು ತಿಳಿಯಲಿಕ್ಕೆ ಇತರ ಮಾಧ್ಯಮಗಳನ್ನು ಆಶ್ರಯಿಸಬೇಕಾಗುತ್ತದೆಂಬುದು ಸತ್ಯ. ಲಾಹೋರ್ ಹೈಕೋರ್ಟಿನ ಚೀಫ್ ಜಸ್ಟಿಸ್ ಪದವಿಯನ್ನು ಅಲಂಕರಿಸುವ ಗೌರವಾನ್ವಿತ ಪಾಕಿಸ್ತಾನ್ ಪ್ರತಿನಿಧಿ ಅಹ್ಮದಿಯಾ ಸಂಘಟನೆಯ ವಿರುದ್ಧ ನಡೆಯುತ್ತಿರುವ ಅನೀತಿಗೆದುರಾಗಿ ಶಬ್ದವೆತ್ತುವುದು ಅವರ ಪ್ರಸಿದ್ಧಿಗೂ ಸತ್ಯಸಂಧತೆಗೂ ಹಾಗೆಯೇ ಅವರ ಮಹಾತ್ಮರಾದ ಪೂರ್ವಿಕರ ಮಹತ್ವಕ್ಕೂ ಹೆಚ್ಚಿಕೆ ನೀಡುವ ಕ್ರಮವಾದೀತು. ಅಲ್ಲವಾದರೆ, ಆ ಬಗೆಯ ವರ್ಗೀಯತೆ ಕಾರಣ ಉದ್ಭವಿಸುವ ಅಗ್ನಿಜ್ವಾಲೆಯಿಂದ ಆ ರಾಷ್ಟ್ರ ಅವಮಾಕಲ್ಪಡುವುದು. ಆ ಬಳಿಕ ಕೈಗೊಳ್ಳುವ ಯಾವ ಪರಿಹಾರ ಕ್ರಮವೂ ವ್ಯರ್ಥವಾಗುವುದೆಂದು ನಾನು ಎಚ್ಚರಿಸುತ್ತೇನೆ. ನಿಯಮ ಬದ್ಧ ಸಮಾಧಾನ ಸ್ಥಿತಿ ಕೂಡಲೇ ಪುನಸ್ಥಾಪಿಸಲ್ಪಡಬೇಕು. ಜನರ ನೆಮ್ಮದಿಗೂ ಭದ್ರತೆಗೂ ಧಾರ್ಮಿಕ ಅಭಿವೃದ್ಧಿಗೂ ಸ್ವಾಸ್ಥ್ಯಕ್ಕೂ ಎಂದಿಗೂ ಅಹ್ಮದೀ ಮುಸ್ಲಿಮರು ಬೆದರಿಕೆಯಾಗಲಾರರು.

ಕೊಳ್ಳಿ ಹೊಡೆಯಲಿಕ್ಕೂ ಬೆಂಕಿ ಇಡಲಿಕ್ಕೂ ಕೊಲೆಗೈಯ್ಯಲಿಕ್ಕೂ ಪ್ರೇರಣೆ ನೀಡುವ ಮುಲ್ಲಾಗಳೇ ಪಾಕಿಸ್ತಾನಕ್ಕೆ ಅತ್ಯಂತ ದೊಡ್ಡ ಬೆದರಿಕೆ. ಅಸಹಿಷ್ಣುತೆಯನ್ನು ಹೋಗಲಾಡಿಸ ಬೇಕಾದರೆ ಮುಲ್ಲಾಯಿಸಮನ್ನು ನಿರ್ಮೂಲನ ಮಾಡಿ ಸಂಕುಚಿತ ಮನೋಭಾವಕ್ಕೆ ಕೊನೆಗಾಣಿಸಲೇಬೇಕಾಗಿದೆ. ನಿರಪರಾಧಿಗಳು ಇಂದು ಅನುಭವಿಸಬೇಕಾಗಿ ಬಂದಿರುವ ದೌರ್ಜನ್ಯಗಳಿಗೆ ಹೇತುವಾದ ಅಸಹಿಷ್ಣುತೆಯನ್ನು ಸೃಷ್ಟಿಸಿದವರು ಮುಲ್ಲಾಗಳೇ ಆಗಿದ್ದಾರೆ.

ಆದರಣೀಯರೂ ಬಹುಮಾನ್ಯರೂ ಆದ ಪಾಕಿಸ್ತಾನ್ ಪ್ರತಿನಿಧಿ ನನ್ನ ಮಾತುಗಳನ್ನು ಗಮನಿಸುವರೆಂದು ನಿರೀಕ್ಷಿಸುತ್ತಾ ನಾನು ವಿರಮಿಸುತ್ತೇನೆ.

ಮಿ. ಚೇರ್‌ಮನ್ ತಮಗೆ ಕೃತಜ್ಞತೆಗಳು


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

# ಮೈತ್ರಿ ಸಂದೇಶ

"......ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ

"...... ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ

ಪುಟಗಳು: **48** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: Book Secretary, Ahmadiyya Muslim Mission,
10-23-1008, Ansari Road, Bunder, Mangalore-575 001.

# ಝಿಯಾಗೆ ಒಂದು ಮುನ್ನೆಚ್ಚರಿಕೆ

[ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬ್ ಅವರು 1984 ಸಪ್ಟೆಂಬರ್ 21ರಂದು ಲಂಡನ್ ಮಸೀದಿಯಲ್ಲಿ ನೀಡಿದ ಜುಮಾ ಖುತ್ಬದ ಒಂದು ಭಾಗ]

ಪಾಕಿಸ್ತಾನದ ಸಿಂಧ್‌ನಲ್ಲಿ, ಲೌಕಿಕ ಸಂಬಂಧಗಳನ್ನೆಲ್ಲಾ ತ್ಯಜಿಸಿ ಧ್ಯಾನನಿರತನಾಗಿರುವ ವಯೋವೃದ್ಧನಾದ ಓರ್ವ ಫಕೀರ್ (ಸಂತ) ಇತ್ತೀಚೆಗೆ ಒಂದು ಕರಪತ್ರವನ್ನು ಪ್ರಕಟಿಸಿದರು. ಪಾಕಿಸ್ತಾನದ ಅಧ್ಯಕ್ಷರನ್ನೂ ಇತರ ಉನ್ನತಾಧಿಕಾರಿಗಳನ್ನು ಸಂಬೋಧಿಸಿ ಬರೆದ ಆ ಕರಪತ್ರದಲ್ಲಿ ಬಹಳ ಸ್ಪಷ್ಟವಾದ ಮುನ್ನೆಚ್ಚರಿಕೆ ಸಹಿತ, ಅಹ್ಮದಿಯಾ ಜಮಾಅತಿಗೆ ವಿರುದ್ಧವಾಗಿ ಇತ್ತೀಚೆಗೆ ಅವರು ಕೈಗೊಂಡ ತೀರ್ಮಾನಕ್ಕೆ ದೈವಶಿಕ್ಷೆಯು ಕುರಿತು ಸೂಚನೆ ನೀಡಿದ್ದಾರೆ. ತನ್ನ ಸ್ವಂತ ಖರ್ಚಿನಲ್ಲಿ ಈ ಕರಪತ್ರದ ಧಾರಾಳ ಪ್ರತಿಗಳನ್ನು ಮುದ್ರಿಸಿ ಪಾಕಿಸ್ತಾನದ ಎಲ್ಲೆಡೆಯೂ ವಿತರಣೆ ಮಾಡಿದ್ದಾರೆ.

ಈ ವಿಷಯು ನನ್ನ ಗಮನಕ್ಕೆ ಬಂದಾಗ ನಾನು ಕುನ್ರೀ ಜಮಾಅತಿನ ಅಮೀರರಿಗೆ ಬರೆದು ಈ ವರ್ತಮಾನದ ವಾಸ್ತವಾಂಶವನ್ನು ಅರಿಯಲು ಆದೇಶಿಸಿದೆನು. ಆ ಮಾನ್ಯ ವ್ಯಕ್ತಿ ಎಲ್ಲಿ ವಾಸಮಾಡುತ್ತಿದ್ದಾರೆಂದು ಗೊತ್ತು ಮಾಡಲಿಕ್ಕೂ ಅವರನ್ನು ಭೇಟಿಯಾಗಿ ಕರಪತ್ರ ಅವರೇ ಹೊರಡಿಸಿದ್ದೋ, ಹೌದಾದರೆ ಅದರ ಕಾರಣವೇನೆಂದೂ ತಿಳಿಯಲಿಕ್ಕೋಸ್ಕರ ಒಂದು ಪ್ರತಿನಿಧಿ ಸಂಘವನ್ನು ಕಳುಹಿಸಲು ತಿಳಿಸಿದೆನು. ನನಗೆ ತಿಳಿದ ಮಟ್ಟಿಗೆ ಅಂತಹ ಓರ್ವ ವ್ಯಕ್ತಿಯ ಕುರಿತು ಜಮಾಅತಿಗೆ ಇದರ ಮುಂಚೆ ಯಾವ ವಿವರವಾಗಲಿ ಪರಿಚಯವಾಗಲಿ ಇರಲಿಲ್ಲ. ಹಾಗೆ ಒಂದು ಪ್ರತಿನಿಧಿ ಸಂಘ ಹೋಗಿ ಆ ಫಕೀರನ್ನು ಭೇಟಿಯಾಗಿ ಸುದೀರ್ಘವೂ ಕುತೂಹಲ ಜನಕವೂ ಆದ ಒಂದು ವರದಿಯನ್ನು ತಯಾರಿಸಿ ನನಗೆ ಕಳುಹಿಸಿಕೊಟ್ಟಿದೆ. ಆ ವರದಿಯ ಕೆಲವು ಭಾಗಗಳನ್ನು ನಾನು ನಿಮಗೆ ಓದಿ ಹೇಳುತ್ತೇನೆ. ಇಬ್ಬರು ಅಹ್ಮದೀಯರ ಒಂದು ನಿಯೋಗ ಅವರ ಸಂದರ್ಶನಕ್ಕೆ ಹೊರಟಿತು. ಕೇಳಿ ಕೇಳಿ ಅವರು ಆ ಫಕೀರ್ ಇರುವ ಗ್ರಾಮವನ್ನು ತಲಪಿದರು. ವರದಿಯಲ್ಲಿ ನಿಯೋಗದ ಅಮೀರ್ ಹೀಗೆ ಹೇಳುತ್ತಾರೆ:

"ಆ ಮಾನ್ಯ ಫಕೀರ್ ನಮ್ಮನ್ನು ಒಂದು ಕೋಣೆಯೊಳಗೆ ಕರಕೊಂಡು ಹೋದರು. ನಮ್ಮ ಸಂದರ್ಶನದ ಉದ್ದೇಶವೇನೆಂದು ಅವರು ವಿಚಾರಿಸಿದಾಗ, ಅವರ ಹೆಸರಿನಲ್ಲಿ ಪ್ರಕಟಿಸಲ್ಪಟ್ಟ ಕರಪತ್ರವನ್ನು ತೋರಿಸಿ ಅದನ್ನು ಅವರೇ ಹೊರಡಿಸಿದ್ದೋ ಎಂದು ಕೇಳಿದೆ. ಅವರು ಹೌದೆಂದು ಹೇಳಿದಾಗ ಅದಕ್ಕೆ ಕಾರಣವೇನೆಂದು ವಿವರಿಸಬೇಕೆಂದು ಕೋರಿದೆ. ಅಹ್ಮದಿಯಾ ಜಮಾಅತಿಗೆ ವಿರುದ್ಧವಾಗಿ ಹೊಸ ಒಂದು ಆರ್ಡಿನನ್ಸನ್ನು ಅಧ್ಯಕ್ಷ ಝಿಯಾ ಉಲ್ ಹಕ್ ಹೊರಡಿಸಿದ ಅಂದೇ ದಿನ ತಾನು ಅರಿತಾಗ, ಇಸ್ಲಾಮಿನ ಸೇವೆಗೈಯ್ಯುವ ಒಂದು ಜಮಾಅತಿನ ವಿರುದ್ಧ ಈ ರೀತಿಯ ಒಂದು ಕ್ರಮ ಕೈಗೊಂಡದ್ದು ಅತ್ಯಂತ ಅಕ್ರಮವಾದುದರಿಂದ ತನಗೆ ಅತಿಯಾದ ದುಃಖವೂ ಮನೋವೇದನೆಯೂ ಉಂಟಾಯಿತೆಂದು ಅವರು ಹೇಳಿದರು. ಅವರು ಮುಂದುವರಿಸಿದರು: ನನಗೆ ತುಂಬಾ ಅಸಮಾಧಾನವಾಯಿತು. ನಾನು ಕರಾಚಿಗೆ ಹೋಗಿ ಅಲ್ಲಿ ಪ್ರಾರ್ಥನೆಯಲ್ಲಿ ಮಗ್ನನಾದೆನು—ದೇವರೇ, ಈ ಜಮಾಅತ್ ನಿನ್ನ ಧರ್ಮದ ಸೇವಕರು. ಇವರಿಗೆ ವಿರುದ್ಧವಾಗಿ ಇಂತಹ ಒಂದು ಆಜ್ಞೆಯನ್ನು ಹೊರಡಿಸಿದ ವ್ಯಕ್ತಿ ನನ್ನ ದೃಷ್ಟಿಯಲ್ಲಿ ಮಹಾ ಅಕ್ರಮಿ.

"ಆಗ ನನಗೊಂದು ಸ್ವರ ಕೇಳಿಸಿತು– 'ಖುರ್‌ಆನ್ ತೆರೆದು ನೋಡು' ಎಂದು. ನಾನು ಹೇಳಿದೆ-ಖುರ್‌ಆನನ್ನು ನಾನು ದಿನಾಲೂ ಓದುತ್ತಿದ್ದೇನೆ. ಪುನಃ ನನಗೆ ಶಬ್ಧ ಕೇಳಿಸಿತು. 'ಖುರ್‌ಆನ್ ತೆರೆದು ನೋಡು; ನಿನ್ನ ದುಃಖಕ್ಕೆ ಪರಿಹಾರ ಕಂಡುಬರುವುದು'. ಮೂರನೆಯ ಸಲ ಸಹ ಆ ಸ್ವರ ಕೇಳಿಸಿತು. 1984 ಮೇ 13ರ ಘಟನೆಯಾಗಿದೆ ಅದು. ಮೂರನೇ ಬಾರಿ ಆ ಶಬ್ಧವನ್ನು ಕೇಳಿದಾಗ ನಾನು ಎದ್ದು ಅಂಗಶುದ್ಧಿ (ವಝೂ) ಮಾಡಿ ಪವಿತ್ರ ಖುರ್‌ಆನ್ ತೆರೆದಾಗ ಸೂರ 'ಅನ್‌ಅಮ್'ನ 53ನೇ ವಚನ ನನ್ನ ದೃಷ್ಟಿಗೆ ಬಿತ್ತು. ರಾತ್ರಿ ಹಗಲು

ತಮ್ಮ ಒಡೆಯನ ಸಂತೃಪ್ತಿಯನ್ನು ಆಶಿಸಿ ಅವನನ್ನು ಕರೆದು ಪ್ರಾರ್ಥಿಸುವವರನ್ನು ಅಟ್ಟುವುದರ ಬಗ್ಗೆ ಅದರಲ್ಲಿ ಹೇಳಲಾಗಿದೆ. (ಪ್ರಸ್ತುತ ಖುರ್‌ಆನ್ ವಚನಗಳನ್ನು ಕೆಳಗೆ ಕೊಡಲಾಗಿದೆ):

> “ತಮ್ಮ ನಾಥನ ಸಂಪ್ರೀತಿಯನ್ನು ಬಯಸಿ ಮುಂಜಾನೆಯೂ ಸಂಜೆಯೂ ಅವನೊಡನೆ ಪ್ರಾರ್ಥಿಸುವವರನ್ನು ನೀನು ಅಟ್ಟಬೇಡ. ಅವರ ವಿಚಾರದಲ್ಲಿ ಯಾವುದೇ ಲೆಕ್ಕ ಹೇಳಲು ನೀನು ಬಾಧ್ಯನಲ್ಲ; ನಿನ್ನ ವಿಚಾರದಲ್ಲಿ ಯಾವುದೇ ಲೆಕ್ಕ ಹೇಳಲು ಅವರು ಸಹ ಬಾಧ್ಯರಲ್ಲ. ನೀನು ಹಾಗೆ ಅಟ್ಟಿದರೆ ಅಕ್ರಮಿಗಳಲ್ಲಿ ಸೇರಿ ಹೋಗುವೆ. ‘ಇವರಿಗೋ ನಮ್ಮ ಪೈಕಿ ಅಲ್ಲಾಹನು ಅನುಗ್ರಹಗಳನ್ನು ನೀಡಿದ್ದು?’ ಎಂದು ಅವರು ಹೇಳುವಂತೆ, ಅವರಲ್ಲಿ ಕೆಲವರನ್ನು ಮತ್ತಿತರರಿಂದ ನಾವು ಪರೀಕ್ಷಿಸುತ್ತೇವೆ. ಕೃತಜ್ಞತೆಯುಳ್ಳವರ್ಯಾರೆಂದು ಅಲ್ಲಾಹನು ಚೆನ್ನಾಗಿ ತಿಳಿಯುವವನಲ್ಲವೇ? ನಮ್ಮ ದೃಷ್ಟಾಂತಗಳಲ್ಲಿ ವಿಶ್ವಾಸವಿಡುವವರು ನಿನ್ನ ಸಮೀಪ ಬರುವಾಗ, ನಿಮಗೆ ಶಾಂತಿಯುಂಟಾಗಲಿ ಎಂದು ಹೇಳು. ನಿಮ್ಮ ಪ್ರಭು ನಿಮಗೆ ಅನುಗ್ರಹ ನೀಡಲು ನಿಶ್ಚಯಿಸಿರುವನು. ನಿಮ್ಮಲ್ಲಿ ಯಾರು ಅಜ್ಞಾನ ನಿಮಿತ್ತ ಕೆಟ್ಟರೀತಿಯಲ್ಲಿ ವರ್ತಿಸಿ ನಂತರ ಪಶ್ಚಾತ್ತಾಪಪಟ್ಟು ಸುಧಾರಿಸಿಕೊಳ್ಳುವರೋ ಅವರಿಗೆ ಖಂಡಿತವಾಗಿಯೂ ಅಲ್ಲಾಹನು ಕ್ಷಮಿಸಿಕೊಡುವವನೂ ಕರುಣಾನಿಧಿಯೂ ಆಗಿದ್ದಾನೆ. ಈ ರೀತಿಯಲ್ಲಿ ನಾವು ದೃಷ್ಟಾಂತಗಳನ್ನು ವಿವರಿಸುತ್ತೇವೆ-ಅಪರಾಧಿಗಳ ಮಾರ್ಗದ ಭಿನ್ನತೆಯನ್ನು ಸ್ಪಷ್ಟ ಗೊಳಿಸಲಿಕ್ಕಾಗಿ.” (6:53-56)

“ಆಗ ನನಗೆ ಮನದಟ್ಟಾಯಿತು, ಅಲ್ಲಾಹನ ದೃಷ್ಟಿಯಲ್ಲಿ ಈ ಜನರು ಅಕ್ರಮಿಗಳೇ ಆಗಿದ್ದಾರೆ. ಅವನ ಶಿಕ್ಷೆಯಿಂದ ಇವರಿಗೆ ಪಾರಾಗಲು ಸಾಧ್ಯವಿಲ್ಲ. ಆದ್ದರಿಂದ, ಈ ದೈವಿಕ ಸೂಚನೆಯನ್ನು ಪಾಕಿಸ್ತಾನದ ಅಧ್ಯಕ್ಷರಿಗೂ ಗವರ್ನರುಗಳಿಗೂ ಮಿಲಿಟರಿ ಅಧಿಕಾರಿಗಳಿಗೂ ಶರೀಅತ್ ಕೋರ್ಟಿನ ನ್ಯಾಯಾಧಿಪತಿಗಳಿಗೂ ತಲಪಿಸಬೇಕೆಂದು ನನಗೆ ತೋಚಿತು. ಇದು ನನ್ನ ಹೊಣೆಯೆಂದು ನಾನು ತಿಳಿದು ಕೊಂಡೆನು. ಹಾಗೆ ನಾನು ಈ ಕರಪತ್ರವನ್ನು ಧಾರಾಳವಾಗಿ ಮುದ್ರಿಸಿ ಪಾಕಿಸ್ತಾನದ ಅಧ್ಯಕ್ಷ ಝಿಯಾಉಲ್ ಹಕ್‌ರಿಗೂ ಎಲ್ಲಾ ಗವರ್ನರುಗಳಿಗೂ ನೆಲ-ಜಲ-ವ್ಯೋಮ ಸೇನಾ ನಾಯಕರಿಗೂ ಮಜ್‌ಲಿಸ್ ಶೂರಾ ಸದಸ್ಯರುಗಳಿಗೂ ಶರೀಅತ್ ನ್ಯಾಯಾಲಯದ ನ್ಯಾಯಾಧೀಶರುಗಳಿಗೂ ರಿಜಿಸ್ಟರ್ ಮಾಡಿ ಕಳುಹಿಸಿದೆನು. ಉಳಿದ ಪ್ರತಿಗಳನ್ನು ಹೀಗೆ ವಿತರಣೆ ಮಾಡಿದೆ.”

ಪ್ರತಿನಿಧಿ ಸಂಘದ ನಾಯಕ ಬರೆಯುತ್ತಾರೆ: “ಈ ಆದರಣೀಯ ವ್ಯಕ್ತಿಗೆ 90 ವರ್ಷ ಪ್ರಾಯವಿದೆ. ಆದರೆ ಅವರ ಆರೋಗ್ಯ ಚೆನ್ನಾಗಿದೆ. ಅವರು ಬೇರೆಯೂ ಕೆಲವು ಕುತೂಹಲಕಾರಿ ವಿಚಾರಗಳನ್ನು ತಿಳಿಸಿದರು. ಅವರು ಹೀಗೆಂದರು: “ನಾನೀಗ ಖುರ್‌ಆನಿನ ವ್ಯಾಖ್ಯಾನ ಬರೆಯುತ್ತಿದ್ದೇನೆ. ಅಧ್ಯಾಯಗಳಿಗೆ ವಿಷಯ ನೋಡಿ ಶೀರ್ಷಿಕೆಗಳನ್ನು ನಾನೇ ಕೊಟ್ಟಿದ್ದೇನೆ. ಎಂದರೆ ವ್ಯಾಖ್ಯಾನ ನಾಮಗಳು. ಉದಾಹರಣೆಗೆ ‘ಇಸ್ಮುಹು ಅಹ್ಮದ್’ ಎಂಬುದರ ವ್ಯಾಖ್ಯಾನ ಬರೆಯುವಾಗ ಅದಕ್ಕೆ ‘ಸೂರಃ ಅಹ್ಮದಿಯ್ಯಾ’ ಎಂದು ಹೆಸರಿಟ್ಟಿದ್ದೇನೆ. ನಾನು ಈ ದಿನ ಅದರ ವ್ಯಾಖ್ಯಾನ ಬರೆಯಲು ತೊಡಗುವುದರಲ್ಲಿದ್ದೆ. ಅಷ್ಟರಲ್ಲಿ ನೀವು ಬಂದಿರಿ. ನೀವು ಆಗಮಿಸಿದ ವಿವರ ತಿಳಿದಾಗ ನನಗೆ ಎನಿಸಿತು-ನಾನು ಸೂರಃ ಅಹ್ಮದಿಯ್ಯಾದ ವ್ಯಾಖ್ಯಾನ ಬರೆಯಲು ಪ್ರಾರಂಭಿಸಿದ್ದೇನಷ್ಟೆ; ಸಂದರ್ಶನಕ್ಕೆ ಬಂದವರು ಒಂದು ವೇಳೆ ಅಹ್ಮದಿ ಆಗಿರಬಹುದು. ನನ್ನ ಊಹೆ ಸರಿಯಾಯಿತು.!”

“ಯನ್ಸುರುಕ ರಿಜಾಲುನ್ ನೂಹೀ ಇಲೈಹಿಂ ಮಿನಸ್ಸಮಾಇ” ಎಂದರೆ “ನಾವು ಆಕಾಶದಿಂದ ದಿವ್ಯ ಅರಿವು ನೀಡುವ ವ್ಯಕ್ತಿಗಳು ನಿನ್ನ ಸಹಾಯಕ್ಕೆ ಬರುವರು” ಎಂದು ಹಝ್ರತ್ ಮಸೀಹ್ ಮೌಊದ್ (ಅಹ್ಮದಿಯಾ ಜಮಾಅತಿನ ಸ್ಥಾಪಕ) ಅವರಿಗೆ ಅಲ್ಲಾಹನು ಅರುಹಿದ್ದನು.

ಆ ಗೌರವಾರ್ಹ ಸಂತರ ಕುರಿತು ಇನ್ನೂ ಹೀಗೆ ಬರೆಯಲಾಗಿತ್ತು:

ಅವರು ಹೇಳಿದರು: “ನಾನು ಈ ಕರಪತ್ರವನ್ನು ಪ್ರಕಟಿಸಿದಾಗ ನನ್ನ ಅನೇಕ ಶಿಷ್ಯಂದಿರು ನನ್ನ ಬಳಿಗೆ ಬಂದರು. ‘ನೀವು ಇದೇನು ಮಾಡಿದಿರಿ? ಸರಕಾರವನ್ನು ಎದುರು ಹಾಕುವುದು ಸರಿಯಲ್ಲವಷ್ಟೇ?’ ಎಂದು ಅವರು ಹೇಳಿದರು. ನಾನು ಉತ್ತರಿಸಿದೆ: ನನಗೆ ಅಲ್ಲಾಹನ ಆದೇಶ ಲಭಿಸಿದೆ, ಅಲ್ಲಾಹನ ಆಜ್ಞೆಯನ್ನು ನಾನು ಪಾಲಿಸಲೇಬೇಕು. ನಾನು ಯಾರನ್ನು ಎದುರಿಸುತ್ತಿದ್ದೇ

# ‘ಕಲಿಮ’ದೊಡನೆ ವೈರವೇ?

★ ಮುಹಮ್ಮದ್ ಹನೀಫ್ ರಾಮೆ
ಪಾಕ್ ಪಂಜಾಬಿನ ಮಾಜಿ ಮುಖ್ಯ ಮಂತ್ರಿ

ಇಸ್ಲಾಮಿನ ಮೂಲಮಂತ್ರ ‘ಕಲಿಮ’ ಬರೆಯಲಾದ ಬ್ಯಾಡ್ಜುಗಳನ್ನು ಎದೆಯ ಮೇಲೆ ಧರಿಸಿದ ಅಪರಾಧಕ್ಕೆ ಇಪ್ಪತ್ತು ಇಪ್ಪತ್ತೆರಡು ಅಹ್ಮದೀಯರನ್ನು ಬಂಧಿಸಲಾಯಿತೆಂದು 1985 ಫೆಬ್ರುವರಿ 10ರ ಪತ್ರಿಕೆಗಳಲ್ಲಿ ಕಂಡ ಫೈಸ್ಲಾಬಾದಿನ ವಾರ್ತೆ ನನ್ನ ಮನಸ್ಸಿಗೆ ನೋವನ್ನುಂಟುಮಾಡಿತು. ಆ ಪ್ರದೇಶದ ಕೆಲವು ಉಲಮಾಗಳು (ಮುಸ್ಲಿಂ ಮತ ಪಂಡಿತರು) ಈ ಬಗ್ಗೆ ಸಂತಸವನ್ನೂ ಆಹ್ಲಾದವನ್ನೂ ವ್ಯಕ್ತಪಡಿಸಿರುವರೆಂದು ಓದಿ ನಾನು ಇನ್ನೂ ವ್ಯಾಕುಲಗೊಂಡೆ. ಹಲವರ ದೃಷ್ಟಿಯಲ್ಲಿ ಇದೊಂದು ಸಾಮಾನ್ಯ ವಾರ್ತೆಯಾಗಿದೆ. ಒಂದು ಜನಾಂಗ, ಅಥವಾ ಒಂದು ಅಲ್ಪಸಂಖ್ಯಾತ ಸಮುದಾಯದ ಮತ ಸ್ವಾತಂತ್ರ್ಯವನ್ನು ಈ ಪ್ರಕಾರ ಭಂಗಗೊಳಿಸುವುದು ತಿಳಿದು ಸಹ ಯಾವ ಪ್ರತಿಕ್ರಿಯೆಯೂ ಇಲ್ಲದ ಮಟ್ಟಿಗೆ ಹೃದಯ ಕಠಿಣವಾಗಿರುವ ಅಥವಾ ನಿಶ್ಚೇಷ್ಟಗೊಂಡಿರುವ ಬೇರೆ ಅನೇಕರನ್ನೂ ಕಾಣಬಹುದು. ಎಲ್ಲಾ ಜನರ ಮೂಲಭೂತ ಹಕ್ಕುಗಳು ಕಸಿಯಲ್ಪಟ್ಟಿವೆ ಎಂಬುದಾಗಿದೆ ಇದಕ್ಕೆ ಕಾರಣ. ಆದರೆ ಇದರ ಅರ್ಥ ಯಾರಾದರೂ ನಮ್ಮ ಮೇಲೆ ಬಲಪ್ರಯೋಗ ಮಾಡುತ್ತಾರೆಂದಲ್ಲ. ಪವಿತ್ರ ಖುರ್‌ಆನಿನ ‘ಸೂರಃ ಮಾಇದ’ದ “ಯಾವುದಾದರೊಂದು ಜನಾಂಗದ ಮೇಲಿನ ವೈರವು ಅವರೊಡನೆ ಅನೀತಿಯಿಂದ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ” ಎಂಬ ನಿರ್ದೇಶದಂತೆ ಪಾಕಿಸ್ತಾನದ ಓರ್ವ ಪೌರನೆಂಬ ನೆಲೆಯಲ್ಲಿ ನಾನು ಹೃತ್ಪೂರ್ವಕವಾಗಿ ಹೇಳುತ್ತೇನೆ: ಈಗ ಪಾಕಿಸ್ತಾನದಲ್ಲಿ ಅಹ್ಮದಿಯಾ ಜಮಾಅತಿನೊಡನೆ ನಮ್ಮ ವರ್ತನೆ ಅತ್ಯಂತ ಅನೀತಿಯಿಂದ ಕೂಡಿದೆ! ಪರಿಸ್ಥಿತಿ ಇಷ್ಟು ಗಂಭೀರವಲ್ಲದಿರುತ್ತಿದ್ದರೆ ರಾಜಕೀಯ ಭೀರುತ್ವಕ್ಕೆ ಅಧೀನನಾಗಿ ನಾನು ಕೂಡ ಅದರ ವಿರುದ್ಧ ಚಕಾರವೆತ್ತುತ್ತಿರಲಿಲ್ಲ ಹಾಗೂ ಒಂದು ಚಿಕ್ಕ ಅಲ್ಪಸಂಖ್ಯಾತ ಜನಾಂಗದ ವಿಚಾರದಲ್ಲಿ ಬಹುಸಂಖ್ಯಾತ ಜನಾಂಗದ ಧಾರ್ಮಿಕ ಪತ್ರಿಕೆಗಳ ವೈರವನ್ನು ಕಟ್ಟಿಕೊಳ್ಳಲು ಧೈರ್ಯಪಡುತ್ತಿರಲಿಲ್ಲ! ಆದರೆ ಪರಿಸ್ಥಿತಿಯೇನೆಂದರೆ, ಅಹ್ಮದಿಯಾ ಜಮಾಅತಿನೊಡನಿರುವ ಶತ್ರುತ್ವವು ಮಿತಿ ಮೀರಿ ಅಲ್ಲಾಹ್ ಮತ್ತು ಮುಹಮ್ಮದ್ ಪೈಗಂಬರರ

---

( 26ನೇ ಪುಟದಿಂದ )

ನೆಂದಾಗಲಿ, ಯಾರು ನನಗೆ ದೋಷವನ್ನುಂಟು ಮಾಡುತ್ತಾರೆಂದಾಗಲಿ ನಾನು ಲಕ್ಷಿಸುವುದಿಲ್ಲ.” (ಈ ಫಕೀರ್ ಮತ್ತು ಶಿಷ್ಯರು ಅಹ್ಮದೀಯರಲ್ಲ!)

ಅಲ್ಲಾಹನು ಆಕಾಶದಿಂದ ಹಝ್ರತ್ ಮಸೀಹ್ ಮೌಊದರಿಗೆ ಸಹಾಯವನ್ನು ಕಳುಹಿಸುತ್ತಿದ್ದಾನೆ. ಇದು ಒಂದು ಮಾತ್ರವಲ್ಲ; ಪಾಕಿಸ್ತಾನದಲ್ಲಿ ದೇವದೂತರು ಇಳಿದು ಜನರ ಹೃದಯಗಳಲ್ಲಿ ಪರಿವರ್ತನೆಯನ್ನುಂಟು ಮಾಡುತ್ತಿರುವ ವಿವರಗಳು ಧಾರಾಳ ಲಭಿಸುತ್ತಿವೆ. ಅಕ್ರಮಿಯಾದ ಆಡಳಿತಾಧಿಕಾರಿಯ ವಿರುದ್ಧ ಜನರ ವಿರೋಧ ಹೆಚ್ಚುತ್ತಿರುವುದಾಗಿಯೂ ಅನ್ಯಾಯಕ್ಕೆ ಗುರಿಯಾದವರ ಮೇಲೆ ಅನುಕಂಪವೂ ಸಹತಾಪವೂ ತೋರಿಸಲ್ಪಡುತ್ತಿರುವುದಾಗಿಯೂ ವಿವರಗಳು ದಿನಂಪ್ರತಿ ಲಭಿಸುತ್ತಿವೆ. ಸ್ಪಷ್ಟವಾದ ದಿವ್ಯಾರಿವು ಅಥವಾ ದಿವ್ಯ ಸ್ವಪ್ನಗಳ ಮೂಲಕ ವಿವರ ಲಭಿಸದವರ ಹೃದಯಗಳಲ್ಲೂ ಅಲ್ಲಾಹನು ದೇವದೂತರನ್ನು ಇಳಿಸಿ ಅವರಿಗೆ ಆಶ್ವಾಸನೆ ನೀಡಿ ಅವರು ಜಮಾಅತಿನ ನೆರವಿಗೆ ಸಿದ್ಧರಾಗುವಂತೆ ಮಾಡುತ್ತಿದ್ದಾನೆ. ಈ ಕಾರಣದಿಂದಲೇ, ಉದ್ಯೋಗಸ್ಥರು ಮೇಲಧಿಕಾರಿಯ ಅತೃಪ್ತಿಯನ್ನು ಅವಗಣಿಸಿಕೊಂಡು ಅಹ್ಮದೀಯರಿಗೆ ಅನುಕೂಲವಾಗಿ ಶಬ್ದವೆತ್ತಲು ತೊಡಗಿದ್ದಾರೆ………

ಪಾಕಿಸ್ತಾನದಲ್ಲಿ ಒಂದು ಆಧ್ಯಾತ್ಮಿಕ ಕ್ರಾಂತಿ ನಡೆಯುತ್ತಿದೆ. ಇದಕ್ಕೆ ವಿರುದ್ಧವಾಗಿ ಅಕ್ರಮಿಗಳ ಮಾರ್ಗ (ಸಬೀಲುಲ್ ಮುಜ್‌ರಿಮೀನ್) ಸ್ಪಷ್ಟವಾಗಿ ಬೇರ್ಪಟ್ಟು ತೋರುತ್ತಿದೆ. □

(“ಬದರ್” : 10–1–85).

ಮೇಲೆ ಶತ್ರುತ್ವವಾಗಿ ಮಾರ್ಪಟ್ಟಿದೆ! ಪಾಕಿಸ್ತಾನದ ಲಕ್ಷ್ಯ "ಲಾ ಇಲಾಹ ಇಲ್ಲಲ್ಲಾಹು" ಎಂದು ನಿರಂತರವಾಗಿ ಘೋಷಿಸುತ್ತಿರುವ ಉಲಮಾಗಳೂ ಧಾರ್ಮಿಕ ಮುಖಂಡರುಗಳೂ ಆ ಕಲಿಮವನ್ನು ಪ್ರಚುರಪಡಿಸುವುದರ ಬದಲು ಅದನ್ನು ನಿರ್ಮೂಲ ಮಾಡಲು ಹೊರಟಿರುವರೇ? ರಸೂಲ್ ಕರೀಂ (ಸ.)ರವರ ಕುರಿತು ಉಪಭೂಖಂಡದಲ್ಲಿಡೀ ಹೀಗೆ ಹೇಳಲಾಗುತ್ತದೆ: "ಖುರ್ಬಾನ್! ಕಂಕರೋಂಕೋ ಕಲಿಮ ಪಢಾನೆವಾಲೆ" (ಶಿಲಾತುಂಡುಗಳಿಂದ ಕೂಡ ಕಲಿಮವನ್ನು ನುಡಿಸುವ ಮಹಾನ್ ಖುರ್ಬಾನ್!) ಕಲ್ಲುತುಂಡುಗಳಿಂದ ಕೂಡ ಕಲಿಮ ನುಡಿಸುವುದರಲ್ಲಿ ಆವೇಶಭರಿತರಾಗಿದ್ದಾರೆ ನಮ್ಮ ಉಲಮಾಗಳು! ಆದರೆ ಇಲ್ಲಿ ಕೆಲವು ಜನರು ಕಲಿಮ ಹೇಳುವುದು ಅವರಿಗೆ ಸಹಿಸಲಿಕ್ಕೆ ಆಗುವುದಿಲ್ಲವಂತೆ! ಅವರು ಧಾರ್ಮಿಕ ವಿಚಾರದಲ್ಲಿ ಕೆಲವು ವ್ಯತ್ಯಸ್ತ ವಿಶ್ವಾಸಗಳನ್ನಿಟ್ಟುಕೊಂಡಿದ್ದಾರೆ ಎಂಬುದೋ ಇದಕ್ಕೆ ಕಾರಣ?

ಸಿಂಧಿನ ಒಂದು ಗ್ರಾಮದಲ್ಲಿ ಒಬ್ಬ ಹಿಂದೂ ಬಾಲಕನ ಕಣ್ಣಿನಲ್ಲಿ ಮಸ್‌ಜಿದ್ ನಬವಿಯ ರೂಪ ಪ್ರತ್ಯಕ್ಷವಾಗಿತೆಂದು ಕೇಳಿದಾಗ ಆ ಬಾಲಕನ 'ಝಿಯಾರತಿ'ಗೆ (ಸಂದರ್ಶನಕ್ಕೆ) ಜನರು ಗುಂಪುಕಟ್ಟಿ ಹೋಗಲಾರಂಭಿಸಿದರು. ಇನ್ನೊಂದು ಕಡೆಯಲ್ಲಿ ವಿವೇಚನೆಯಿಂದಲೂ ಹೃತ್ಪೂರ್ವಕವಾಗಿಯೂ ಕಲಿಮ ಹೇಳುವ ಒಂದು ಸಮುದಾಯದ ಜನರ ಜೀವವೂ ಸೊತ್ತೂ ಮಾನವೂ ಹಾನಿಗೊಳಿಸಲ್ಪಡುತ್ತವೆ! ಕ್ರೈಸ್ತನೋ ಯಹೂದಿಯೋ ಆಗಿರುವ ಒಬ್ಬ ಗ್ರಂಥಕಾರ ಇಸ್ಲಾಮಿನ ಬಗ್ಗೆ ಅಥವಾ ಮುಹಮ್ಮದ್ ಪೈಗಂಬರರ ಕುರಿತು ಏನನ್ನಾದರೂ ಪ್ರಶಂಸಿಸಿ ಬರೆದರೆ ಎಷ್ಟೋ ಮಂದಿ ಉಲಮಾಗಳು ಹೆಮ್ಮೆಪಡುವುದನ್ನು ನಾನು ನನ್ನ ಜೀವಮಾನದಲ್ಲಿ ಕಳೆದ 50 ವರ್ಷಗಳಿಂದ ಕಾಣುತ್ತಿದ್ದೇನೆ. ನಮ್ಮ ಉಲಮಾಗಳು ಇನ್ನು ಮುಂದೆ ಈ ಗ್ರಂಥಗಳನ್ನೆಲ್ಲ ಬೆಂಕಿಗಾಹುತಿ ಮಾಡಲು ಸಿದ್ಧರಾಗುವರೇ?

ಇಸ್ಲಾಂ ಮುಸ್ಲಿಮರಿಗೆ ಮಾತ್ರವಿರುವುದಲ್ಲವೆಂದು ನಾನು ನೆನಪಿಸಿಕೊಡಲೇ? ಇಸ್ಲಾಮಿನ ದೇವರು 'ರಬ್ಬುಲ್ ಆಲಮೀನ್'(ಸರ್ವಲೋಕ ಪರಿಪಾಲಕ). ಇಸ್ಲಾಮಿನ ಪ್ರವಾದಿ 'ರಹ್ಮತುಲ್ಲಿಲ್ ಆಲಮೀನ್' (ಸರ್ವಲೋಕಕ್ಕೆ ಅನುಗ್ರಹ). ಇಸ್ಲಾಮಿನ ಖುರ್‌ಆನ್ 'ದಿಕ್ರುಲ್ಲಿಲ್ ಆಲಮೀನ್' (ಸರ್ವಲೋಕಕ್ಕೂ ಉಪದೇಶ ಗ್ರಂಥ). ಇಸ್ಲಾಂ ಧರ್ಮದ ಮೇಲೆ ಸರ್ವರಿಗೂ ಸಮಾನ ಹಕ್ಕುಗಳಿವೆ. ಇತರರು ಅದನ್ನು ಸ್ವೀಕರಿಸಲಿಕ್ಕೂ ಆಶ್ಲೇಷಿಸಲಿಕ್ಕೂ ಬರುವಾಗ ನಮಗೆ ಕೋಪವುಂಟಾಗುವ ಬದಲು ಸಂತೋಷವಾಗಬೇಕಾಗಿದೆ. ಆದರೆ ನಮ್ಮ ಉಲಮಾಗಳು ಕೈಗೊಂಡ ಈ ಮಾರ್ಗ ಇಸ್ಲಾಮಿನ ಪ್ರಚಾರ ಸ್ಥಗಿತಗೊಳ್ಳಲು ಹೇತುವಾಗುವುದು. ಮಾತ್ರವಲ್ಲ, ಇಸ್ಲಾಂ ಯಹೂದಿ ಧರ್ಮದಂತೆ ಕೆಲವು ನಿರ್ದಿಷ್ಟ ಗೋತ್ರಗಳ ವ್ಯಾಪಾರ ಸಂಬಂಧವಾದ ಆಕ್ರಮಕಾರಿ ಧರ್ಮವೆಂಬ ತಪ್ಪು ಕಲ್ಪನೆ ಲೋಕದಲ್ಲೆಲ್ಲೂ ಪ್ರಚಾರವಾದೀತು.

ಪಾಕಿಸ್ತಾನದ ಬುನಾದಿ 'ಲಾ ಇಲಾಹ ಇಲ್ಲಲ್ಲಾಹು' (ಅಲ್ಲಾಹನ ಹೊರತು ಆರಾಧ್ಯನಿಲ್ಲ) ಎಂಬುದಾಗಿ ಪಾಕಿಸ್ತಾನದ ಆಡಳಿತಾಧಿಕಾರಿಗಳು ಘೋಷಿಸುತ್ತಾರೆ. ಅನ್ಯರ ಮತಸ್ವಾತಂತ್ರ್ಯವನ್ನು ಕಸಿದು ಪಾಕಿಸ್ತಾನದಲ್ಲಿ ದೇವನಟನೆ ಮಾಡಲು ಮತ್ತೆ ಇವರಿಗೆ ಹೇಗೆ ಸಾಧ್ಯ? ಮನುಷ್ಯನ ಮೇಲೆ ದೇವರಿಗಲ್ಲದೆ ಇನ್ನಾರಿಗೂ ಸರ್ವಾಧಿಪತ್ಯವನ್ನು ಪರಿಶುದ್ಧ ಕಲಿಮ ಅಂಗೀಕರಿಸಿಕೊಡುವುದಿಲ್ಲ. ಆದ್ದರಿಂದ ಪಾಕಿಸ್ತಾನದ ಪ್ರತಿಯೊಬ್ಬ ಪೌರನಿಗೂ ಪ್ರತಿಯೊಂದು ಜನಾಂಗಕ್ಕೂ ಪ್ರತಿಯೊಂದು ಅಲ್ಪಸಂಖ್ಯಾತ ಸಮುದಾಯಕ್ಕೂ ಮತ ಸ್ವಾತಂತ್ರ್ಯವಿರಬೇಕಾಗಿದೆ. ಆ ಜನಾಂಗ ಅಥವಾ ಆ ಅಲ್ಪಸಂಖ್ಯಾತ ಸಮುದಾಯ ಇಸ್ಲಾಮಿನ ಕಲಿಮವೇ ತಮ್ಮ ಕಲಿಮವೆಂದು ಹೇಳುವುದಾದರೆ, ಅಸಂತೋಷವನ್ನು ಪ್ರಕಟಿಸುವುದರ ಒದಲು ಸಂತೋಷವನ್ನು ಆಹ್ಲಾದವನ್ನೂ ಪ್ರದರ್ಶಿಸಬೇಕಾಗಿದೆ. ಅಹ್ಮದಿಯಾ ಜಮಾಅತಿನ ವಿಚಾರದಲ್ಲಿ ಪಾಕಿಸ್ತಾನ್ ಜನತೆಯೂ ಪಾಕಿಸ್ತಾನ್ ಸರಕಾರವೂ ಪುನರಾಲೋಚನೆ ಮಾಡಬೇಕೆಂದು ನನ್ನ ವಿನೀತ ಅಭಿಪ್ರಾಯವಾಗಿದೆ. 1947ರಲ್ಲಿ ಅಹ್ಮದಿಯಾ ಜಮಾಅತ್, 'ಜಮಾಅತೆ ಇಸ್ಲಾಮಿ' ವಿರುದ್ಧ ಪಾಕಿಸ್ತಾನನ್ನು ಬೆಂಬಲಿಸಿತ್ತು. 'ಜಮಾಅತೆ ಇಸ್ಲಾಮಿ' ಜನರು ಇಂದು ಪಾಕಿಸ್ತಾನ ಮತ್ತು ಪಾಕ್ ಆದರ್ಶದ ಕಾವಲುಗಾರರಂತೆ ವರ್ತಿಸುತ್ತಿದ್ದಾರೆ! ಅಲ್ಲ, ಅವರಿಗೆ ಹಾಗೆ ವೇಷಕಟ್ಟಲಾಗಿದೆ! ಆದರೆ, ಈ ದೇಶದಲ್ಲಿ ಅಹ್ಮದಿಯಾ ಜಮಾಅತಿನ ರಾಜಕೀಯವೂ ಸಾಂಪತ್ತಿಕವೂ ಸಾಂಸ್ಕಾರಿಕವೂ ಧಾರ್ಮಿಕವೂ ಆದ ಹಕ್ಕುಗಳು ಸಂರಕ್ಷಿಸಲ್ಪಟ್ಟು ಕಾಣುವುದಿಲ್ಲ. ಇದು "ಅನ್ಯಾಯ ಕ್ರಮ"ವೆಂದೂ ಇದನ್ನು ಕೊನೆಗೊಳಿಸಬೇಕೆಂದೂ ನನ್ನ ಸುಚಿಂತಿತ ಅಭಿಪ್ರಾಯವೆಂದು ನಾನು ಹೇಳ

ಬಯಸುತ್ತೇನೆ. ಪವಿತ್ರ ಕಲಿಮ ಅಲ್ಲಾಹನಿಂದ ಅವತೀರ್ಣಗೊಳಿಸಲ್ಪಟ್ಟದ್ದಾಗಿದೆ. ನಮ್ಮ ಸರಕಾರ ಮತ್ತು ನಮ್ಮ ಉಲಮಾಗಳು ಅಹ್ಮದೀಯರ ಮಸೀದಿಗಳ ಮುಖದ್ವಾರದಿಂದ ಕಲಿಮವನ್ನು ಅಳಿಸುವ ಕ್ರಮಗಳನ್ನು ನಿಲ್ಲಿಸದಿದ್ದರೆ, ಇನ್ನೂ ಮೀರಿ ಅಹ್ಮದೀಯರ ಎದೆಯಿಂದ ಕಲಿಮವನ್ನು ಕಿತ್ತೆಸೆಯಲು ಆರಂಭಿಸುವುದಾದರೆ, ಒಂದು ವಿಚಾರ ದಿಟ! ಕಲಿಮ ಎಂದಿಗೂ ನಾಶವಾಗದು. ಕಾರಣವೇನೆಂದರೆ ಅದರ ಸಂರಕ್ಷಕ ಅಲ್ಲಾಹನೇ ಆಗಿದ್ದಾನೆ. ಕಲಿಮವನ್ನು ಅಳಿಸಲಿಕ್ಕೂ ಕಿತ್ತೆಸೆಯಲಿಕ್ಕೂ ಹೊರಡುವವರು ಯಾವುದಾದರೂ ವಿಪತ್ತಿನಲ್ಲಿ ಸಿಲುಕದಿರಲಿ ಎಂದೇ ನನಗೆ ಹೇಳಲಿಕ್ಕಿರುವುದು. ನಾನು ಇನ್ನೂ ಮುಚ್ಚುಮರೆಯಿಲ್ಲದೆ ಹೇಳಲೆ, ನನಗಿರುವ ಭಯವು ಇನ್ನೂ ಸ್ಪಷ್ಟವಾಗಿ ಹೇಳಲು ನನ್ನನ್ನು ನಿರ್ಬಂಧಿಸುತ್ತಿದೆ. ಅಲ್ಲಾಹನ ಮಸೀದಿಗಳಿಂದ – ಅವು ಅಹ್ಮದೀಯರ ಮಸೀದಿಗಳಾದರೂ– ಅಲ್ಲಾಹನ ಕಲಿಮವನ್ನು ಅಳಿಸಿಬಿಡುವ ಕ್ರಮಗಳು ರೂಢಿಯಲ್ಲಿರುವ ಈ ಪಾಕಿಸ್ತಾನದಲ್ಲಿ ಇಲ್ಲಿನ ನಿವಾಸಿಗಳು ಕಲಿಮ ವಿರೋಧವನ್ನು ನಿಶ್ಶಬ್ದರಾಗಿ ನೋಡಿ ನಿಲ್ಲುವರಾದರೆ, ಪಾಕಿಸ್ತಾನೇ ದೊಡ್ಡದಾದೊಂದು ವಿಪತ್ತಿಗೆ ಗುರಿಯಾಗುವುದೆಂದು ನಾನು ಭೀತನಾಗಿದ್ದೇನೆ. (ಅಲ್ಲಾಹು ರಕ್ಷಿಸಲಿ). ನಾನು ಪಾಕ್ ಸರಕಾರದೊಡನೆಯೂ ಪಾಕಿಸ್ತಾನದ ಉಲಮಾಗಳೊಡನೆಯೂ ಎಲ್ಲಕ್ಕಿಂತ ಮಿಗಿಲಾಗಿ ಪಾಕಿಸ್ತಾನದ ಮೇಲೆ ಪ್ರೀತಿಯುಳ್ಳ ಪ್ರಜೆಗಳೊಡನೆಯೂ, ಅವರು ನನ್ನ ಅಭಿಪ್ರಾಯಗಳ ಬಗ್ಗೆ ಶಾಂತಚಿತ್ತರಾಗಿ ಪರ್ಯಾಲೋಚಿಸಬೇಕೆಂದು ವಿನೀತನಾಗಿ ಕೋರುತ್ತೇನೆ. ನಾನು ಅಹ್ಮದಿಯಲ್ಲ, ನನ್ನ ದೂರದ ಅಥವಾ ಸಮೀಪದ ಸಂಬಂಧಿಕರ್ಯಾರೂ ಅಹ್ಮದಿಯಲ್ಲ. ಒಬ್ಬ ಸಾಮಾನ್ಯ ಪಾಕ್ ಪ್ರಜೆಯೆಂಬ ನೆಲೆಯಲ್ಲಿ ಈ ಕಲಿಮ ವಿರೋಧದಲ್ಲಿ ನನಗೆ ಭಯವಾಗುತ್ತದೆ. ಈ ಕಲಿಮ ವಿರೋಧ ನಮ್ಮಲ್ಲಿ ಧಾರ್ಮಿಕ ಸಹಿಷ್ಣುತೆ ಬಾಕಿಯುಳಿಯಲಾರದೆಂಬ ಸೂಚನೆ ನೀಡುತ್ತದೆ. ಮಾತ್ರವಲ್ಲ, ಅದು ನಮ್ಮ ಮುನಾಫಿಕ್‌ತನ (ಕಪಟಾಚರಣೆ)ದ ನಿದರ್ಶನ ಕೂಡ ಆಗಿದೆ. ಯೋಚಿಸಿರಿ; ಒಂದು ಕಡೆಯಲ್ಲಿ ಕಲಿಮವನ್ನು ಪ್ರೀತಿಸುವುದಾಗಿ ನಾವು ವೀರವಾದ ಮೊಳಗಿಸುತ್ತೇವೆ. ಪಾಕಿಸ್ತಾನದ ಧ್ಯೇಯ "ಲಾ ಇಲಾಹ ಇಲ್ಲಲ್ಲಾಹ್" ಎಂದು ನಾವು ಘೋಷಿಸುತ್ತೇವೆ. ಇನ್ನೊಂದು ಕಡೆಯಲ್ಲಿ ಇದೇ ಪಾಕಿಸ್ತಾನದಲ್ಲಿ ಕಲಿಮವನ್ನು ನಿರ್ಮೂಲನ ಮಾಡುವ ಕಾಯಕವನ್ನು ಆರಂಭಿಸಿದ್ದೇವೆ. ಇದಕ್ಕಿಂತ ಮುನಾಫಿಕ್‌ತನ ಬೇರೇನಿದೆ? ನಿಶ್ಚಯವಾಗಿಯೂ ನೀತಿವಂತನಾದ ಯಾರೇ ಆದರೂ ಇದು ಕಲಿಮದೊಡನೆ ಪ್ರೀತಿಯಲ್ಲ, ವೈರವೆಂದು ಸಾರಲು ಹಿಂಜರಿಯಲಿಕ್ಕಿಲ್ಲ.

("ಜಂಗ್" ದೈನಿಕ, ಲಾಹೋರ್: 11-2-85)


## AHMADIYYA URDU LITERATURE

1. AHMADIYYATH KA PAIGHAM
2. SADAKATHE HAZRATH MASIH MAUWOOD
3. ZUHOORE IMAM MAHDI
4. NUZOOLUL MASIH
5. KHATHAMUNNABIYYEEN

WILL BE SENT FREE

Apply with 25 paise stamp for each book to :

BOOK SECRETARY, AHMADIYYA MUSLIM MISSION,
10-23-1008, Ansari Road, Mangalore-575 001.

**ಸನ್ಮಾರ್ಗಕ್ಕೆ ಉತ್ತರ :**

# ಸತ್ಯ ಪ್ರವಾದಿ ಮತ್ತು ಮಿಥ್ಯ ಪ್ರವಾದಿ

★ ಐ. ಎಂ.

"(ತನಗೆ ದಿವ್ಯ ಸಂದೇಶ ಲಭಿಸುತ್ತಿದೆಯೆಂದು) ಅಲ್ಲಾಹನ ಮೇಲೆ ಸುಳ್ಳಾಗಿ ಆರೋಪಿಸುವ ಅಥವಾ ಅಲ್ಲಾಹನ ನಿಜವಾದ ದೃಷ್ಟಾಂತಗಳನ್ನು ತಳ್ಳಿಬಿಡುವಂತಹ ವ್ಯಕ್ತಿಗಿಂತ ಅಕ್ರಮಿ ಯಾರಿದ್ದಾರೆ? ನಿಶ್ಚಯವಾಗಿಯೂ ಅಲ್ಲಾಹು ಅಪರಾಧಿಗಳಿಗೆ ವಿಜಯ ನೀಡುವುದಿಲ್ಲ." (ಪವಿತ್ರ ಖುರ್‌ಆನ್– ಅಧ್ಯಾಯ : 10 ವಚನ 18)

ಮೇಲಿನ ಖುರ್‌ಆನ್ ವಾಕ್ಯದಲ್ಲಿ ಪ್ರಧಾನವಾದ ಮೂರು ಅಂಶಗಳು ಅಡಕವಾಗಿವೆ. ಒಂದನೆಯದಾಗಿ. ಅಲ್ಲಾಹನಿಂದ ದಿವ್ಯ ಸಂದೇಶ ಲಭಿಸದೆಯೂ ಪ್ರವಾದಿಯಾಗಿ ನಿಯೋಜಿಸಲ್ಪಡದೆಯೂ ಇದ್ದು ಸಹ ಸುಳ್ಳು ಸುಳ್ಳಾಗಿಯೇ ತಾನು ಅಲ್ಲಾಹನ ಪ್ರವಾದಿಯೆಂದು ಹಾಗೂ ಅಲ್ಲಾಹನು ತನ್ನೊಡನೆ ಸಂಭಾಷಿಸುತ್ತಾನೆಂದೂ ಹೇಳುವ ವ್ಯಾಜವಾದಿಯು ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ದೊಡ್ಡ ಅಕ್ರಮಿಯಾಗಿದ್ದಾನೆ. ಎರಡನೆಯದಾಗಿ, ಅಲ್ಲಾಹನ ದಿವ್ಯ ಸಂದೇಶವಾಹಕರಾಗಿ ಅವತರಿಸುವ ಸತ್ಯ ಪ್ರವಾದಿಗಳು ಮುಂದಿಡುವಂತಹ ಅಲ್ಲಾಹನ ಸತ್ಯ ದೃಷ್ಟಾಂತಗಳ ಎದುರಲ್ಲಿ ಕಣ್ಣು ಮುಚ್ಚುತ್ತಾ ಆ ಸತ್ಯ ಪ್ರವಾದಿಯನ್ನು ಸುಳ್ಳುಗಾರನೆಂದು ಹೇಳಿ ತಳ್ಳಿಬಿಡುವುದು ಕೂಡ ಅತ್ಯಂತ ದೊಡ್ಡ ಅಕ್ರಮವಾಗಿದೆ. ಮೂರನೆಯದಾಗಿ ಈ ಎರಡು ಬಗೆಯ ಅಕ್ರಮಿಗಳೂ ವಿಜಯ ಗಳಿಸಲಾರರೆಂಬುದು ಅಲ್ಲಾಹನ ವಿಧಿಯಾಗಿರುತ್ತದೆ.

ಕಪಟ ಪ್ರವಾದಿತ್ವವನ್ನು ವಾದಿಸುವ ಯಾರೂ ಕೂಡ ತನ್ನ ಯೋಜನೆಯಲ್ಲಿ ಸಫಲಗೊಳ್ಳಲು ಸಾಧ್ಯವಿಲ್ಲವೆಂದು ಪವಿತ್ರ ಖುರ್‌ಆನಿನ ಇತರ ಕಡೆಗಳಲ್ಲೂ ಪ್ರಸ್ತಾಪಿಸಲಾಗಿದೆ. ಮಾತ್ರವಲ್ಲ, ಸುಳ್ಳು ಪ್ರವಾದಿಗಳು ಪಶ್ಚಾತ್ತಾಪಪಟ್ಟು ತಮ್ಮ ವಾದದಿಂದ ಹಿಂದಿರುಗದಿದ್ದಲ್ಲಿ ಅವರು ಕೊಲ್ಲಲ್ಪಡುವರೆಂದೂ ಇದರಿಂದ ಅವರು ಕಪಟವಾದಿಗಳಾಗಿದ್ದರೆಂಬುದನ್ನು ತಿಳಿದುಕೊಳ್ಳಬೇಕೆಂಬುದಾಗಿಯೂ ಪವಿತ್ರ ಖುರ್‌ಆನ್ ಹೇಳುತ್ತದೆ. ನೋಡಿರಿ :

"ಈತನು ನಮ್ಮ ಮೇಲೆ ಒಂದು ವಚನವನ್ನಾದರೂ ಸುಳ್ಳಾಗಿ ಆರೋಪಿಸಿರುತ್ತಿದ್ದರೆ, ನಾವು ಈತನನ್ನು ಬಲಗೈಯಿಂದ ಶಕ್ತಿಯುತವಾಗಿ ಹಿಡಿದು ಈತನ ಜೀವನಾಡಿಯನ್ನು ಕತ್ತರಿಸಿಬಿಡುತ್ತಿದ್ದೆವು. ಆಗ ನಮ್ಮ ಈ ಶಿಕ್ಷೆಯಿಂದ ಈತನನ್ನು ರಕ್ಷಿಸಲು ನಿಮ್ಮಲ್ಲಿ ಯಾರಿಂದಲೂ ಸಾಧ್ಯವಿರುತ್ತಿದ್ದಿಲ್ಲ. ನಿಶ್ಚಯವಾಗಿಯೂ ಭಯಭಕ್ತಿಯಿರುವವರಿಗೆ ಇದೊಂದು ಜ್ಞಾಪನೆಯಾಗಿರುತ್ತದೆ." (ಖುರ್‌ಆನ್ 69 : 45ರಿಂದ 49)

ಹೌದು, ಲೋಕಾರಂಭದಿಂದಲೂ ಅಲ್ಲಾಹನ ಈ ದಿವ್ಯ ನಿಯಮವು ಜಾರಿಯಲ್ಲಿದೆ. ಆ ಕುರಿತು ಪವಿತ್ರ ಖುರ್‌ಆನಿನಲ್ಲಿ ಪುನಃ ಒಮ್ಮೆ ಜ್ಞಾಪಿಸಲಾಗಿದೆ ಅಷ್ಟೆ. ಕಪಟ ಪ್ರವಾದಿಯು ಕೊಲ್ಲಲ್ಪಡುವನು ಎಂಬುದಾಗಿ ತೌರಾತ್‌ನಲ್ಲಿ ಕೂಡ ಉಲ್ಲೇಖವಿರುವುದನ್ನು ನಾವು ಕಾಣುತ್ತೇವೆ:

"ಆದರೆ, ಯಾವ ಪ್ರವಾದಿ ನನ್ನಿಂದ ಅಧಿಕಾರ ಹೊಂದದೆ ನಾನು ಪ್ರೇರಣೆ ಮಾಡದ ಮಾತುಗಳನ್ನು ಯೆಹೋವನ ಮಾತೆಂದು ಹೇಳಿ ಜನರಿಗೆ ತಿಳಿಸುವನೋ ಇಲ್ಲವೇ ಇತರ ದೇವರುಗಳ ಹೆಸರಿನಲ್ಲಿ ಮಾತಾಡುವನೋ ಅವನಿಗೆ ಮರಣ ಶಿಕ್ಷೆಯಾಗಬೇಕು." ಧರ್ಮೋಪದೇಶ ಕಾಂಡ 18:20)

ಮೇಲಿನ ವಿವರಣೆಯಿಂದ ಕಪಟ ಪ್ರವಾದಿಗಳಿಗೆ ಈ ಲೋಕದಲ್ಲೇ ಮರಣ ಶಿಕ್ಷೆಯಾಗಬೇಕಾದುದು ಅಲ್ಲಾಹನ ನಿಯಮವೆಂದು ತಿಳಿದುಬರುತ್ತದೆ. ಓರ್ವ ವ್ಯಕ್ತಿಯು ಕಪಟವಾಗಿ ಪ್ರವಾದಿತ್ವವನ್ನು ವಾದಿಸುತ್ತಾ ಆತನಲ್ಲಿ ಜನರು ನಂಬಿಕೆಯಿಟ್ಟು ಮಾರ್ಗಭ್ರಂಶರಾಗಲು ಎಡೆಯಾಗುವಂತೆ ಆ ವ್ಯಾಜವಾದಿಯು ದಿನೇದಿನೇ ವಿಜಯಗಳಿಸುತ್ತಾ ಹೋಗುವುದು ಸರ್ವಥಾ ಸಾಧ್ಯವಿಲ್ಲವೆಂದು ಅಲ್ಲಾಹನು ಪವಿತ್ರ ಖುರ್‌ಆನಿನ ಮೇಲಿನ ವಚನದಲ್ಲಿ ತಿಳಿಸಿಕೊಟ್ಟಿರುವನು. ಲೋಕಾರಂಭದಿಂದಲೂ ದೇವರಿಂದ ನಿಯೋಜಿತರಾದ ಎಲ್ಲಾ ಪ್ರವಾದಿಗಳೂ ಮನುಷ್ಯರೇ ಆಗಿದ್ದುದರಿಂದ ಯಾರಾದರೂ ಅತಿಕರ್ಮಿ ತಾನು ದೇವನಿಯುಕ್ತ

ಪ್ರವಾದಿಯೆಂದು ವ್ಯಾಜವಾಗಿ ಘೋಷಿಸಿದಲ್ಲಿ ಮುಗ್ಧ ಜನರು ಆತನಲ್ಲಿ ನಂಬಿಕೆಯಿಟ್ಟು ದಾರಿ ತಪ್ಪಲು ಸಾಧ್ಯತೆಯಿರುವುದರಿಂದಲೇ ಅಲ್ಲಾಹನು ಈ ಕಾರ್ಯವನ್ನು ಬಹಳ ಗಂಭೀರವಾಗಿ ಪರಿಗಣಿಸಿ ಅಂಥವರು ಕೊಲ್ಲಲ್ಪಡುವರೆಂಬುದಾಗಿಯೂ ಅವರಿಗೆ ಸಫಲತೆ ಲಭಿಸಲಾರದೆಂದೂ ಹೇಳಿರುವುದು. ಅಲ್ಲಾಹನ ಈ ದಿವ್ಯ ನಿಯಮ ಎಲ್ಲಾ ಕಾಲದಲ್ಲೂ ಅನುವರ್ತನವಾಗಿರುವುದನ್ನು ಮಾತ ಚರಿತ್ರೆಯು ನಮಗೆ ತಿಳಿಸಿಕೊಡುತ್ತದೆ. ಕಪಟ ಪ್ರವಾದಿಗಳ ಉದ್ಭವ ಉಂಟಾದಾಗಲೆಲ್ಲಾ ಅಲ್ಲಾಹನ ಈ ನಿಯಮದಂತೆ ಅವರು ವಧಿಸಲ್ಪಟ್ಟಿರುವರು. ಇದಕ್ಕೆ ಇತ್ತೀಚೆಗೆ ಒಂದು ಉದಾಹರಣೆಯು ಸುಡಾನಿನಲ್ಲಿ ಗೋಚರವಾಯಿತು.

‘ಸನ್ಮಾರ್ಗ’ವೆಂಬ ಮೌದೂದಿ ಪತ್ರಿಕೆಯು ಪ್ರಕಟಿಸಿದ ಒಂದು ಲೇಖನದಲ್ಲಿ (30-3-85) ಲೇಖಕ ಆರ್. ಎಮ್. ಹೇಳುತ್ತಾರೆ: “ಕಳೆದ ಫೆಬ್ರವರಿ 18ರಂದು ಖಾರ್ತೂಮ್‌ನಲ್ಲಿ ಕಿಕ್ಕಿರಿದು ನೆರೆದಿದ್ದ ನಾಗರಿಕರ ಮುಂದೆ ಅವರು ಮೃತಪಟ್ಟರು. ಮುಹಮ್ಮದ್ ಮಹ್ಮೂದ್ ತಾಹಾ ಎಂಬ ಆ 65 ವರ್ಷ ಪ್ರಾಯದ ವ್ಯಕ್ತಿಯನ್ನು ಸುಡಾನ್ ನ್ಯಾಯಾಲದ ಆಜ್ಞೆಯಂತೆ ವಧಿಸಲಾಯಿತು.”

ಸುಡಾನಿನ ಮಹ್ಮೂದ್ ತಾಹಾ ಎಂಬ ವ್ಯಕ್ತಿಯು ಕೆಲವು ವರ್ಷಗಳಿಂದಲೂ ಕಪಟ ಪ್ರವಾದಿತ್ವವನ್ನು ವಾದಿಸುತ್ತಿದ್ದರೆಂದೂ ಅವರಿಗೆ ಕೆಲವು ಬಲಿಷ್ಟ ರಾಷ್ಟ್ರಗಳ ಪರೋಕ್ಷ ಸಹಾಯವು ಲಭಿಸಿದ್ದರೂ ಕೂಡ “ಈ ತನಕ ಅವರಿಗೆ ಕೇವಲ ಕೆಲವು ಮಂದಿ ಶಿಷ್ಯರಷ್ಟೆ' ದೊರೆತಿದ್ದಾರೆ” ಎಂದೂ “ಅವರ ಅನುಯಾಯಿ ವೃಂದವು 200ರ ಗಡಿಯನ್ನು ಎಂದೂ ದಾಟಿರಲಿಲ್ಲ”ವೆಂದೂ ಪ್ರಸ್ತುತ ಲೇಖನದಲ್ಲಿ ಹೇಳಲಾಗಿದೆ. ಪತ್ರಿಕೆ ಹೇಳುವಂತಹ ಅಮೇರಿಕ ಮತ್ತು ಬ್ರಿಟನ್ ಮೊದಲಾದ ಬಲಿಷ್ಟ ರಾಷ್ಟ್ರಗಳ ಅನುಗ್ರಹಾಶೀರ್ವಾದಗಳೆಂದೇಕೆ, ಲೋಕದ ಸಮಸ್ತ ರಾಷ್ಟ್ರಗಳೂ ಒಂದಾಗಿ ಸೇರಿದರೂ ಕೂಡ ಕಪಟ ಪ್ರವಾದಿಯು ಕೊಲ್ಲಲ್ಪಡಬೇಕೆಂಬ ಅಲ್ಲಾಹನ ವಿಧಿಯನ್ನು ವ್ಯತ್ಯಾಸಗೊಳಿಸಲು ಅವರಿಂದ ಸಾಧ್ಯವಾಗಲಾರದು. ಪ್ರಪಂಚದ ಮುಂದೆ ಮಹ್ಮೂದ್ ತಾಹಾರ ಕಪಟ ಪ್ರವಾದಿತ್ವವು ಬಹಿರಂಗಗೊಂಡಿತು. ಹಝ್ರತ್ ಮುಹಮ್ಮದ್ ಪೈಗಂಬರರ ಕಾಲದಲ್ಲಿ (ಹಿಜರಿ ಒಂದನೇ ಶತಮಾನದಲ್ಲಿ) ಪ್ರತ್ಯಕ್ಷಪಟ್ಟ ಕಪಟವಾದಿ ಮುಸೈಲಿಮರಂತೆಯೇ ಈಗ ಹಿಜರಿ 14ನೇ ಶತಮಾನದಲ್ಲಿ (ಇಮಾಂ ಮಹದಿಯವರ ಕಾಲ) ಪ್ರತ್ಯಕ್ಷರಾದ ಮಹ್ಮೂದ್ ತಾಹಾರ ಅಂತ್ಯವೂ ಉಂಟಾಯಿತು.

ಹಝ್ರತ್ ಮುಹಮ್ಮದ್ ಪೈಗಂಬರರು ಜನರ ಮುಂದೆ ಸಮರ್ಪಿಸಿದ ದಿವ್ಯ ಸಂದೇಶಕ್ಕೆ ಕ್ರಮೇಣ ಜನಮನ್ನಣೆ ದೊರಕಿ, ಮುಹಮ್ಮದ್ ಪೈಗಂಬರರು ಸ್ಥಾಪಿಸಿದ ಸಂಘಟನೆಯು ದಿನೇ ದಿನೇ ಅಭಿವೃದ್ಧಿಗೊಂಡು ಅದು ಲೋಕದ ಮೂಲೆ ಮೂಲೆಗೂ ಹಬ್ಬಿ ಜಯಭೇರಿ ಮೊಳಗಿಸಿದುದು ಆ ಪೈಗಂಬರ ಸತ್ಯತೆಗೆ ಸಮರ್ಪಕವಾದ ನಿದರ್ಶನವಾಗಿದೆ ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಆದರೆ, ಅದಕ್ಕೆದುರಾಗಿ ಸ್ವಯಂ ನಿರ್ಮಿತ ವ್ಯಾಜ ಪ್ರವಾದಿತ್ವವನ್ನು ಘೋಷಿಸಿದ ಮುಸೈಲಿಮ ಈ ಲೋಕದಲ್ಲೇ ಮರಣ ಶಿಕ್ಷೆಗೆ ಗುರಿಯಾದುದು ಹಾಗೂ ಅವರಿಗೂ ಅವರ ಅನುಯಾಯಿಗಳಿಗೂ ಸಫಲತೆ ಲಭಿಸದೆ ಇದ್ದುದು ಮುಸೈಲಿಮ ಒಬ್ಬ ಕಪಟವಾದಿಯೆಂಬುದಕ್ಕೆ ರುಜುವಾತಾಗಿರುತ್ತದೆ.

ಕೆಲವು ಕಪಟವಾದಿಗಳು ಪ್ರವಾದಿತ್ವವನ್ನು ಘೋಷಿಸುತ್ತಾರೆಂದ ಮಾತ್ರಕ್ಕೆ ಅಲ್ಲಾಹನ ಕಡೆಯಿಂದ ನಿಜವಾಗಿಯೂ ನಿಯೋಜಿತರಾಗುವ ಸತ್ಯ ಸಂದೇಶವಾಹಕರ ಸತ್ಯತೆಗೆ ಎಷ್ಟು ಮಾತ್ರಕ್ಕೂ ಕಳಂಕ ಬರುವುದಿಲ್ಲ. ಬದಲಾಗಿ ಈ ರೀತಿಯ ಕಪಟವಾದಿಗಳು ಅವರ ಅನುಯಾಯಿಗಳ ಸಮೇತ ಪರಾಭವಗೊಳ್ಳುವುದನ್ನು ಲೋಕಕ್ಕೆ ತೋರಿಸಿಕೊಟ್ಟು ಹಾಗೂ ತನ್ನ ನಿಜವಾದ ಪ್ರವಾದಿಗಳಿಗೆ ವಿಜಯವನ್ನು ನೀಡಿ ಅಲ್ಲಾಹನು ಇವರೊಳಗಿನ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತಾನೆ. ಖಂಡಿತವಾಗಿಯೂ ಅಲ್ಲಾಹನಲ್ಲಿ ಭಯಭಕ್ತಿಯಿರುವ ಸನ್ಮಾರ್ಗಕಾಂಕ್ಷಿಗಳಿಗೆ ಇದರಲ್ಲಿ ಪಾಠವಿದೆ.

‘ಸನ್ಮಾರ್ಗ’ದ ಲೇಖಕರು ಸುಡಾನಿನ ಮಹ್ಮೂದ್ ತಾಹಾರನ್ನು ಅಲ್ಲಾಹನ ಸತ್ಯ ಸಂದೇಶವಾಹಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ (ಅ)ರವರಿಗೆ ಹೋಲಿಸಲು ಹೊರಟಿರುವುದು ನಿಜವಾಗಿಯೂ ಅಕ್ರಮದ ಪರಮಾವಧಿಯೆಂದು ಹೇಳಬೇಕು. ಮಧ್ಯಕಾಲೀನ ಕ್ರೈಸ್ತ ವಿದ್ವಾಂಸರು ಹಝ್ರತ್ ಮುಹಮ್ಮದ್ ಪೈಗಂಬರರನ್ನು ಮುಸೈಲಿಮರೊಂದಿಗೆ ಸಾದೃಶ್ಯಗೊಳಿಸಿದಂತೆ! ಲೇಖಕರ ಮಾತು ಈ ರೀತಿಯಿದೆ: “ಮಹ್ಮೂದ್ ತಾಹಾರು ಖಾದಿಯಾನಿನ ಮಿರ್ಝಾ

ಗುಲಾಮರಂತೆಯೇ ಕಪಟ ಪ್ರವಾದಿತ್ವವನ್ನು ವಾದಿಸುತ್ತಿದ್ದರು". ಕಾಮಾಲೆ ರೋಗ ಹಿಡಿದವನ ಕಣ್ಣಿಗೆ ಎಲ್ಲವೂ ಹಳದಿಯಾಗಿ ಕಾಣುತ್ತದಂತೆ. ಬಣ್ಣಗಳಲ್ಲಿರುವ ವ್ಯತ್ಯಾಸವನ್ನು ಕಂಡುಕೊಳ್ಳಲು ಅಂಥವರಿಗೆ ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಅಲ್ಲಾಹನ ಸತ್ಯಸಂದೇಶ ವಾಹಕರಾಗಿ, ಹಝ್ರತ್ ಮುಹಮ್ಮದ್ ಪೈಗಂಬರರು ಪ್ರಬೋಧಿಸಿದ ಇಸ್ಲಾಂ ಧರ್ಮವನ್ನು ಪುನರುಜ್ಜೀವನಗೊಳಿಸುವ ಇಮಾಂ ಮಹದಿಯಾಗಿ ಅವತರಿಸಿದ ಹಾಗೂ ಹೆಚ್ಚು ಕಡಿಮೆ 35 ವರ್ಷಗಳಷ್ಟು ಕಾಲದ ವರೆಗೂ ತನಗೆ ಅಲ್ಲಾಹನ ದಿವ್ಯ ವಾಣಿ ಲಭಿಸುತ್ತಿದೆಯೆಂದು ವಾದಿಸಿ ಅಲ್ಲಾಹನಿಂದ ಲಭಿಸುತ್ತಿದ್ದ ದಿವ್ಯ ಸಂದೇಶಗಳನ್ನೂ ಶುಭವಾರ್ತೆಗಳನ್ನೂ ಮುನ್ನೆಚ್ಚರಿಕೆಗಳನ್ನೂ ಭವಿಷ್ಯವಾಣಿಗಳನ್ನೂ ತನ್ನ ಮರಣದ ಪರ್ಯಂತ ಜನರ ಮುಂದಿಡುತ್ತಾ ಜೀವಿತ ಕಾಲದಲ್ಲಿಯೇ ಸಹಸ್ರಾರು ಅನುಯಾಯಿಗಳನ್ನು ಪಡೆದು ಸರ್ವ ರೀತಿಯ ಅಡೆತಡೆಗಳನ್ನೂ ಜಯಿಸಿ ಸುಸಂಘಟಿತವಾದ ಒಂದು ಜಮಾಅತನ್ನು ಸ್ಥಾಪಿಸಿ ವಿಜಯಶ್ರೀಯೊಂದಿಗೆ ತನ್ನ 73ನೆಯ ವಯಸ್ಸಿನಲ್ಲಿ ಪ್ರಕೃತಿ ಸಹಜವಾಗಿ ಮರಣ ಹೊಂದಿದ ಹಝ್ರತ್ ಮಿರ್ಝಾಗುಲಾಂ ಅಹ್ಮದ್(ಅ) ರವರೊಂದಿಗೆ ಈ ಮೌದೂದಿ ಲೇಖಕ ಸುಡಾನಿನ ಒಬ್ಬ ರಾಜಕೀಯ ವಿರೋಧ ಪಕ್ಷ ನಾಯಕ ಮಹ್ಮೂದ್ ತಾಹಾರನ್ನು ತುಲನೆ ಮಾಡಿದ್ದು ನಿಜಕ್ಕೂ ಆಶ್ಚರ್ಯದ ಸಂಗತಿ. ಹಝ್ರತ್ ಮಿರ್ಝಾ ಗುಲಾಂ ಅಹ್ಮದರ ಕಾಲಗತಿಯ ನಂತರವೂ ಅವರು ಸ್ಥಾಪಿಸಿದ ಅಹ್ಮದಿಯಾ ಜಮಾಅತ್ ಪೂರ್ವೋತ್ತರ ಅಭಿವೃದ್ಧಿಯನ್ನು ಗಳಿಸಿತು. ಸಾರ್ವಲೌಕಿಕ ಖಿಲಾಫತ್ ವ್ಯವಸ್ಥೆಯು ಅಹ್ಮದಿಯಾ ಜಮಾಅತಿನ ಮೂಲಕ ಸ್ಥಾಪಿತವಾಯಿತು. ಮಿರ್ಝಾ ಸಾಹೇಬರ ಭವಿಷ್ಯವಾಣಿಯಂತೆಯೇ ಅವರು ಸ್ಥಾಪಿಸಿದ ಜಮಾಅತಿನ ಶಾಖೆಗಳು ಲೋಕದ ಎಲ್ಲಾ ಮೂಲೆ ಮೂಲೆಗೂ ಹಬ್ಬಿದುವು. ಈಗ ಅದರ ಜನಸಂಖ್ಯೆಯು ಒಂದು ಕೋಟಿಯನ್ನು ಮೀರಿದೆ. ಸುಸಂಘಟಿತವಾದ ರೀತಿಯಲ್ಲಿ ಪಾಶ್ಚಾತ್ಯ ದೇಶದವರ ಮಧ್ಯೆ ಇಸ್ಲಾಂ ಧರ್ಮವನ್ನು ಪ್ರಚಾರ ಮಾಡುತ್ತಾ ಮಾನವ ಸಮಾಜವನ್ನೇ ಒಂದಾಗಿಸಿಕೊಂಡು ಮುಹಮ್ಮದ್ ಪೈಗಂಬರರ ಪತಾಕೆಯಡಿಯಲ್ಲಿ ಸಮಸ್ತ ಜಗತ್ತನ್ನು ಅಣಿಗೊಳಿಸುವ ಕಾರ್ಯದಲ್ಲಿ ತೊಡಗಿರುವ ಹಾಗೂ ಈ ಕಾರ್ಯದಲ್ಲಿ ದಿನೇ ದಿನೇ ವಿಜಯಗಳಿಸುತ್ತಿರುವ ಅಹ್ಮದಿಯಾ ಸಂಘಟನೆ–ಅದರ ಸ್ಥಾಪಕರನ್ನು, ಮೌದೂದಿ ಲೇಖಕ ಸ್ವಯಂ ಹೇಳುವಂತೆ ಕೇವಲ 200 ಜನರ ಬೆಂಬಲವಿದ್ದ ಒಬ್ಬ ರಾಜಕೀಯ ಭಗ್ನಹೃದಯಿ ಮಹ್ಮೂದ್ ತಾಹಾರೊಂದಿಗೆ ಹೋಲಿಸಿ ತನ್ನ ಕಾಮಾಲೆ ದೃಷ್ಟಿಯನ್ನು ಬಹಿರಂಗ ಪಡಿಸಿದ್ದಾರೆ; ಅಷ್ಟೆ.

## ಧೋರಣೆ ಬದಲಾವಣೆ

ಮೌದೂದಿ ಪತ್ರಿಕೆ 'ಸನ್ಮಾರ್ಗ'ದಲ್ಲಿ ಪ್ರಕಟವಾದ "ಓರ್ವ 'ಪ್ರವಾದಿ'ಯ ಅಂತ್ಯ" ಎಂಬ ಆ ಲೇಖನದಲ್ಲಿ ಉಲ್ಲೇಖಿಸಲಾದ ಕೆಲವು ಸಂಗತಿಗಳು ಕುತೂಹಲಕಾರಿಯಾಗಿವೆ. ಮೌದೂದಿ ಪಂಥದವರ ಈ ವರೆಗಿನ ಧೋರಣೆಯಲ್ಲಿ ಒಂದು ಚಿಕ್ಕ ಬದಲಾವಣೆಯನ್ನು ಅದರಲ್ಲಿ ಗಮನಿಸಬಹುದು. ಖಾದಿಯಾನೀ ವಿರೋಧಿಗಳಾದ ನರ–ವಾನರ–ಪಿಶಾಚಿಗಳೆಲ್ಲರನ್ನೂ ಒಟ್ಟು ಸೇರಿಸಿಕೊಂಡು, ಎಲ್ಲಾ ಫಿರ್‌ಔನ್, ಇಫ್ರೀತ್, ನಂರೂದ್‌ಗಳೊಂದಿಗೂ ಕೈ ಕೈ ಸೇರಿಸುತ್ತಾ ಈವರೆಗೂ ಮೌದೂದಿಗಳು ಡಂಗುರ ಸಾರಿದ್ದು–ಮಿರ್ಝಾ ಸಾಹೇಬರು ಇಸ್ಲಾಂ ಧರ್ಮದ ಬದ್ಧ ವಿರೋಧಿಯೆಂದೂ ಅವರು ಮುಹಮ್ಮದ್ ಪೈಗಂಬರರನ್ನು ತಿರಸ್ಕರಿಸಿ ಪ್ರವಾದಿತ್ವ ವಾದಿಸಿದ ಒಬ್ಬ ಕಪಟ ವಾದಿ, ಜಿಹಾದಿನಲ್ಲಿ ನಂಬಿಕೆಯಿಲ್ಲದವರು ಎಂದೆಲ್ಲಾ ಆಗಿತ್ತು. ಆದರೆ ಈಗೊಂದು ಚಿಕ್ಕ ಬದಲಾವಣೆ! "ನಾನು ಪ್ರವಾದಿ (ಸ)ರವರ ನೆರಳೆಂದು ಮಿರ್ಝಾ ವಾದಿಸಿದ್ದರು. ಪ್ರವಾದಿ ಮುಹಮ್ಮದರ ಶ್ರೇಷ್ಠತೆಯನ್ನು ಅವರು ಒಪ್ಪಿದ್ದರು" ಎಂದೂ "ಜಿಹಾದ್ ಇಸ್ಲಾಮಿನ ಒಂದಂಶವೆಂಬ ಬಗ್ಗೆ ಮಿರ್ಝಾರಿಗೆ ತರ್ಕವಿರಲಿಲ್ಲ" ಎಂದೂ ಲೇಖನದಲ್ಲಿ ಬರೆದಿರುವುದು ಶುಭಸೂಚಕವಾಗಿದೆ. ಇದೇ ರೀತಿಯಲ್ಲಿ ಸ್ವಲ್ಪವಾಗಿ ಮುಂದುವರಿದು ಕೊನೆಗೆ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ (ಅ)ರವರು ದೇವರಿಂದ ನಿಯೋಜಿತರಾದ ಒಬ್ಬ ಸತ್ಯಪ್ರವಾದಿಯೆಂದೂ ಅತ್ಯಂತ ಶೋಚನೀಯ ಅಧಃಪತನಾವಸ್ಥೆಯಲ್ಲಿ ನರಳುತ್ತಿರುವ ಇಂದಿನ ಮುಸ್ಲಿಂ ಸಮುದಾಯಕ್ಕೆ ಅವರ ಮೂಲಕ ಮಾತ್ರವೇ ಪುನರುತ್ಥಾನ ಸಾಧ್ಯವೆಂದೂ ಮಿರ್ಝಾ ಸಾಹೇಬರು ಮತ್ತು ಅವರು ಸ್ಥಾಪಿಸಿದ ಅಹ್ಮದಿಯಾ ಸಂಘಟನೆ ಯಥಾರ್ಥ ಮುಸ್ಲಿಂ ಮತ್ತು ಇಸ್ಲಾಮಿಕ ಸಂಘಟನೆಯೆಂಬ ಸತ್ಯವನ್ನು ಕೂಡ ಈ ಮೌದೂದಿಗಳು ಕ್ರಮೇಣ ಮನಗಾಣುವರೆಂದು ನಾವು ಆಶಿಸುತ್ತೇವೆ. ಅಂತೆಯೇ ಅವರ ಯಥಾರ್ಥ ಸನ್ಮಾರ್ಗಕ್ಕಾಗಿ ನಾವು ಅಲ್ಲಾಹನೊಡನೆ ಪ್ರಾರ್ಥಿಸುತ್ತೇವೆ. ಕಡಿಮೆ

ಪಕ್ಷ ಇಮಾಂ ಮಹದಿಯವರ ಪೂರ್ಣ ನಾಮವನ್ನು ಉಚ್ಚರಿಸುವ ಭಾಗ್ಯವನ್ನಾದರೂ ಅಲ್ಲಾಹನು ಇವರಿಗೆ ಕರುಣಿಸಲಿ – ಆಮೀನ್.

### ತಾಹಾ – ಮೌದೂದಿ ಸಾಮ್ಯತೆ

ಲೇಖನದ ಆರಂಭದಲ್ಲಿ "ಮಹ್ಮೂದ್ ತಾಹಾರು ಖಾದಿಯಾನಿ ಮಿರ್ಝಾ ಗುಲಾಂರಂತೆಯೇ ಕಪಟ ಪ್ರವಾದಿತ್ವವನ್ನು ವಾದಿಸುತ್ತಿದ್ದರು" ಎಂದು ಹೇಳಿದ ಲೇಖಕ ಆರ್. ಎಂ.ರು ನಂತರ ತನ್ನ ಲೇಖನದಲ್ಲಿ ಬರೆದ ವಿವರಣೆಗಳಲ್ಲೆಲ್ಲಾ ಹಝ್ರತ್ ಮಿರ್ಝಾ ಸಾಹೇಬರು ಇಸ್ಲಾಮಿನ ಮೂಲಭೂತ ಸಿದ್ಧಾಂತಗಳಿಂದ ದೂರ ಸರಿದಿಲ್ಲವೆಂದೂ ಆದರೆ, ಮಹ್ಮೂದ್ ತಾಹಾರು ಇಸ್ಲಾಮಿನ ತಳಹದಿಯನ್ನೇ ಬದಲಾಯಿಸಿದ್ದಾರೆಂದೂ ವಿಶದಪಡಿಸಿದ್ದಾರೆ. ಇಸ್ಲಾಂ ಧರ್ಮದ ಮೂಲಭೂತ ಸಿದ್ಧಾಂತಗಳಲ್ಲಿ ಯಾವುದೇ ಬದಲಾವಣೆಯನ್ನು ತರಲು ತನಗೆ ಅಧಿಕಾರವಿಲ್ಲವೆಂದು ಶಕ್ತಿಯುತವಾಗಿ ಘೋಷಿಸಿದ ಹಝ್ರತ್ ಮಿರ್ಝಾ ಗುಲಾಂ ಅಹ್ಮದರು ಅದರ ಆವಶ್ಯಕತೆಯೂ ಇರುವುದಿಲ್ಲವೆಂಬುದಾಗಿ ಸಾರಿದ್ದಾರೆ. ಇಂದಿನ ಮುಸ್ಲಿಮರು ತಮ್ಮ ನಡವಳಿಕೆಗಳನ್ನು ಇಸ್ಲಾಮೀಕರಿಸಬೇಕಾದ ಅವಶ್ಯಕತೆಯನ್ನು ಮಾತ್ರ ಅವರು ಒತ್ತಿ ಹೇಳಿದ್ದರು. ಅನೇಕಾನೇಕ ಅಂಧವಿಶ್ವಾಸಗಳಲ್ಲೂ ಅಧರ್ಮಗಳಲ್ಲೂ ಮುಳುಗಿ ನಿರ್ಜೀವಾವಸ್ಥೆಯಲ್ಲಿರುವ ಇಂದಿನ ಮುಸ್ಲಿಂ ಸಮುದಾಯವನ್ನು ದಿವ್ಯ ಬೋಧನೆ ಮೂಲಕ ಪುನರುಜ್ಜೀವನಗೊಳಿಸಲು ತನ್ನನ್ನು ಅಲ್ಲಾಹನು ಕಳುಹಿಸಿರುವನೆಂಬುದು ಅವರ ವಾದವಾಗಿತ್ತು. ಅವರ ವಾದಗಳಿಗೂ ಇಸ್ಲಾಂ ಧರ್ಮದ ಮೂಲಾಧಾರಗಳನ್ನೇ ಬದಲಾಯಿಸಲು ಹೊರಟ ಮಹ್ಮೂದ್ ತಾಹಾರ ವಾದಗಳಿಗೂ ಏನೇನೂ ಸಾಮ್ಯತೆಯಿಲ್ಲವೆಂಬುದನ್ನು ಲೇಖಕರೇ ವಿವರಿಸಿರುವುದರಿಂದ ನಾನಿಲ್ಲಿ ಆ ಬಗ್ಗೆ ಏನೂ ಹೇಳಬಯಸುವುದಿಲ್ಲ. ಆದರೆ, ಸುಡಾನಿನ ಕಪಟವಾದಿ ಮಹ್ಮೂದ್ ತಾಹಾರು ಮುಂದಿರಿಸಿದ ವಾದ ಮುಖಗಳು "ಜಮಾತೇ ಇಸ್ಲಾಮಿ" ಪಂಥದ ಸ್ಥಾಪಕರಾದ ಮುಲ್ಲಾ ಅಬುಲ್‌ಆಲಾ ಮೌದೂದಿಯವರ ದೃಷ್ಟಿಕೋನದೊಂದಿಗೆ ಸಂಪೂರ್ಣ ಹೋಲುತ್ತಿತ್ತು ಎಂಬುದನ್ನು ಮೌದೂದಿಗಳ ತಿಳುವಳಿಕೆಗಾಗಿ ಸ್ವಲ್ಪ ವಿವರಿಸಬೇಕಾಗಿದೆ.

### ಅಧಿಕಾರ ಮೋಹ

"ಅಧಿಕಾರ ಮತ್ತು ಪ್ರಭಾವವಿರುವ ಕೆಲವು ಪ್ರಧಾನ ವ್ಯಕ್ತಿಗಳನ್ನು ಒಲಿಸಿಕೊಂಡರೆ ಅನುಯಾಯಿಗಳ ಕೊರತೆಯಾಗದೆಂದು ತಾಹಾ ತಿಳಿದಿದ್ದರು." ('ಸನ್ಮಾರ್ಗ')

ಇದೇ ರೀತಿಯ ಮಹತ್ವಾಕಾಂಕ್ಷೆಯು ಮುಲ್ಲಾ ಮೌದೂದಿಯವರಿಗೂ ಇತ್ತು. ಇಸ್ಲಾಂ ಧರ್ಮಕ್ಕೆ ರಾಜಕೀಯ ಬಣ್ಣ ಬಳಿದು ಮುಗ್ಧ ಮುಸ್ಲಿಮರನ್ನು ಸುಲಭದಲ್ಲಿ ಕಬಳಿಸಬಹುದೆಂದೂ ಹಾಗೆ ತಾನೊಬ್ಬ ಸರ್ವಾಧಿಕಾರಿ ರಾಜನಾಗಬಹುದೆಂದೂ (ಜಿಯಾವುಲ್ ಹಕ್‌ನಂತೆ) ಮೌದೂದಿಯವರು ಯೋಚಿಸಿದ್ದರು. ಅವರು ಸ್ಥಾಪಿಸಿದ 'ಜಮಾಅತೆ ಇಸ್ಲಾಮಿ' ಎಂಬ ಸಂಘಟನೆಯೂ ಧರ್ಮದ ಮುಖವಾಡ ಹೊತ್ತ ಒಂದು ರಾಜಕೀಯ ಸಂಸ್ಥೆಯೆಂಬುದು ಈಗ ಎಲ್ಲರಿಗೂ ತಿಳಿದ ವಿಚಾರವಾಗಿದೆ. 'ದೀನ್' ಎಂಬ ಅರಬಿ ಪದಕ್ಕೆ ಮೌದೂದಿಯವರು ನೀಡಿದ ಅರ್ಥ ರಾಷ್ಟ್ರ ಎಂದು. ಹಾಗೆ ಇಸ್ಲಾಂ ದೀನ್ ಎಂದರೆ ಇಸ್ಲಾಮೀ ರಾಷ್ಟ್ರ (Islamic State) ಎಂದರ್ಥ. ಮುಸ್ಲಿಮರ (ಮೌದೂದಿಗಳ ?) ಆಡಳಿತವಿರುವ ಇಸ್ಲಾಮೀ ರಾಷ್ಟ್ರದಲ್ಲಿ ಮಾತ್ರವೇ ಒಬ್ಬ ಮುಸ್ಲಿಮನಿಗೆ ಸರಿಯಾದ ಮುಸ್ಲಿಮನಾಗಿ ಜೀವಿಸಲು ಸಾಧ್ಯ. ಮುಸ್ಲಿಮೇತರ ರಾಷ್ಟ್ರಗಳಲ್ಲಿ (ಜಾತ್ಯಾತೀತ ರಾಷ್ಟ್ರಗಳಲ್ಲಿ ಕೂಡ) ಜೀವಿಸುವವರ ದೀನ್ ಇಸ್ಲಾಂ ದೀನ್ ಆಗಿರಲಾರದು! ಲೋಕದಲ್ಲಿರುವ ಎಲ್ಲಾ ಮುಸ್ಲಿಮೇತರ ಆಡಳಿತವನ್ನೂ ಶಕ್ತಿಯುಪಯೋಗಿಸಿ ಧ್ವಂಸಗೊಳಿಸಿ ಆ ಜಾಗದಲ್ಲಿ ಇಸ್ಲಾಮೀ ಆಡಳಿತವನ್ನು (ಮೌದೂದಿ ನಿರೂಪಣೆ ಪ್ರಕಾರದ ಇಸ್ಲಾಮೀ ಆಡಳಿತವಿರಬೇಕು) ಸ್ಥಾಪಿಸಬೇಕಾದುದು ಹಾಗೂ ಅದಕ್ಕಾಗಿ ಸಂದರ್ಭ ನೋಡುತ್ತಿರಬೇಕಾದುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯವಾಗಿದೆ! ಇದು ಮುಲ್ಲಾ ಮೌದೂದಿಯವರ ತತ್ವ ನಿರೂಪಣೆ. (ಖುತ್‌ಬಾತ್ ಎಂಬ ಅವರ ಗ್ರಂಥದ 27 ಮತ್ತು 28ನೇ ಅಧ್ಯಾಯಗಳನ್ನು ನೋಡಿರಿ). ಭಾರತದ ಮೌದೂದಿ ನೇತಾರರು ಮತ್ತೂ ಮುಂದುವರಿದು, ಹಝ್ರತ್ ಮುಹಮ್ಮದ್ ಪೈಗಂಬರರು ಕೂಡ ಸ್ವಂತ ಆಡಳಿತಾಧಿಕಾರ ಲಭಿಸುವವರೆಗೆ ಪರಿಪೂರ್ಣ ಮುಸ್ಲಿಂ ಆಗಿರಲಿಲ್ಲವೆಂದು ಹೇಳಿದ್ದಾರೆ!

ಇಸ್ಲಾಂ ಧರ್ಮವನ್ನು ರಾಜಕೀಯದೊಂದಿಗೆ ಬೆರೆಸಿ ರಾಜಕೀಯ ರಕ್ತಕ್ರಾಂತಿಯ ಮೂಲಕ ಆಡಳಿತಗಳನ್ನು ಕೈಗೆತ್ತಿಕೊಳ್ಳಬೇಕೆಂಬ ಅಧಿಕಾರ ಲಾಲಸೆಯು ಈ ನವೀನ ಸಿದ್ಧಾಂತವನ್ನು ಪ್ರಚಾರಪಡಿಸಲು ಮುಲ್ಲಾ ಮೌದೂದಿಯವರು ಅನೇಕ ಗ್ರಂಥಗಳನ್ನು ಬರೆದಿರುವರು. ಕೇವಲ

ರಾಜಕೀಯ ಮಹತ್ವವಿರುವ, ಫ್ಯಾಸಿಸ್ಟ್ ಮಾದರಿಯ ಹಾಗೂ ಆಧ್ಯಾತ್ಮಿಕ ಶೂನ್ಯವಾಗಿರುವ ಅವರ ಕೃತಿಗಳನ್ನು ಅವರ ಅನುಯಾಯಿಗಳು ಭಾರತದಲ್ಲಿ ಕೂಡ ಪ್ರಚಾರ ಮಾಡುತ್ತಿದ್ದಾರೆ.

ಈ ರೀತಿ ರಾಜಕೀಯಕ್ಕೆ ಇಸ್ಲಾಂ ಧರ್ಮದ ಮುಖವಾಡದನ್ನು ಹೊದಿಸಿ ಮುಗ್ಧ ಮುಸ್ಲಿಮರನ್ನು ಹುರಿದುಂಬಿಸಿದಲ್ಲಿ ಹಾಗೂ ಇಂದಿನ ಕೆಲವು ಮುಸ್ಲಿಂ ರಾಷ್ಟ್ರಗಳ ರಕ್ತಪಿಪಾಸು ನೇತಾರರ (ಖೊಮೇನಿ–ಜಿಯಾರಂತಹ) ಬೆನ್ನು ಸವರಿದಲ್ಲಿ ಅನುಯಾಯಿಗಳು ಲಭಿಸುವರೆಂದು ಭಾವಿಸಿದ ಮುಲ್ಲಾ ಮೌದೂದಿಯವರು ತನ್ನ ಭಾವನಾ ಸಾಮ್ರಾಜ್ಯದ ಕೂಸಾದ ಈ ವಿಶಿಷ್ಟ ರೀತಿಯ ಇಸ್ಲಾಮಿ ರಾಜ್ಯವನ್ನು ಸ್ಥಾಪಿಸಿ ಅದರ ಮಹಾ ದಂಡನಾಯಕನಾಗಿ ವಿರಾಜಿಸುವ ಕನಸನ್ನು ಕಂಡಿದ್ದರು. ಮುಲ್ಲಾ ಮೌದೂದಿಯವರಿಂದ ಸ್ಥಾಪಿಸಲಾದ "ಜಮಾತೆ ಇಸ್ಲಾಮಿ" ಎಂಬ ರಾಜಕೀಯ ಫ್ಯಾಸಿಸ್ಟ್ ಪಕ್ಷಕ್ಕೂ ಸುಡಾನಿನ ರಾಜಕೀಯ ಪತಿಪಕ್ಷ ನಾಯಕ, ಕಪಟವಾದಿ ಮಾಹ್ಮೂದ್ ತಾಹಾ ಎಂಬವರ 'ಅಲ್ ಇಖ್ವಾನುಲ್ ಜಮ್‌ಹ್ಯೂರಿಯ್ಯೂನ್' ಎಂಬ ಸಂಘಟನೆಗೂ ಈ ವಿಷಯದಲ್ಲಿ ಸಂಪೂರ್ಣ ಹೋಲಿಕೆಯಿದೆ.

## ನಮಾಝ್–ಕವಾಯತು

"ವಿಶ್ವಾಸದ ಪ್ರಥಮ ಹಂತದಲ್ಲಿರುವವರಿಗಾಗಿ ದಿನದ ಐದು ಬಾರಿಯ ನಮಾಝನ್ನು ವಿಧಿಸಲಾಗಿದೆ. ವಿಶ್ವಾಸ ಸಂಪೂರ್ಣಗೊಂಡ ಬಳಿಕ ನಮಾಝಿನ ಅಗತ್ಯವಿಲ್ಲ." ಎಂಬುದು ತಾಹಾರ ಅಭಿಪ್ರಾಯವಾಗಿತ್ತು. ('ಸನ್ಮಾರ್ಗ') ಇದಕ್ಕೆ ಸಂಪೂರ್ಣ ಹೋಲುವ ವಿಶ್ವಾಸವನ್ನೇ ಮುಲ್ಲಾ ಮೌದೂದಿಯವರೂ ಹೊಂದಿದ್ದರು. ಲೋಕದಲ್ಲಿ ಇಂದು ಸ್ಥಾಪಿತವಾಗಿರುವ ಎಲ್ಲಾ ರಾಜ್ಯಾಡಳಿತಗಳನ್ನೂ (ಪ್ರಜಾತಾಂತ್ರಿಕ ಜಾತ್ಯತೀತ ಆಡಳಿತಗಳನ್ನು ಕೂಡ) ಶಕ್ತಿಯುಪಯೋಗಿಸಿ ಧ್ವಂಸಗೊಳಿಸಿ ಅದರ ಜಾಗದಲ್ಲಿ ಮೌದೂದಿ ಕಲ್ಪನೆಯ 'ಇಸ್ಲಾಮಿ ಆಡಳಿತ'ವನ್ನು ಸ್ಥಾಪಿಸುವ ಸಲುವಾಗಿ ನಡೆಸುವ ಸಶಸ್ತ್ರ ಸಮರವನ್ನು "ಜಿಹಾದ್" ಎಂದು ಹೆಸರಿಸುತ್ತಾ ಈ ರೀತಿಯ ರಕ್ತಪಾತದ ಜಿಹಾದ್ ನಡೆಸಿ ಆಡಳಿತಾಧಿಕಾರ ಕಿತ್ತುಕೊಳ್ಳಬೇಕಾದುದು ಮುಸ್ಲಿಮರ ಅನಿವಾರ್ಯ ಕರ್ತವ್ಯವೆಂದೂ ಈ ಸಮರ ಸನ್ನಾಹಕ್ಕಾಗಿಯೇ ನಮಾಝ್, ಉಪವಾಸ, ಝಕಾತ್, ಹಜ್ ಮೊದಲಾದ ತರಬೇತಿಗಳನ್ನು ಮುಸ್ಲಿಮರಿಗೆ ನೀಡಲಾಗುತ್ತದೆ ಎಂದೂ ಜನಾಬ್ ಮೌದೂದಿಯವರು ತನ್ನ ಗ್ರಂಥ ಖುತ್‌ಬಾತ್‌ನಲ್ಲಿ ಅತ್ಯಂತ ಸ್ಪಷ್ಟವಾಗಿ ಸಮರ್ಥಿಸಿದ್ದಾರೆ. ಅವರ ಮಾತುಗಳನ್ನೇ ಕೇಳಿರಿ: "ನಮಾಝ್, ಉಪವಾಸ ವ್ರತ, ಝಕಾತ್, ಹಜ್ ಎಂಬ ಆರಾಧನಾ ಕರ್ಮಗಳನ್ನು ಈ ಉದ್ದೇಶಕ್ಕಾಗಿಯೇ ನಿಮ್ಮ ಮೇಲೆ ನಿರ್ಬಂಧಗೊಳಿಸಲಾಗಿದೆ. ಇಲ್ಲಿರುವ ಸರಕಾರಗಳು ಅದರ ಸೇನೆ, ಪೋಲೀಸ್, ಸಾರ್ವಜನಿಕ ಸೇವೆ ಮೊದಲಾದ ಇಲಾಖೆಗಳಿಗೆ ನೇಮಕಗೊಳಿಸುವರೆ ಜನರಿಗೆ ಆರಂಭದಲ್ಲಿ ಒಂದು ವಿಶಿಷ್ಟ ರೀತಿಯ ತರಬೇತಿಯನ್ನು ನೀಡಿ ಅನಂತರ ಆಯಾ ಹುದ್ದೆಗಳಿಗೆ ಅವರನ್ನು ನೇಮಿಸುವ ರೀತಿಯಲ್ಲೇ ಇಸ್ಲಾಂ ಕೂಡ ಅದರ ನಾನಾ ರೀತಿಯ ಹುದ್ದೆಗಳಿಗೆ ನೇಮಕಗೊಳಿಸಬಯಸುವ ಜನರಿಗೆ ಪ್ರಥಮವಾಗಿ ಒಂದು ವಿಶೇಷ ರೀತಿಯ ತರಬೇತಿಯನ್ನು ನೀಡಿ ನಂತರ ಅವರ ಮೂಲಕ ಯುದ್ಧವನ್ನೂ ಅಲ್ಲಾಹನ ಆಡಳಿತಕ್ಕೆ ಸೇವೆಯನ್ನೂ ಮಾಡಿಸಲು ಇಚ್ಛಿಸುತ್ತದೆ." (ಖುತ್‌ಬಾತ್ 27ನೇ ಅಧ್ಯಾಯ).

ಹಾಗಾದರೆ, ಒಂದು ಮಹಾ ರಕ್ತಕ್ರಾಂತಿಯನ್ನು ನಡೆಸಿ, ಲೋಕದಲ್ಲಿರುವ ಎಲ್ಲಾ ರಾಷ್ಟ್ರಗಳ ಆಡಳಿತಗಳನ್ನೂ ಕೈಗೆತ್ತಿಕೊಳ್ಳಲು ನಡೆಸುವಂತಹ ಜಿಹಾದ್ ಎಂಬ ಸಮರಕ್ಕೆ ಸನ್ನಾಹಗೊಳಿಸುವ ತರಬೇತಿಯೇ ನಮಾಝ್ ಮತ್ತು ಇತರ ಆರಾಧನಾ ಕರ್ಮಗಳೆಂದು ಮುಲ್ಲಾ ಮೌದೂದಿ ಹೇಳುವುದು. ಹೀಗೆ ಈ ಸಾರ್ವಲೌಕಿಕ ವಿಪ್ಲವದ ನಂತರ ಎಲ್ಲಾ ರಾಷ್ಟ್ರಗಳ ಆಳ್ವಿಕೆಯೂ ಮೌದೂದಿ 'ಸಾಲಿಹಿ'ಗಳ ಕೈಯಲ್ಲಿ ಬಂದುಬಿಟ್ಟರೆ ನಂತರ ನಮಾಝ್, ಉಪವಾಸ ಮೊದಲಾದ ಆರಾಧನಾ ಕರ್ಮಗಳ ಅಗತ್ಯ ಇರುವುದಿಲ್ಲ!

ಇಂತಹ ಅತ್ಯಂತ ಭಯಾನಕವೂ ಆಪತ್ಕರವೂ ಆದ ವಿಶ್ವಾಸಗಳನ್ನು ಮುಲ್ಲಾ ಮೌದೂದಿಯವರು ಹೊಂದಿದ್ದರು. ಅವರು ಸ್ಥಾಪಿಸಿದ "ಜಮಾತೇ ಇಸ್ಲಾಮಿ" ಎಂಬ ಪಂಥದವರಿಗೆ ಕೂಡ ಇದರಲ್ಲಿ ಭಿನ್ನಮತವಿರಲು ಸಾಧ್ಯವಿಲ್ಲ. ಆದುದರಿಂದ ಪ್ರಜಾಪ್ರಭುತ್ವ ಸ್ನೇಹಿಗಳೂ ಲೋಕದಲ್ಲಿ ಶಾಂತಿಯ ವಾತಾವರಣವನ್ನು ಬಯಸುವವರೂ ಆದ ಯಾರೇ ಆದರೂ ಈ ಫ್ಯಾಸಿಸ್ಟ್ ಜಮಾತೇ ಇಸ್ಲಾಮಿಯವರ ಬಗ್ಗೆ ಎಚ್ಚರದಿಂದಿರಬೇಕು.

—o—o—

# ಲಂಡನಿನಲ್ಲಿ ಅಹ್ಮದಿಯಾ ಸಮ್ಮೇಳನ

## 48 ರಾಷ್ಟ್ರಗಳಿಂದ ಪ್ರತಿನಿಧಿಗಳು

( ಬಿ. ಬಿ. ಸಿ. ವಾರ್ತೆ )

ಬ್ರಿಟನಿನ ಅಹ್ಮದೀಯರ 20ನೇ ವಾರ್ಷಿಕ ಸಮ್ಮೇಳನ ಕೌಂಟಿಸರ್ರೆಯ ಟಿಲ್‌ಪೋರ್ಡ್ ಎಂಬಲ್ಲಿ ಸಮಾವೇಶಗೊಂಡಿತು. ಇಲ್ಲಿ ಅಹ್ಮದೀಯರು ಒಂದು ದೊಡ್ಡ ಶಾಲಾ ಕಟ್ಟಡ ಮತ್ತು ಅದರ ಸುತ್ತುಮುತ್ತು 25 ಎಕ್ರೆ ಸ್ಥಳವನ್ನು ಖರೀದಿಸಿರುವರು. ಸಂಘಟನೆಯ ಯುರೋಪ್ಯನ್ ಕೇಂದ್ರವನ್ನು ಇಲ್ಲಿಯೇ ಅವರು ಸ್ಥಾಪಿಸಿದ್ದಾರೆ. "ಇಸ್ಲಾಮಾಬಾದ್" ಎಂದು ಆ ಸ್ಥಳವನ್ನು ಅವರು ನಾಮಕರಣ ಮಾಡಿರುವರು.

ಸಮ್ಮೇಳನ 3 ದಿನಗಳ ಕಾಲ ನಡೆಯಿತು. 48 ರಾಷ್ಟ್ರಗಳಿಂದ 6000 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ಬಹ್ವಂಶ ಜನರು ಪಾಕಿಸ್ತಾನಿಯರು. ಆದರೆ ಇಂಗ್ಲೆಂಡ್, ಅಮೇರಿಕ, ಕೆನಡಾ, ಆಫ್ರಿಕ, ಇಂಡೋನೇಷ್ಯ ಮುಂತಾದ ದೇಶಗಳಿಂದ ಧಾರಾಳ ಅಹ್ಮದೀಯರು ಪಾಲ್ಗೊಂಡಿದ್ದಾರೆ. ಪ್ರತಿನಿಧಿಗಳಿಗಾಗಿ ಅರಬಿ, ಇಂಗ್ಲಿಷ್, ಇಂಡೋನೇಷ್ಯನ್ ಎಂಬ ಮೂರು ಭಾಷೆಗಳಲ್ಲಿ ಕಾರ್ಯಕ್ರಮಗಳನ್ನು ಭಾಷಾಂತರಿಸುವ ಏರ್ಪಾಡು ಮಾಡಲಾಗಿತ್ತು. ಅಲ್ಲಿ ಸ್ಕೂಲ್ ಕಟ್ಟಡದಲ್ಲೇ ಸಾವಿರ ಜನರಿಗೆ ವಸತಿಯ ವ್ಯವಸ್ಥೆ ಮಾಡಲಾಗಿತ್ತು.

ಅಹ್ಮದೀಯರ ನೇತಾರ ಮಿರ್ಝಾ ತಾಹಿರ್ ಅಹ್ಮದ್ ಸಮ್ಮೇಳನವನ್ನು ಉದ್ಘಾಟನೆ ಮಾಡಿದರು. ಮೂರನೇ ದಿನ ಅವರ ಭಾಷಣದಿಂದಲೇ ಸಮ್ಮೇಳನ ಪರಿಸಮಾಪನವಾಯಿತು. ಸಮಾರೋಪ ಭಾಷಣದಲ್ಲಿ ಪಾಕಿಸ್ತಾನದಲ್ಲಿ ಅಹ್ಮದೀಯರ ವಿರುದ್ಧ ನಡೆಯುತ್ತಿರುವ ನಗ್ನ ಆಕ್ರಮಗಳನ್ನು ಅವರು ವಿವರಿಸಿದರು: ಕಳೆದ ದಿನಗಳಲ್ಲಿ ಸಿಂಧ್ ಪ್ರಾಂತ್ಯದಲ್ಲಿ ಇಬ್ಬರು ಅಹ್ಮದೀ ಮುಸ್ಲಿಮರನ್ನು ಕೊಲೆಗೈಯ್ಯಲಾಯಿತು, ಅಹ್ಮದೀಯರ ವಿರುದ್ಧವಾಗಿ ಮೊದಲು ಪಂಜಾಬಿನಲ್ಲಿ ನಡೆದ ಚಳವಳಿ ಪರಾಭವಗೊಂಡ ಬಳಿಕ ಅದು ಸಿಂಧ್‌ನೆಡೆಗೆ ಮುಖ ತಿರುಗಿಸಿದೆ. ಅಹ್ಮದಿಯಾ ಜಮಾಅತಿಗೆ ಸೇರಿದ ಕೆಲವರನ್ನು ಕೊಲೆಗೈಯ್ದು ಸಂಘಟನೆಯನ್ನು ದಮನಿಸಲು ಅಶಕ್ಯ. ಪಾಕಿಸ್ತಾನದಲ್ಲಿ ಮಾತ್ರವಲ್ಲ, ಲೋಕದ ಎಲ್ಲಾ ಭಾಗಗಳಲ್ಲೂ ಅದು ವ್ಯಾಪಿಸಿದೆ ಎಂದು ಅವರು ಹೇಳಿದರು.

ಐದು ತಾಸುಗಳ ಕಾಲದ ತನ್ನ ದೀರ್ಘ ಭಾಷಣದ ಮಧ್ಯೆ ಪಾಕಿಸ್ತಾನದಲ್ಲಿ ಅಹ್ಮದೀಯರ ವಿರುದ್ಧ ಸರಕಾರ ಹೊರಡಿಸಿದ ಶ್ವೇತಪತ್ರದ ಕುರಿತು ಅವರು ವಿಶದೀಕರಿಸಿ ಹೇಳಿದರು. ಅದರ ಪ್ರತಿಯೊಂದು ಅಂಶವನ್ನು ಅವರು ಖಂಡಿಸಲು ಪ್ರಯತ್ನಿಸಿದರು. ಅಹ್ಮದೀಯರು ಖತಮುನ್ನುಬುವ್ವತಿನಲ್ಲಿ ದೃಢ ವಿಶ್ವಾಸವುಳ್ಳವರೆಂದೂ ಉಮ್ಮತೆ ಮುಹಮ್ಮದಿಯ್ಯದಲ್ಲಿ ಸೇರದ, ಮುಹಮ್ಮದೀ ಶರೀಅತನ್ನು ಅನುಸರಿಸದ ಯಾವ ಪ್ರವಾದಿಯೂ ಆಗಮಿಸಲಿಕ್ಕಿಲ್ಲವೆಂದು ಅಹ್ಮದೀಯರು ದೃಢವಾಗಿ ನಂಬುವವರಾಗಿದ್ದಾರೆಂದೂ ಅವರು ಹೇಳಿದರು. ಅವರು ಮುಂದುವರಿದು ಹೀಗೆ ನುಡಿದರು:

> "ಮಾಗ್ದತ್ತ ಮಸೀಹಾರ (ಅಹ್ಮದಿಯಾ ಜಮಾಅತಿನ ಸ್ಥಾಪಕರ) ಗ್ರಂಥಗಳನ್ನು ಅಧ್ಯಯನ ಮಾಡಿದ ಯಾರೂ ಈ ಆರೋಪಕ್ಕೆ ಕಿವಿಗೊಡುವುದಾಗಲಿ ಲಕ್ಷ್ಯಗೊಡುವುದಾಗಲಿ ಮಾಡಲಿಕ್ಕಿಲ್ಲ, ನಿರ್ಭಾಗ್ಯವಶಾತ್ ಬಹುಪಕ್ಷ ಜನರು ಈ ಬಗ್ಗೆ ತಿಳಿಯದವರಾಗಿದ್ದಾರೆ. ಆ ಗ್ರಂಥಗಳನ್ನು ಓದುವವರು ನಿಜಾಂಶವನ್ನು ತಿಳಿಯಲು ಸಾಧ್ಯವಾಗುತ್ತದೆಂದು ಮನಗಂಡು ಅಂತಹ ಪುಸ್ತಕಗಳಿಗೆಲ್ಲಾ ಪಾಕಿಸ್ತಾನ ಸರಕಾರ ಮುಟ್ಟುಗೋಲು ಹಾಕಿದೆ."

ಈಸಾನಬಿ (ಅ) – ಪ್ರವಾದಿ ಯೇಸು – ಆಕಾಶಕ್ಕೆ ಎತ್ತಲ್ಪಟ್ಟರೆಂಬ ನಂಬಿಕೆ ಕ್ರೈಸ್ತರದ್ದಾಗಿದೆ. ಈಸಾನಬಿ ಪುನಃ ಸಜೀವರಾಗಿ ಬರಲಾರರು ಎಂದು ಅವರು ಹೇಳಿದರು.

ಬೃಹತ್ತಾದ ಚಪ್ಪರದಲ್ಲಿ ಸಮ್ಮೇಳನ ಜರಗಿತು, ಆ ಮಧ್ಯೆ ದೊಡ್ಡ ಗಾಳಿಯೂ ಮಳೆಯೂ ಬಂತು. ಸ್ವಲ್ಪ ಹೊತ್ತು ವಿದ್ಯುಚ್ಛಕ್ತಿ ಇಲ್ಲವಾಯಿತು. ಚಪ್ಪರದೊಳಗೆ ಕತ್ತಲು ಆವರಿಸಿತು. ಪುನಃ ಬೆಳಕು ಬಂದಾಗ ಅಹ್ಮದೀ ಸ್ವಯಂಸೇವಕರು ಮಿರ್ಝಾ ತಾಹಿರ್ ಅಹ್ಮದ್‌ರವರನ್ನು ಸುತ್ತುವರಿದು ನಿಂತು ಇದ್ದುದು ಗೋಚರವಾಯಿತು. ವಿದ್ಯುಚ್ಛಕ್ತಿ ಸಂಪರ್ಕ ಕಡಿದುದು ಬೇರ್‍ಯಾರ ವಿಧ್ವಂಸಕ ಕೃತ್ಯವೇ ಎಂಬ ಸಂಶಯದಿಂದ ಹಾಗೆ ಮಾಡಲಾಗಿತ್ತು.

## ಪಾಲ್ಘಾಟ್‌ನಲ್ಲಿ 27ನೇ ವಾರ್ಷಿಕ ಸಮ್ಮೇಳನ

ಕಳೆದ ಫೆಬ್ರುವರಿ 22, 23, 24ರಂದು ಕೇರಳ ಅಹ್ಮದಿಯಾ 27ನೇ ವಾರ್ಷಿಕ ಸಮ್ಮೇಳನ ಪಾಲ್ಘಾಟ್ ಟೌನ್ ಹಾಲ್‌ನಲ್ಲಿ ಜರಗಿತು.

22ರಂದು ಬೆಳಗ್ಗೆ ಭಾರತದ ಕೇಂದ್ರ ಪ್ರಚರಣಾ ಕಾರ್ಯದರ್ಶಿ ಮೌಲಾನ ಬಶೀರ್ ಅಹ್ಮದ್ ದೆಹ್ಲವಿ ಅಹ್ಮದಿಯಾ ಧ್ವಜಾರೋಹಣ ಮಾಡಿದರು.

ಸ್ಟೇಟ್ ಖಾಯಿದ್ ಟಿ. ಕೆ. ಮುಹ್ಮೂದ್‌ರವರ ಅಧ್ಯಕ್ಷತೆಯಲ್ಲಿ ರಾಜ್ಯ ಖುದ್ದಾಮುಲ್ ಅಹ್ಮದಿಯಾ (ಅಹ್ಮದಿಯಾ ಯುವಜನ ಸಂಘ) ಸಭೆ ಸಮಾವೇಶಗೊಂಡಿತು. ಜುಮಾ ಪ್ರಾರ್ಥನೆಯ ನಂತರ ನಡೆದ ಮಜ್‌ಲಿಸ್ ಅನ್ಸಾರುಲ್ಲಾ (ಅಹ್ಮದಿಯಾ ವಯೋಜನ ಸಂಘ) ಸಭೆಯಲ್ಲಿ ನಾಝಿಂ ಆಲಾ ಸಿ. ಕುಞ್ಞಬ್ದುಲ್ಲಾಹ್ ಅಧ್ಯಕ್ಷತೆ ವಹಿಸಿದರು.

ದ್ವಿತೀಯ ದಿನ ಸಂಜೆ ನಡೆದ ಸಾರ್ವಜನಿಕ ಸಭೆಯನ್ನು ಮೌಲಾನ ಬಶೀರ್ ಅಹ್ಮದ್ ದೆಹ್ಲವಿ ಉದ್ಘಾಟಿಸಿದರು. ಅಹ್ಮದಿಯಾ ಜಮಾಅತ್ ಧಾರ್ಮಿಕತೆಯನ್ನು ಪುನರುತ್ಥಾನಗೊಳಿಸಲು ಸ್ಥಾಪಿತವಾಗಿದೆಯೆಂದೂ ಶಾಂತಿ ಸಾಮರಸ್ಯದ ವಾತಾವರಣವನ್ನು ಉಂಟುಮಾಡಲಿಕ್ಕೆ ಅದು ಅತ್ಯಂತ ಶ್ರಮಿಸುತ್ತಿದೆಂದೂ ಪಾಕಿಸ್ತಾನದ ಅಗ್ನಿ ಪರೀಕ್ಷೆಗಳಲ್ಲಿ ಅದು ಜಯಗಳಿಸುವುದೆಂದೂ ಮಾನುಕುಲದ ಅಂಧಕಾರವನ್ನು ಹೋಗಲಾಡಿಸಲು ಅಹ್ಮದಿಯಾ ಸಂಘಟನೆ ಹೊತ್ತಿಸಿದ ಜ್ಯೋತಿಯನ್ನು ಯಾವುದೇ ಶಕ್ತಿಗೆ ನಂದಿಸಲು ಸಾಧ್ಯವಿಲ್ಲವೆಂದೂ ಅವರು ಹೇಳಿದರು. ತಮಿಳುನಾಡು ಅಹ್ಮದಿಯಾ ಚೀಫ್ ಮಿಶನರಿ ಮೌಲಾನ ಮುಹಮ್ಮದ್ ಉಮರ್ ಅಧ್ಯಕ್ಷತೆ ವಹಿಸಿದ್ದರು.

ದೇವಸಾಮಿಪ್ಯವನ್ನು ಗಳಿಸಲಿಕ್ಕೂ ದೈವಾನುಗ್ರಹಗಳನ್ನು ಪಡೆಯಲಿಕ್ಕೂ ಪ್ರಯತ್ನಿಸಬೇಕೆಂದು ಉಸ್ಮಾನಿಯಾ ವಿಶ್ವವಿದ್ಯಾಲಯದ ಖಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ। ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾದ್ದೀನ್ ನುಡಿದರು. ಲೋಕದಲ್ಲಿ ಪರಿವರ್ತನೆಯನ್ನುಂಟು ಮಾಡಿದ ಮಹಾಪುರುಷರೆಲ್ಲ ವಿರೋಧದ ಅಗ್ನಿಕುಂಡವನ್ನು ಪಾರಾಗಿ ಬರಬೇಕಾಯಿತೆಂದೂ ಕೊನೆಗೆ ವಿಜಯ ಅವರ ಪಾಲಿಗೇ ಆಗಿತ್ತೆಂದೂ "ದೈವಾಸ್ತಿತ್ವ ಪ್ರವಾದಿತ್ವ ಮೂಲಕ" ಎಂಬ ವಿಷಯದಲ್ಲಿ ಮಾತನಾಡುತ್ತಾ ಅವರು ಹೇಳಿದರು.

ಅಹ್ಮದೀ ಮುಸ್ಲಿಮರು ಧರ್ಮಾನುಷ್ಠಾನಗಳನ್ನು ನಿರ್ವಹಿಸುವುದು ಅಪರಾಧವೆಂದು ಪಾಕಿಸ್ತಾನದ ಆಡಳಿತೆ ಹೇಳುವುದು ಮಾನವೀಯ ಮೂಲಭೂತ ಹಕ್ಕುಗಳನ್ನು ಚ್ಯುತಿಗೊಳಿಸುವಂಥದ್ದೂ ವಿಶ್ವಸಂಸ್ಥೆ ಅಂಗೀಕರಿಸಿದ ಮಾನವ ಹಕ್ಕುಗಳ ಶರ್ತಗಳಿಗೆ ವಿರುದ್ಧವೂ ಆಗಿದೆಯೆಂದು ಸಮ್ಮೇಳನ ಅಂಗೀಕರಿಸಿದ ನಿರ್ಣಯದಲ್ಲಿ ಪ್ರಸ್ತಾಪಿಸಲಾಗಿದೆ.

### ಸರ್ವ ಧರ್ಮ ಸಮ್ಮೇಳನ

ತೃತೀಯ ದಿನ ಸಂಜೆ 4 ಗಂಟೆಗೆ ನಡೆದ ಸರ್ವ ಮತ ಸಮ್ಮೇಳನದ ಅಧ್ಯಕ್ಷತೆಯನ್ನು ಕೇರಳ ಚೀಫ್ ಮಿಶನರಿ ಮೌಲಾನ ಮುಹಮ್ಮದ್ ಅಬುಲ್ ವಫಾ ವಹಿಸಿದ್ದರು. ವಿವಿಧ ಜನಾಂಗಗಳೆಡೆಯಲ್ಲಿ ಅವತರಿಸಿದ ಎಲ್ಲಾ ಪ್ರವಾದಿಗಳನ್ನು ಅಂಗೀಕರಿಸಬೇಕೆಂಬುದೂ ಆದರಿಸಬೇಕೆಂಬುದೂ ಇಸ್ಲಾಮಿನ ಅಧ್ಯಾಪನವಾಗಿದೆಯೆಂದೂ ಹಾಗೆ ಮಾಡುವುದರಿಂದ ಮಾತ್ರ ಮತ ಸೌಹಾರ್ದ ಉಂಟಾಗುತ್ತದೆಂದೂ ಅವರು ಹೇಳಿದರು.

ಪಾಲ್ಘಾಟ್ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಎ. ಅಚ್ಯುತ ಭಾಸ್ಕರ್, ಮೌಲವಿ ಮುಹಮ್ಮದ್ ಯೂಸುಫ್, ಫಾದರ್ ಜೋಸ್ ಪಿ. ಚಿಟ್ಟಿಲಪಳ್ಳಿ, ಬಿ. ಮುಹಮೂದ್ ಅಹ್ಮದ್, ಪ್ರೊ। ಟಿ. ಸಿ. ಗೋವಿಂದನ್ ಮುಂತಾದವರು ಧರ್ಮ ಸೌಹಾರ್ದದ ಪ್ರಾಧಾನ್ಯತೆ ಬಗ್ಗೆ ಮಾತನಾಡಿದರು.

ಕೇರಳದ ವಿವಿಧ ಕಡೆಗಳಿಂದಲೂ ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶ, ಒರಿಸ್ಸಾ ರಾಜ್ಯಗಳಿಂದಲೂ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ಮಹಿಳೆಯರಿಗೆ ಪ್ರತ್ಯೇಕ ಏರ್ಪಾಡು ಮಾಡಲಾಗಿತ್ತು.

## ಪಾಕಿಸ್ತಾನದಲ್ಲಿ ಮತ ಸ್ವಾತಂತ್ರ್ಯಕ್ಕೆ 6 ಮಾಜಿ ನ್ಯಾಯಾಧಿಪತಿಗಳ ಆಗ್ರಹ

ಕರಾಚಿ: ತಾವಿಚ್ಛಿಸುವ ಧರ್ಮವನ್ನು ಅನುಸರಿಸುವ ಸ್ವಾತಂತ್ರ್ಯ ಪಾಕಿಸ್ತಾನದ ಪ್ರಜೆಗಳಿಗೆ ನೀಡಬೇಕೆಂದು ಪಾಕಿಸ್ತಾನದ ಆರು ಮಂದಿ ಮಾಜಿ ನ್ಯಾಯಾಧಿಪತಿಗಳು ಒತ್ತಾಯಿಸಿದ್ದಾರೆ.

ನಮಾಝ್ ಮಾಡುವುದರ ಬಗ್ಗೆ ಮತ್ತು ಕಲಿಮ ಉಚ್ಚರಿಸುವುದರ ಕುರಿತು ಅಹ್ಮದಿಯಾ ಸಂಘಟನೆಯ ಮೇಲೆ ಅಥವಾ ಬೇರೆ ಯಾವುದೇ ಸಮುದಾಯದ ಮೇಲೆ ಹೇರಲಾಗುವ ನಿರ್ಬಂಧ ದೇಶದ ಪೌರರಿಗೆ ನೀಡಲಾದ ಹಕ್ಕುಗಳನ್ನು ಭಂಗಗೊಳಿಸುತ್ತದೆಯೆಂದು ಅವರು ವಾದಿಸಿದ್ದಾರೆ. ಅದು ಮಾನವೀಯ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದವರು ಪ್ರಸ್ತಾಪಿಸಿದರು.

"ನೀವಿಂದು ಸ್ವತಂತ್ರರು, ನೀವು ನಿಮ್ಮ ದೈವ ಮಂದಿರಗಳಿಗೆ ಯಾವುದೇ ಅಡ್ಡಿ ಆತಂಕವಿಲ್ಲದೆ ಸ್ವತಂತ್ರರಾಗಿ ಹೋಗಬಹುದು. ಮಸೀದಿಗಳಿಗೂ ಇತರ ಪ್ರಾರ್ಥನಾಲಯಗಳಿಗೂ ನೀವು ಸ್ವತಂತ್ರರಾಗಿ ಹೋಗಬಹುದು. ಈ ಪಾಕಿಸ್ತಾನ ರಾಷ್ಟ್ರದಲ್ಲಿ ನಿಮಗೆ ಅದಕ್ಕೆ ಸ್ವಾತಂತ್ರ್ಯವಿದೆ. ನಿಮ್ಮ ಮತ, ನಿಮ್ಮ ಜಾತಿ, ನಿಮ್ಮ ನಂಬಿಕೆ ಯಾವುದೇ ಆಗಿದ್ದರೂ ಸರಕಾರದ ವ್ಯವಹಾರಕ್ಕೆ ಅದರೊಂದಿಗೆ ಯಾವುದೇ ಸಂಬಂಧವಿಲ್ಲ" ಎಂದು ಪಾಕಿಸ್ತಾನದ ರಾಷ್ಟ್ರಪಿತ 'ಖಾಯಿದೆ ಆಝಂ' ಮುಹಮ್ಮದಲಿ ಜಿನ್ನಾ ರಾಜ್ಯ ವ್ಯವಸ್ಥಾ ಸಭೆಯಲ್ಲಿ ಮಾಡಿದ ಇತಿಹಾಸ ಪ್ರಸಿದ್ಧ ಭಾಷಣದ ಭಾಗವನ್ನು ಅವರು ಮನವಿಯಲ್ಲಿ ಉದ್ಧರಿಸಿರುವರು.

ಪಾಕ್ ಸುಪ್ರೀಂ ಕೋರ್ಟಿನ ಮಾಜಿ ನ್ಯಾಯಾಮೂರ್ತಿ ಮಿ. ಫಕ್ರುದ್ದೀನ್ ಜಿ. ಇಬ್ರಾಹಿಂ, ಪಶ್ಚಿಮ ಪಾಕಿಸ್ತಾನ ಹೈಕೋರ್ಟಿನ ಮಾಜಿ ನ್ಯಾಯಾಧಿಪತಿಗಳಾದ ಮಿ. ಮುಹಮ್ಮದ್ ಅಲಿ ಸಯೀದ್ ಮತ್ತು ಫರ್ಝಲ್ ಘನಿ ಖಾನ್, ಸಿಂಧ್ ಹೈಕೋರ್ಟಿನ ಮಾಜಿ ನ್ಯಾಯಾಧಿಪತಿಗಳಾದ ಮಿ. ಅಬ್ದುಲ್ ಹಫೀಝ್ ಮೇಮನ್, ಮಿ. ಎ. ಕ್ಯೂ. ಹಾಲೆಪೋಟ, ಮಿ. ಜಿ. ಎಂ. ಶಾ ಈ ಆರು ಮಂದಿ ಪ್ರಸ್ತುತ ಮನವಿಯನ್ನು ಸಲ್ಲಿಸಿದವರಾಗಿದ್ದಾರೆ.

("ವಿನ್ನಿಪೆಗ್ ಫ್ರೀ ಪ್ರೆಸ್", ಲಂಡನ್: 24-2-'85)

## ಚುಟುಕು - ಚೂರು

* "ಚುನಾವಣೆಗಳಲ್ಲಿ ಮಾಡಲಾಗುವ ಮತದಾನವೂ ಬೈಅತ್‌ಗೆ ಸಮಾನವಾಗಿದೆ." (ಪ್ರಶ್ನೆಯೊಂದಕ್ಕೆ ಉತ್ತರ: 'ಸನ್ಮಾರ್ಗ' ಫೆಬ್ರುವರಿ 3-9, 1985).

* "1985ರ ಫೆಬ್ರುವರಿಯಲ್ಲಿ ಸೇರಿದ ಜಮಾಅತ್ ಕೇಂದ್ರ ಸಲಹಾ ಮಂಡಳಿಯು, ಜಮಾಅತ್ ಸದಸ್ಯರು ಪಾರ್ಲಿಮೆಂಟ್ ಮತ್ತು ಎಸೆಂಬ್ಲಿ ಚುನಾವಣೆಗಳಲ್ಲಿ ಕೆಲವು ಶರ್ತಗಳನ್ನು ಪಾಲಿಸಿ ತಮ್ಮ ಮತ ಚಲಾಯಿಸಬಹುದೆಂದು ತೀರ್ಮಾನಿಸಿದೆ. ಜಮಾಅತ್‌ನ ಪ್ರಸ್ತುತ ಪ್ರಧಾನ ಉದ್ದೇಶಗಳೊಂದಿಗೆ ಸಹಮತವಿರುವ ಉಮೇದ್ವಾರನು ಮಾತ್ರ ಅವನು ಮುಸಲ್ಮಾನನಾಗಿರಲಿ, ಮುಸ್ಲಿಮೇತರನಾಗಿರಲಿ – ನಮ್ಮ ಮತ ಪಡೆಯಲು ಅರ್ಹನು."

('ಸನ್ಮಾರ್ಗ' ಮಾರ್ಚ್ 3-9, 1985).

☐ ಕಳೆದ ಚುನಾವಣೆಗಳಲ್ಲಿ ಜಮಾತೆ ಇಸ್ಲಾಮಿ ಪಂಥದವರು ಯಾರಿಗೆಲ್ಲಾ ಬೈಅತ್ ಮಾಡಿದರೋ?

ಆದರೆ ಮೌದೂದಿ ಸಾಹೇಬ್ ಹೇಳುವುದನ್ನು ನೋಡಿರಿ:

"ಇಂದು ವಿಧಾನಸಭೆ ಇತ್ಯಾದಿಗಳಲ್ಲಿ ಸದಸ್ಯರಾಗುವುದು ಹರಾಂ (ನಿಷಿದ್ಧ) ಆಗಿದೆ. ಅವರಿಗೆ ಓಟು ನೀಡುವುದು ಕೂಡ ಹರಾಂ. ಉಮೇದ್ವಾರರಾಗಿ ನಿಲ್ಲುವವರನ್ನು, ಅವರು ಇಂದಿನ ಚುನಾವಣಾ ವ್ಯವಸ್ಥೆಯ ಆಧಾರದಲ್ಲಿ ನಿಯಮ ನಿರ್ಮಾಣ ಮಾಡಲಿಕ್ಕೋ ರೂಢಿಯಲ್ಲಿರುವ ಕಾನೂನುಗಳಿಗೆ ಬೆಂಬಲ ನೀಡಲಿಕ್ಕೋ ನಾವು ಅವರನ್ನು ಅಭಿಪ್ರಾಯಪಟ್ಟು ಕಳುಹಿಸುತ್ತೇವೆ ಎಂಬುದೇ ಮತದಾನದ ಅರ್ಥವಾಗಿದೆ. ಅದು ಏಕದೇವ ವಿಶ್ವಾಸಕ್ಕೆ ಸಂಪೂರ್ಣ ವಿರುದ್ಧವಾಗಿರುತ್ತದೆ." (ರಸಾಯಿಲ್ ವ ಮಸಾಯಿಲ್)

ಪರಿಸ್ಥಿತಿ ಹೀಗಿರುವಾಗ ಕಳೆದ ಚುನಾವಣೆಗಳಲ್ಲಿ ಮತದಾನ ಮಾಡಿದ ಮೌದೂದಿ ಅನುಯಾಯಿಗಳ ಸ್ಥಿತಿ ಯೇನು?

—ಅ. ಖಾ.

# ಖುರ್‌ಆನ್ ನಿಷೇಧ

ಖುರ್‌ಆನನ್ನು ನಿಷೇಧಿಸಬೇಕೆಂದು ಕೋರಿ ಕಲ್ಕತ್ತಾ ಹೈಕೋರ್ಟಿನಲ್ಲಿ ಇತ್ತೀಚೆಗೆ ಚಾಂದ್‌ಮಲ್ ಚೋಪ್ರಾ ಮತ್ತು ಶಿತಾಲ್ ಸಿಂಗ್ ಸಲ್ಲಿಸಿದ ರಿಟ್ ಮನವಿಯು ಮುಸ್ಲಿಮರನ್ನು ಕಳವಳಕ್ಕೀಡುಮಾಡಿತು. ಭಾರತದಲ್ಲಿ ಮಾತ್ರವಲ್ಲ, ನೆರೆರಾಷ್ಟ್ರಗಳಾದ ಬಂಗ್ಲಾ ದೇಶದಲ್ಲೂ ಪಾಕಿಸ್ತಾನದಲ್ಲೂ ಪ್ರತಿಭಟನೆಯ ಸುಳಿಗಳು ಎದ್ದಿವೆ.

"ಖುರ್‌ಆನ್ ಹಿಂಸೆಗೆ ಪ್ರಚೋದನೆ ನೀಡುವ ಗ್ರಂಥ. ವಿವಿಧ ಮತೀಯ ಸಮುದಾಯಗಳ ಮಧ್ಯೆ ಅದು ದ್ವೇಷ ಮತ್ತು ವೈಮನಸ್ಸನ್ನು ಹರಡುತ್ತದೆ. ಖುರ್‌ಆನನ್ನು ಪ್ರಕಟಿಸುವುದೆಂದರೆ ಭಾರತೀಯ ದಂಡ ಸಂಹಿತೆಯ 153-ಎ ಹಾಗೂ 295-ಎ ವಿಧಿಯನುಸಾರ ಶಿಕ್ಷಾರ್ಹ ಅಪರಾಧ ಎಸಗಿದಂತೆ. ಆದ ಕಾರಣ ಖುರ್‌ಆನಿನ ಎಲ್ಲ ಪ್ರತಿಗಳಿಗೆ ಅಪ ರಾಧ ದಂಡ ಸಂಹಿತೆ (1973)ಯ 95 ವಿಧಿಯಂತೆ ಮುಟ್ಟುಗೋಲು ಹಾಕಬೇಕು" ಎಂದು ಮನವಿಯಲ್ಲಿ ವಾದಿಸಲಾಗಿದೆ.

ಮನವಿದಾರರು ಆರ್ಯ ಸಮಾಜದೊಂದಿಗೆ ಸಂಬಂಧವುಳ್ಳ ವ್ಯಕ್ತಿಗಳೆಂದು ತಿಳಿದು ಬಂದಿದೆ. ಆರ್ಯ ಸಮಾಜಿಗಳ 'ಧರ್ಮಗ್ರಂಥ'ವಾದ 'ಸತ್ಯಾರ್ಥ ಪ್ರಕಾಶ'ವು ವಿಭಿನ್ನ ಧರ್ಮಗಳ ನಡುವೆ ವೈರವನ್ನೂ ವೈಮನಸ್ಸನ್ನೂ ಹಬ್ಬಿಸಲು ಪ್ರಚೋದನೆ ನೀಡುವ ಗ್ರಂಥವಾಗಿದ್ದರೂ ಅದು ಭಾರತದಲ್ಲಿ ನಿರ್ವಿಘ್ನ ಪ್ರಚರಿಸಲ್ಪಡುತ್ತಿದೆ. ಖುರ್‌ಆನನ್ನು ನಿಷೇಧಿಸಬೇಕೆಂದು ಕೋರಿದ 'ಸತ್ಯಾರ್ಥ ಪ್ರಕಾಶ'ದ ಅನುಯಾಯಿಗಳಿಗೆ ನೈತಿಕ ಪ್ರಜ್ಞೆ ಇದೆಯೇ ?

ಪವಿತ್ರ ಖುರ್‌ಆನ್ ಸಮಸ್ತ ಮಾನುಕುಲಕ್ಕೆ ಉಪದೇಶ ಗ್ರಂಥವಾಗಿದೆ. ಅದರ ಪ್ರಥಮ ಅಧ್ಯಾಯದ ಮೊದಲ ವಚನ ಆರಂಭವಾಗುವುದೇ "ಅಲ್‌ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್" ಎಂದಾಗಿದೆ. ಅಂದರೆ, "ಸರ್ವ ಲೋಕ ಪರಿಪಾಲಕನಾದ ಸರ್ವನಾಥನಿಗೆ ಸಕಲ ಸ್ತುತಿಸ್ತೋತ್ರಗಳು ಸಲ್ಲುತ್ತವೆ." ಅದು ಧರ್ಮ ಸಾಮರಸ್ಯವನ್ನೂ ಭ್ರಾತೃ ತ್ವವನ್ನೂ ಉಪದೇಶಿಸುತ್ತದೆ. ಪವಿತ್ರ ಖುರ್‌ಆನ್ ಎಂದಿಗೂ ಕಾಲಬಾಹಿರವಾಗಲಾರದು.

ಖುರ್‌ಆನಿಗೆ ನಿಷೇಧ ಹೇರಬೇಕೆಂದು ಕೋರಿ ಸಲ್ಲಿಸಲಾದ ರಿಟ್ ಅರ್ಜಿಯನ್ನು ಮೇ 13 ರಂದು ಕಲ್ಕತ್ತಾ ಹೈಕೋರ್ಟು ತಳ್ಳಿಹಾಕಿದ್ದು ನೆಮ್ಮದಿಯನ್ನುಂಟು ಮಾಡಿದೆ.

ಪಾಕಿಸ್ತಾನದ ಅಧ್ಯಕ್ಷ ಜಿಯಾ ಉಲ್‌ಹಕ್ ಪ್ರಸ್ತುತ ರಿಟ್ ಮನವಿ ಧಾರ್ಮಿಕ ಅಸಹನೆಯನ್ನು ತೋರಿಸುತ್ತಿ ರುವುದಾಗಿ ಟೀಕಿಸಿದರೆಂದು ವರದಿಯಾಗಿದೆ. ಅದು ಅತ್ಯಂತ ಹಾಸ್ಯಾಸ್ಪದ ಸಂಗತಿಯಾಗಿರುತ್ತದೆ. ಮುಸ್ಲಿಮರಲ್ಲಿ ಕೆಲ ವಿಭಾಗದವರು ಖುರ್‌ಆನಿನ ನೂರಾರು ವಚನಗಳು ಅಸಿಂಧು (ಮಂಸೂಖ್) ಎಂದು ಹೇಳುತ್ತಾರೆ. ಕೆಲವು ಪ್ರವಾದಿ ಗಳ ಬಗ್ಗೆ ಅಸಂಬದ್ಧ ವಿಚಾರಗಳು ಉಲ್ಲೇಖಿಸಲ್ಪಟ್ಟ ಖುರ್‌ಆನ್ ವ್ಯಾಖ್ಯಾನ ಗ್ರಂಥಗಳೂ ಪಾಕಿಸ್ತಾನದಲ್ಲಿ ಪ್ರಚಾರದಲ್ಲಿವೆ. ಆದರೆ ಅಹ್ಮದೀ ಮುಸ್ಲಿಮರು ಪವಿತ್ರ ಖುರ್‌ಆನಿನ ಒಂದೇ ಒಂದು ವಚನವನ್ನಾಗಲಿ ಅಸಿಂಧು ಎಂದು ಒಪ್ಪುವುದಿಲ್ಲ. ಇಸ್ಲಾಂ ಧರ್ಮಕ್ಕೆ ವಿರುದ್ಧವೆಂದು ಸಾಬೀತು ಪಡಿಸಲಾಗುವ ಯಾವ ವಿಚಾರವಾಗಲಿ ಅಹ್ಮದೀಯರ ಯಾವುದೇ ಸಾಹಿತ್ಯ ದಲ್ಲಿ ಕಾಣಲು ಸಾಧ್ಯವಿಲ್ಲ. ಹಾಗಿದ್ದರೂ ಪಾಕಿಸ್ತಾನದಲ್ಲಿ ಅಹ್ಮದೀಯರು ಪ್ರಕಟಿಸಿದ ಖುರ್‌ಆನ್ ಭಾಷಾಂತರಗಳಿಗೆ ಸುಮಾರು ನಾಲ್ಕು ವರ್ಷಗಳ ಮೊದಲೇ ಮುಟ್ಟುಗೋಲು ಹಾಕಲಾಗಿದೆ. ಇದು ಜಿಯಾರ ಧಾರ್ಮಿಕ ಅಸಹನೆಯನ್ನು ತೋರಿಸುವುದಿಲ್ಲವೇ?

ಮಾತ್ರವಲ್ಲ, ಕಳೆದ ವರ್ಷ ಎಪ್ರಿಲ್ 26ರಂದು ಜಿಯಾ ಉಲ್‌ಹಕ್ ಅಹ್ಮದೀಯರ ವಿರುದ್ಧ ಒಂದು ಆರ್ಡಿನನ್ಸನ್ನು ಹೊರಡಿಸಿ, ಅಹ್ಮದೀಯರು ಮುಸ್ಲಿಮರೆಂದು ಯಾವುದೇ ರೀತಿಯಲ್ಲಿ ತೋರ್ಪಡಿಸುವುದು ಶಿಕ್ಷಾರ್ಹ ಅಪರಾಧವೆಂದು ಸಾರಿ ದ್ದಾರೆ. ಇದು ಧಾರ್ಮಿಕ ಸಹಿಷ್ಣುತೆಯೇ?

"ನೀವು ಮಾಡದ ಕಾರ್ಯವನ್ನು ಇತರರಿಗೆ ಹೇಳುವಿರಾ? ನೀವು ಮಾಡದುದನ್ನು ಇನ್ನೊಬ್ಬರಿಗೆ ಹೇಳುವುದೆಂದರೆ ಅಲ್ಲಾಹನಿಗೆ ಅದು ಅತಿ ಅಪ್ರಿಯವಾದ ಸಂಗತಿಯಾಗಿದೆ" ಎಂದು ಖುರ್‌ಆನ್ ಹೇಳುವುದನ್ನು ಜಿಯಾ ತಿಳಿದುಕೊಳ್ಳಲಿ.

ಖುರ್‌ಆನ್‌ನ್ನು ನಿಷೇಧಿಸಬೇಕೆಂದು ಬಯಸಿ ಸಲ್ಲಿಸಲಾದ ಪ್ರಸ್ತುತ ರಿಟ್ ಮನವಿ ಖಂಡನಾರ್ಹ. ಆದರೆ ಹಾಗೆ ಹೇಳಲು ಜಿಯಾಗೆ ನೈತಿಕ ಹಕ್ಕಿಲ್ಲ.


—ಸಂಪಾದಕ.

# AHMADIYYA ENGLISH LITERATURE

| | | |
|---|---|---|
| 1. | Introduction to the Study of the Holy Quran<br>By Hazrat Mirza Bashiruddin Mahmood Ahmad | 16-00 |
| 2. | The Philosophy of the Teachings of Islam<br>By Hazrat Mirza Ghulam Ahmad | 6-00 |
| 3. | Characteristics of the Quranic Teachings<br>By Hazrat Mirza Bashiruddin Mahmood Ahmad | 2-00 |
| 4. | The Holy Prophet Muhammad<br>By Hazrat Mirza Bashiruddin Mahmood Ahmad | 2-00 |
| 5. | Ahmadiyya Movement<br>By Hazrat Mirza Bashiruddin Mahmood Ahmad | 2-25 |
| 6. | What is Ahmadiyyat?<br>By Hazrat Mirza Bashiruddin Mahmood Ahmad | 1-50 |
| 7. | The Economic Structure of Islamic Society<br>By Hazrat Mirza Bashiruddin Mahmood Ahmad | 2-50 |
| 8. | The New World Order of Islam<br>By Hazrat Mirza Bashiruddin Mahmood Ahmad | 2-25 |
| 9. | Truth About Khatme Nabuwat<br>By Hazrat Mirza Bashir Ahmed M.A. | 2-50 |
| 10. | Islam and Slavery By Hazrat Mirza Bashir Ahmad, M.A. | 1-25 |
| 11. | Forty Gems of Beauty By Hazrat Mirza Bashir Ahmad M.A. | 2-50 |
| 12. | Our Teachings By Hazrat Mirza Ghulam Ahmad | 1-00 |
| 13. | An Interpretation of Islam By Laura Viccia Vaglieri | 3-00 |
| 14. | Muhammad the Most Successful Prophet<br>By Moulana Sharif Ahmad Amini | 1-00 |
| 15. | The Goal of Man and the Way to Reach it<br>By Muhammad Karimullah Naujawan & Dr Hafiz Saleh Muhammad Allahdin, Ph D | 1-50 |
| 16. | Jesus in India By Hazrat Mirza Ghulam Ahmad | 2-25 |
| 17. | A Review of Christianity By Hazrat Mirza Ghulam Ahmad | 1-00 |
| 18. | Four Questions by a Christian and their Answers<br>By Hazrat Mirza Ghulam Ahmad | 1-25 |
| 19 | How to get rid of the Bondage of Sin<br>By Hazrat Mirza Ghulam Ahmad | 1-25 |
| 20. | Where did Jesus Die? By J D Shams | 5-00 |
| 21. | Did Jesus Redeem Mankind? | 2-50 |
| 22. | The Tomb of Jesus By Sufi Mutiur Rahman Bengalee, M.A. | 1-00 |
| 23. | The Christian Doctrine of Atonement<br>By Dr. M. M. Sadiq, D. D, LL,D, S S.P., (London) | 1-00 |
| 24. | Why did early Christians accept Islam? By J D. Shams | 1-00 |
| 25. | Latest Findings about Jesus Christ | 0-50 |

Write to : **Secretary for Mission Works.**
Sadr Anjuman Ahmadiyya, Qadian-143516 (Punjab)

Regd. with the Registrar of Newspapers for India. Regd No. R. No. 27354/75
YUGARASHMI Kannada Quarterly, May 1985 / Hijrath 1364




**English Translation of the**

**HOLY QURAM**

**with Arabic Text & Extensive Index**

Price: Rs. 20-00
Postage Extra

Write to :

**NAZIR DAWAT O-TABLIGH**
Sadr Anjuman Ahmadiyya
Qadian–143 516 [Punjab]

ಎಲ್ಲಾ ಬಗೆ ಹಂಚುಗಳಿಗೆ ವಿಚಾರಿಸಿರಿ :

# STANDARD TILERY

## KADUR

CHICKMANGALUR DISTRICT

★

RAJA MARK Roofing Tiles, Ridges, Wall Tiles
Span Tiles, Floorings, Decorative Tiles, Ceilings, Etc, Etc.

**All Clay Products Available.**

Edited and Published by Muhammad Yusuf on behalf of Jamath Ahmadiyya
at 10-23-1008, Ansari Road, Bunder, Mangalore-575 001. Phone: 32039
Printed at Karavali Printers, Azizuddin Road, Bunder, Mangalore-575 001.